ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 13 | ಸಂಚಿಕೆ 49 | ಡಿಸೆಂಬರ್ 2–8, 2019 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com

ಕಾನ್ಪುರ ಕಮ್ಯುನಿಸ್ಟ ಸಮ್ಮೇಳನ 1925



100



ಮಹಾರಾಷ್ಟ್ರ: ಬಟ್ಟಬಯಲಾದ ಬಿಜೆಪಿ-ಆರ್‌ಎಸ್‌ಎಸ್



ಅಂಕಿ ಅಂಶಗಳನ್ನು ಬಚ್ಚಿಡುತ್ತಿರುವ ಮೋದಿ ಸರ್ಕಾರ



ನಿರುದ್ಯೋಗಿ ಎಸ್.ಎಂ.ಕೃಷ್ಣಗೆ ಕೆಲಸ ಕೊಡಿ

ಕಾರ್ಮಿಕರ ಸಾರ್ವತ್ರಿಕ ಮುಷ್ಕರಕ್ಕೆ ಬೆಂಬಲವಾಗಿ ಜನವರಿ 8ರಂದು ಗ್ರಾಮೀಣ ಹರತಾಳ

ಎಐಕೆಎಸ್ ನ ಕೇಂದ್ರೀಯ ಕಿಸಾನ್ ಸಮಿತಿ ನಿರ್ಧಾರ

ನವದೆಹಲಿಯಲ್ಲಿ ನವಂಬರ್ 21 ಮತ್ತು 22ರಂದು ಸಭೆ ಸೇರಿದ ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್)ದ ಕೇಂದ್ರೀಯ ಕಿಸಾನ್ ಸಮಿತಿ (ಸಿಕೆಸಿ) ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಕರೆ ನೀಡಿರುವ ಜನವರಿ 8, 2020ರ ಅಖಿಲ ಭಾರತ ಸಾರ್ವತ್ರಿಕ ಮುಷ್ಕರಕ್ಕೆ ಸಕ್ರಿಯ ಬೆಂಬಲ ನೀಡಲು ಸರ್ವಸಮ್ಮತಿಯಿಂದ ನಿರ್ಧರಿಸಿದೆ. ಕೇಂದ್ರೀಯ ಕಾರ್ಮಿಕ ಸಂಘಟನೆಗಳು ನಿಜವಾಗಿಯೂ ಭಾರತದ ಜನತೆಯ ಜ್ವಲಂತ ಸಮಸ್ಯೆಗಳನ್ನು ಎತ್ತಿಕೊಂಡಿವೆ. ಎಲ್ಲ ಶ್ರಮಜೀವಿ ಜನವಿಭಾಗಗಳಲ್ಲಿ ಬಿಜೆಪಿ ಸರಕಾರದ ಧೋರಣೆಗಳ ವಿರುದ್ಧ ಅಪಾರ ಅಸಂತೃಪ್ತಿ ಮತ್ತು ಕ್ರೋಧ ತುಂಬಿದೆ. ರೈತಾಪಿ ಜನಗಳ ಸಮಸ್ಯೆಗಳನ್ನು ಎತ್ತಿ ತೋರಲು ಸರ್ವಪ್ರಯತ್ನ ನಡೆಸಬೇಕು, ಮತ್ತು ಚುನಾವಣೆಗಳ ನಂತರದ ಈ ಮೊದಲ ದೇಶವ್ಯಾಪಿ ಮುಷ್ಕರವನ್ನು ಸಂಪೂರ್ಣ ಹರತಾಳ ನಡೆಸುವ ಮೂಲಕ ಒಂದು ಬೃಜತ್ ಪ್ರತಿಭಟನೆಯಾಗಿ ಮಾಡಬೇಕು ಎಂದಿರುವ ಸಿಕೆಸಿ, ಜನವರಿ 8, 2020ರಂದು ಗ್ರಾಮೀಣ ಹರತಾಳವನ್ನು ಆಚರಿಸಬೇಕು ಎಂದು ನಿರ್ಧರಿಸಿದೆ.

ಎಐಕೆಎಸ್ ಇದನ್ನೊಂದು ಚಾರಿತ್ರಿಕ ಮುಷ್ಕರವಾಗಿ ಮಾಡಲು ಸಿಐಟಿಯು ಮತ್ತು ಅಖಿಲ ಭಾರತ ಕೃಷಿ ಕೂಲಿಗಾರರ ಸಂಘದೊಡನೆ ಕೈಜೋಡಿಸಿ ಎಲ್ಲ ಜನವಿಭಾಗಗಳ, ವಿವಿಧ ವರ್ಗ ಮತ್ತು ಸಾಮೂಹಿಕ ಸಂಘಟನೆಗಳ ಹಾಗೂ ನಾಗರಿಕ ಸಾಮಾಜಿಕ ಗುಂಪುಗಳ ಬೆಂಬಲವನ್ನು ಕ್ರೋಡೀಕರಿಸಲು ಮುತುವರ್ಜಿ ವಹಿಸಲಾಗುವುದು; ಮುಷ್ಕರದ ಸಿದ್ಧತೆಯಾಗಿ ಸಂಬಂಧಪಟ್ಟ ಜನವಿಭಾಗಗಳ ನಿರ್ದಿಷ್ಟ ಪ್ರಶ್ನೆಗಳ ಮೇಲೆ ಪ್ರಚಾರಾಂದೋಲನ ನಡೆಸಲಾಗುವುದು ಎಂದಿರುವ ಸಿಕೆಸಿ ಜನವರಿ 8ರಂದು ಇತರ ಎಲ್ಲ ಎಡ, ಪ್ರಜಾಪ್ರಭುತ್ವವಾದಿ ಮತ್ತು ಪ್ರಗತಿಪರ ಮನೋಭಾವದ ಸಂಘಟನೆಗಳನ್ನು ಒಳಗೊಂಡು ಬೃಹತ್ ರಾಸ್ತಾರೋಕೋ, ರೈಲ್ ರೋಕೋಗಳನ್ನು ನಡೆಸಲಾಗುವುದು ಎಂದಿದೆ.

ಸಿಕೆಸಿ ಸಭೆ, ನರೇಂದ್ರ ಮೋದಿ ಸರಕಾರ ತನ್ನ ರೈತ–ವಿರೋಧಿ ಮತ್ತು ಕಾರ್ಪೊರೇಟ್–ಪರ ಧೋರಣೆಗಳನ್ನು ಮುಂದುವರೆಸುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದೆ. ಅಯೋಧ್ಯಾ ತೀರ್ಪು ಬಾಬ್ರಿ ಮಸೀದಿ ಧ್ವಂಸ ಒಂದು ಕ್ರಿಮಿನಲ್ ಕೃತ್ಯ ಎಂದು ಹೇಳಿದರೂ ಈ ಅಪರಾದ ಎಸಗಿದವರಿಗೇ ವಿವಾದಿತ ಭೂಮಿಯನ್ನು ಕೊಟ್ಟು ನ್ಯಾಯಕ್ಕೆ ಅಪಚಾರವಾಗಿದೆ ಎಂದು ಸಿಕೆಸಿ ಗಮನಿಸಿದೆ.

ಜಮ್ಮು ಮತ್ತು ಕಾಶ್ಮೀರದ ಜನತೆಗೆ ಪ್ರಜಾಪ್ರಭುತ್ವ ಹಕ್ಕುಗಳನ್ನು ನಿರಾಕರಿಸಲಾಗಿದೆ, ಅವರ ಮೇಲೆ ದಮನವನ್ನು ಹರಿಯಬಿಡಲಾಗಿದೆ ಎಂದಿರುವ ಸಿಕೆಸಿ ಅಲ್ಲಿಯ ಸೇಬು ರೈತರು ಹಾಗೂ ಕೇಸರಿ ಮತ್ತಿತರ ಬೆಳೆಗಳ ಸಾಗುವಳಿದಾರರ ಜೀವನಾಧಾರಗಳನ್ನು ಉದ್ದೇಶಪೂರ್ವಕವಾಗಿ ನಾಶಪಡಿಸಲಾಗಿದೆ ಎಂದು ಖಂಡಿಸಿದೆ. ಇದರಿಂದ 12ಸಾವಿರ ಕೋಟಿ ರೂ.ಗಳಿಗಿಂತಲೂ ಹೆಚ್ಚಿನ ನಷ್ಟ ಅಲ್ಲಿನ ರೈತರಿಗಾಗಿದೆ. ಇದಕ್ಕೆ ಬಿಜೆಪಿ ಸರಕಾರವೇ ಏಕಮಾತ್ರ ಹೊಣೆ, ಅದು ತನ್ನ ವಿನಾಶಕಾರೀ ಮಾರ್ಗವನ್ನು ತ್ಯಜಿಸಬೇಕು, ರೈತರಿಗಾಗಿರುವ ನಷ್ಟಗಳನ್ನು ತುಂಬಿ ಕೊಡಬೇಕು ಎಂದು ಸಿಕೆಸಿ ಆಗ್ರಹಿಸಿದೆ.

ಝಾರ್ಖಂಡ್‌ನಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿ ಮತ್ತು ಅದರ ಮಿತ್ರರನ್ನು ಸೋಲಿಸಲು ಕೆಲಸ ಮಾಡಬೇಕು ಎಂದು ಸಿಕೆಸಿ ಎಲ್ಲರಿಗೂ ಕರೆ ನೀಡಿದೆ.

ನವಂಬರ್ 29 ಮತ್ತು 30ರಂದು ಅಖಿಲ ಭಾರತ ಕಿಸಾನ್ ಸಂಘರ್ಷ ಸಮನ್ವಯ ಸಮಿತಿಯ ರಾಷ್ಟ್ರೀಯ ಸಮಾವೇಶ ನಡೆಯಲಿದೆ, ಅದನ್ನು ಯಶಸ್ವಿಗೊಳಿಸಲು ಎಐಕೆಎಸ್ ಕೆಲಸ ಮಾಡುತ್ತದೆ, ಈ ಸಮಾವೇಶ ಐಕ್ಯ ಹೋರಾಟಗಳ ಮುಂದಿನ ದಾರಿಯನ್ನು ಯೋಜಿಸುತ್ತದೆ ಎಂದು ಅದು ಹೇಳಿದೆ.

ಕಾರ್ಪೊರೇಟ್ ವಲಯದ ಆಣತಿಯಂತೆ ವರ್ತಿಸುತ್ತಿರುವ ಬಿಜೆಪಿ ಸರಕಾರ ಹಲವಾರು ರೈತ–ವಿರೋಧಿ ಶಾಸನಗಳನ್ನು ತರುವ ಮತ್ತು ಮುಕ್ತ ವ್ಯಾಪಾರ ಒಪ್ಪಂದಗಳನ್ನು ಮಾಡಿಕೊಳ್ಳುವ ಅಪಾಯವಿದೆ, ಈ ಬಗ್ಗೆ ಜನತೆ ಎಚ್ಚರದಿಂದಿರಬೇಕು, ದೇಶವನ್ನು ಕೋಮು ಆಧಾರದಲ್ಲಿ ಧ್ರುವೀಕರಣಗೊಳಿಸುವ ಪ್ರಯತ್ನಗಳು ನಡೆಯಲಿವೆ, ಅವನ್ನೂ ಸಾಧ್ಯವಾದಷ್ಟು ವಿಶಾಲವಾದ ಐಕ್ಯತೆಯನ್ನು ಕಟ್ಟಿ ಬೆಳೆಸುವ ಮೂಲಕ ಎದುರಿಸಲಾಗುವುದು ಎಂದು ಸಿಕೆಸಿ ಹೇಳಿದೆ.

ಆರ್‌ಎಸ್‌ಪಿ ಪ್ರಧಾನ ಕಾರ್ಯದರ್ಶಿ ಕ್ಷಿತಿ ಗೋಸ್ವಾಮಿ ನಿಧನ –ಸಿಪಿಐ(ಎಂ) ಶ್ರದ್ಧಾಂಜಲಿ

ಆರ್.ಎಸ್.ಪಿ. (ರಿವೊಲ್ಯುಷನರಿ ಸೋಶಿಯಲಿಸ್ಟ್ ಪಾರ್ಟಿ)ಯ ಪ್ರಧಾನ ಕಾರ್ಯದರ್ಶಿ ಕ್ಷಿತಿ ಗೋಸ್ವಾಮಿಯವರು ಚೆನ್ನೈನ ಅಪೋಲೋ ಆಸ್ಪತ್ರೆಯಲ್ಲಿ ನವಂಬರ್ 24ರಂದು ನಿಧನರಾಗಿದ್ದಾರೆ. ಅವರು ಅಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಈ ಅನಿರೀಕ್ಷಿತ ಸಾವಿನ ಬಗ್ಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ತನ್ನ ಆಳವಾದ ದುಃಖವನ್ನು ವ್ಯಕ್ತಪಡಿಸಿದೆ.

ಅವರ ಸಾವು ಆರ್‌ಎಸ್‌ಪಿ ಯಲ್ಲಿ ಮಾತ್ರವಲ್ಲ ಪಶ್ಚಿಮ ಬಂಗಾಲದ ಎಡರಂಗದಲ್ಲಿ ಮತ್ತು ಇಡೀ ದೇಶದ ಎಡ ಆಂದೋಲನದಲ್ಲಿ ಒಂದು ತೆರವನ್ನು ಉಂಟುಮಾಡಿದೆ ಎನ್ನುತ್ತ ಸಿಪಿಐ(ಎಂ) ಪೊಲಿಟ್‌ಬ್ಯುರೊ ಕ್ಷಿತಿ ಗೋಸ್ವಾಮಿಯವರ ಕುಟುಂಬಕ್ಕೆ ಮತ್ತು ಆರ್‌ಎಸ್‌ಪಿಯ ಎಲ್ಲ ಸಂಗಾತಿಗಳಿಗೆ ಸಂತಾಪಗಳನ್ನು ವ್ಯಕ್ತಪಡಿಸಿದೆ.

‘ಬಾಬಾ’ ರಾಂದೇವ್ ಟಿಪ್ಪಣಿಗಳಿಗೆ ಡಿಎಸ್‌ಎಂಎಂ ಖಂಡನೆ

ಪೆರಿಯಾರ್ ಮತ್ತು ಡಾ.ಅಂಬೇಡ್ಕರ್ ಬೆಂಬಲಿಗರು ಹಾಗೂ ಕಾರ್ಯಕರ್ತರು ‘ವೈಚಾರಿಕ ಭಯೋತ್ಪಾದನೆ’ಯಲ್ಲಿ ತೊಡಗಿರುವವರು ಎಂದು ಹೀಯಾಳಿಸುವ ‘ಬಾಬಾ’ ರಾಂದೇವ್ ಟಿಪ್ಪಣಿಗಳನ್ನು ದಲಿತ್ ಶೋಷಣ್ ಮುಕ್ತಿ ಮಂಚ್(ಡಿಎಸ್‌ಎಂಎಂ) ಬಲವಾಗಿ ಖಂಡಿಸಿದೆ.

ಅವರಷ್ಟೇ ಅಪ್ರಾಮಾಣಿಕವಾದ ರಿಪಬ್ಲಿಕ್ ಟಿವಿ ವಾಹಿನಿಯ ಸಂದರ್ಶನದಲ್ಲಿ ಅವರು ಹೇಳಿರುವ ಮಾತುಗಳು ಪೆರಿಯಾರ್ ಮತ್ತು ಡಾ.ಅಂಬೇಡ್ಕರ್ ಬೆಂಬಲಿಗರಿಗೆ ಮಾಡಿರುವ ಅವಮಾನವಷ್ಟೇ ಅಲ್ಲ, ಸಾಮಾಜಿಕ ನ್ಯಾಯಕ್ಕಾಗಿ, ಆರೆಸ್ಸೆಸ್ ಮತ್ತು ಬಿಜೆಪಿ ಪ್ರಚಾರ ಮಾಡುತ್ತಿರುವ ಬ್ರಾಹ್ಮಣವಾದಿ ಸಾಮಾಜಿಕ ವ್ಯವಸ್ಥೆಯ ಶೋಷಣೆಯ ವಿರುದ್ಧ ದೀರ್ಘಕಾಲದಿಂದ ಹೋರಾಡುತ್ತಿರುವ ಶಕ್ತಿಗಳ ಮೇಲೆ ಬೇಕೆಂದೇ ಮಾಡಿರುವ ದಾಳಿ ಎಂದು ಡಿಎಸ್‌ಎಂಎಂ ಹೇಳಿದೆ.

ಈ ಕುಖ್ಯಾತ ‘ಬಾಬಾ’ ಮತ್ತು ವ್ಯಾಪಾರೀ ಕುಳ ಬಿಜೆಪಿಯ ಕಟ್ಟಾ ಬೆಂಬಲಿಗ ಎಂಬುದು ಎಲ್ಲರಿಗೂ ತಿಳಿದಿರುವ ಸಂಗತಿ. ಇದು ದಲಿತರು ಮತ್ತು ಆದಿವಾಸಿಗಳ ಮೇಲಿನ ಆತನ ದಾಳಿಗಳಲ್ಲಿ ಇತ್ತೀಚಿನದ್ದು. ಪೆರಿಯಾರ್ ಬೆಂಬಲಿಗರನ್ನು ಮಾತ್ರವಲ್ಲ, ಸ್ವತಃ ಪೆರಿಯಾರ್ ಅವರನ್ನು ಅವಮಾನ ಮಾಡಿದ್ದಾರೆ. ಅವರನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ಬುಡಕಟ್ಟುಗಳು ಕಾಯ್ದೆಯ ಅಡಿಯಲ್ಲಿ ವಿಚಾರಣೆಗೆ ಗುರಿಪಡಿಸಬೇಕು ಎಂದು ಆಗ್ರಹಿಸಿರುವ ಡಿಎಸ್‌ಎಂಎಂ ಇಂತಹ, ಸಮಾಜದ ಐಕ್ಯತೆಗೆ ಭಂಗ ತರುವ ದಾಳಿಗಳ ವಿರುದ್ಧ ಎಲ್ಲ ಪ್ರತಿಭಟನೆಗಳಲ್ಲಿ ಪಾಲ್ಗೊಳ್ಳಬೇಕು ಎಂದು ತನ್ನ ಕಾರ್ಯಕರ್ತರಿಗೆ ಮತ್ತು ಸಮುದಾಯಕ್ಕೆ ಕರೆ ನೀಡಿದೆ.

ಚಿನ್ಮಯಾನಂದ ಅತ್ಯಾಚಾರ ಪೀಡಿತೆ ಕಾನೂನು ಪರೀಕ್ಷೆಗೆ ಕೂರಲು ಅವಕಾಶ ಕೊಡಬೇಕು – ಎಐಡಿಡಬ್ಲ್ಯುಎ ಆಗ್ರಹ

ಉತ್ತರಪ್ರದೇಶದ ಬರೇಲಿಯ ಮಹಾತ್ಮ ಜ್ಯೋತಿಬಾ ಪುಲೆ ರೋಹಿಲ್‌ಖಂಡ್ ವಿಶ್ವವಿದ್ಯಾಲಯ ಸ್ವಾಮಿ ಚಿನ್ಮಯಾನಂದ ಅತ್ಯಾಚಾರ ಪ್ರಕರಣದ ಪೀಡಿತೆಗೆ ಎಲ್‌ಎಲ್‌ಎಂ 3ನೇ ಸೆಮಿಸ್ಟರ್ ಪರೀಕ್ಷೆಗೆ ಕೂರಲು ಅನುಮತಿ ನಿರಾಕರಿಸಿರುವುದನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘ(ಎಐಡಿಡಬ್ಲ್ಯುಎ) ಬಲವಾಗಿ ಖಂಡಿಸಿದೆ. ಅನುಮತಿ ನಿರಾಕರಿಸಲು ಕೊಟ್ಟಿರುವ ಕಾರಣ ಆಕೆ ಕನಿಷ್ಟ 75 ಶೇಕಡಾ ಹಾಜರಾತಿ ಹೊಂದಿಲ್ಲ ಎಂಬುದು. ಪರೀಕ್ಷೆಗೆ ಹಾಜರಾಗಬೇಕಾದರೆ ಕೋರ್ಟ್ ಆದೇಶ ತರುವಂತೆ ವಿವಿ ಆಕೆಗೆ ಹೇಳಿದೆ. ಸಿಜೆಎಂ ನ್ಯಾಯಾಲಯ ಈ ಕಾನೂನು ವಿದ್ಯಾರ್ಥಿಗೆ ಪರೀಕ್ಷೆಗೆ ಕೂರಲು ಅನುಮತಿ ನೀಡಿತ್ತು, ಮತ್ತು ಪೋಲೀಸ್ ಕಸ್ಟಡಿಯಲ್ಲಿ ಅಕೆಯನ್ನು ಬರೇಲಿಗೆ ಕಳಿಸುವಂತೆ ಜೈಲ್ ಸೂಪರಿಂಟೆಂಡೆಂಟರಿಗೆ ಸೂಚನೆಯನ್ನೂ ನೀಡಿತ್ತು. ಆದರೂ ವಿಶ್ವವಿದ್ಯಾಲಯ ಈ ನಿರ್ಧಾರ ತೆಗೆದುಕೊಂಡಿದೆ.

ಈಕೆಗೆ ಕನಿಷ್ಟ ಹಾಜರಾತಿ ಇರದಿರಲು ಕಾರಣ ಏನು ಎಂಬುದು ವಿಶ್ವವಿದ್ಯಾಲಯಕ್ಕೂ ತಿಳಿದಿದೆ. ಈ ಪ್ರಕರಣವನ್ನು ಎಷ್ಟು ಹೊಲಸಾಗಿ ನಿರ್ವಹಿಸಲಾಗಿದೆ, ಇದರಿಂದಾಗಿ ಅಕ್ಟೋಬರ್ 20ರಿಂದ ಈಕೆಗೆ ಎಂತಹ ಕಿರುಕುಳ ಉಂಟಾಗಿದೆ ಎಂಬುದನ್ನು ಎಐಡಿಡಬ್ಲ್ಯುಎ ಸಂಬಂಧಪಟ್ಟ ಅಧಿಕಾರಿಗಳಿಗೆ ನೆನಪಿಸುತ್ತ, ಆಕೆಗೆ ಪರೀಕ್ಷೆಗೆ ಹಾಜರಾಗಲು ಅನುಮತಿ ನಿರಾಕರಿಸುವ ನಿರ್ಧಾರ ಆಕೆಯ ಜೀವನ ಮತ್ತು ಶಿಕ್ಷಣ–ಉದ್ಯೋಗದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ ಎಂದಿದೆ.

ಆದ್ದರಿಂದ ಉತ್ತರಪ್ರದೇಶ ಸರಕಾರ ವಿಶ್ವವಿದ್ಯಾಲಯಕ್ಕೆ ಮತ್ತು ಜೈಲು ಆಡಳಿತಕ್ಕೆ ಆಕೆ ಪರೀಕ್ಷೆಗೆ ಕೂರುವಂತೆ ಅವಕಾಶ ನೀಡುವಂತೆ ಖಾತ್ರಿಪಡಿಸಲು ನಿರ್ದೇಶನ ನೀಡಬೇಕು ಎಂದು ಎಐಡಿಡಬ್ಲ್ಯುಎ ಆಗ್ರಹಿಸಿದೆ

ಎಲ್ಲರ ಕೈಗೆಟಕುವ ಉನ್ನತ ಶಿಕ್ಷಣಕ್ಕಾಗಿ ರಾಷ್ಟ್ರೀಯ ಹೋರಾಟವಾಗುತ್ತಿರುವ ಜೆಎನ್‌ಯು ವಿದ್ಯಾರ್ಥಿಗಳ ಶುಲ್ಕ ಏರಿಕೆ ವಿರೋಧಿ ಹೋರಾಟ

ದಿಲ್ಲಿಯ ಜವಹರಲಾಲ್ ನೆಹರು ವಿಶ್ವವಿದ್ಯಾಲಯ(ಜೆಎನ್‌ಯು) ವಿದ್ಯಾರ್ಥಿಗಳು ಅಕ್ಟೋಬರ್ 28 ರಿಂದ ನಡೆಸುತ್ತಿರುವ ಶುಲ್ಕ ಏರಿಕೆ ವಿರೋಧಿ ಹೋರಾಟವನ್ನು ಪೋಲೀಸ್ ಬಳಸಿ ದಮನ ಮಾಡುವ ಪ್ರಯತ್ನ ಸಂಪೂರ್ಣ ವಿಫಲವಾಗಿದೆ. ಜೆಎನ್‌ಯು ವಿದ್ಯಾರ್ಥಿಗಳ ಈ ಹೋರಾಟಕ್ಕೆ ದೇಶಾದ್ಯಂತ ಬೆಂಬಲ ವ್ಯಕ್ತವಾಗುತ್ತಿದೆ. ನವಂಬರ್ 27ರಂದು ಕೇರಳದಿಂದ ಮಿಝೋರಾಂ ವರೆಗೆ ದೇಶದ ಹಲವು ಕ್ಯಾಂಪಸ್‌ಗಳಲ್ಲಿ ರಾಷ್ಟ್ರೀಯ ಪ್ರತಿಭಟನಾ ದಿನಾಚರಣೆ ನಡೆದಿರುವುದು ಇದಕ್ಕೆ ಸಾಕ್ಷಿ. ಇದೀಗ ಜೆಎನ್‌ಯು ಮಾದರಿಯ ಎಲ್ಲರ, ಮುಖ್ಯವಾಗಿ ದುರ್ಬಲ ವಿಭಾಗಗಳ ಕೈಗೆಟಕುವ ಮತ್ತು ಲಭ್ಯವಾಗಬಲ್ಲ ಉನ್ನತ ಶಿಕ್ಷಣಕ್ಕಾಗಿ, ಆಮೂಲಕ ಶಿಕ್ಷಣದ ಖಾಸಗೀಕರಣ ಮತ್ತು ವ್ಯಾಪಾರೀಕರಣದ ವಿರುದ್ಧ ಒಂದು ಹೋರಾಟವಾಗಿ ರೂಪುಗೊಳ್ಳುತ್ತಿದೆ.



ಹಲವೆಡೆಗಳಲ್ಲಿ ಖಾಸಗಿ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳೂ ಈ ದಿನಾಚರಣೆಯಲ್ಲಿ ಭಾಗವಹಿಸಿದ್ದಾರೆ. ದಿಲ್ಲಿಯಲ್ಲಿ ಅಶೋಕ ಯುನಿವರ್ಸಿಟಿ ಮತ್ತು ಒ ಪಿ ಜಿಂದಾಲ್ ಯುನಿವರ್ಸಿಟಿಯ ವಿದ್ಯಾರ್ಥಿಗಳು ಕೇಂದ್ರ ಸ್ಥಳವಾದ ಕನಾಟ್ ಪ್ಲೇಸ್‌ನಲ್ಲಿ ಮಾನವ ಸರಪಳಿ ನಡೆಸಿ ಜೆಎನ್‌ಯು ವಿದ್ಯಾರ್ಥಿಗಳ ಹೋರಾಟಕ್ಕೆ ಬೆಂಬಲ ಸೂಚಿಸಿದರು. ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಶುಲ್ಕಗಳನ್ನು ಹತ್ತು ಪಟ್ಟು ಏರಿಸಲಾಗುವುದು ಎಂಬ ವರದಿಗಳ ಹಿನ್ನೆಲೆಯಲ್ಲಿ ಈ ಸಂಸ್ಥೆಯ ವಿದ್ಯಾರ್ಥಿಗಳೂ ಜೆಎನ್‌ಯು ವಿದ್ಯಾರ್ಥಿಗಳತ್ತ ನೋಡಲಾರಂಭಿಸಿದ್ದಾರೆ.

ಕೊಲ್ಕತಾದಲ್ಲಿ ಪ್ರೆಸಿಡೆನ್ಸಿ ಯುನಿವರ್ಸಿಟಿ ಮತ್ತು ಕೊಲ್ಕತ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಸಭೆ, ಮೆರವಣಿಗೆಗಳನ್ನು ನಡೆಸಿದರು. ಅಲ್ಲಿ ಜೆಎನ್‌ಯು ನ ಹಳೆ ವಿದ್ಯಾರ್ಥಿಗಳೂ ಸಾರ್ವಜನಿಕ ಶಿಕ್ಷಣದ ಉಳಿವಿಗೆ ನಾಗರಿಕರ ನಡಿಗೆಯನ್ನು ಸಂಘಟಿಸಿದರು. ಇದರಲ್ಲಿ ಪ್ರಮುಖ ಪಾತ್ರ ವಹಿಸಿದ ಜೆಎನ್‌ಯು ಹಳೆ ವಿದ್ಯಾರ್ಥಿ

ಪುಟ 12 ಕ್ಕೆ

ಭಾರತ್ ಪೆಟ್ರೋಲಿಯಂ ಖಾಸಗೀಕರಣದ ವಿರುದ್ಧ ಪೆಟ್ರೋಲಿಯಂ ಕಾರ್ಮಿಕರ ದೇಶವ್ಯಾಪಿ ಚಾರಿತ್ರಿಕ ಮುಷ್ಕರ

ಪುಟ 12 ನೋಡಿ

ಸಂಪಾದಕೀಯ

ನಿರುದ್ಯೋಗಿ ಎಸ್‌ಎಂಕೆಗೆ ಕೆಲಸ ಕೊಡಿ!

ಕರ್ನಾಟಕದ 17 ಮಂದಿ 'ಬುದ್ಧಿವಂತ' ಶಾಸಕರ ರಾಜಿನಾಮೆ ಕೊಡಿಸುವುದರಲ್ಲಿ ನನ್ನ ಪಾತ್ರವೂ ಇದೆ ಎಂದು ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಹೇಳಿದ್ದಾರೆ ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಇದು ನಿಜವೇ ಆಗಿದ್ದರೆ ಅವರನ್ನು ಬಿಜೆಪಿ ಪಕ್ಷದವರು ತುರ್ತಾಗಿ ಮಹಾರಾಷ್ಟ್ರಕ್ಕೆ ಕಳುಹಿಸುವುದು ಒಳ್ಳೆಯದು. ಕಾಂಗ್ರೆಸ್‌ನಲ್ಲಿದ್ದು ಪಡೆಯ ಬಹುದಾದ ಎಲ್ಲ ಸ್ಥಾನಮಾನ, ಅಧಿಕಾರ ಅಂತಸ್ತು ಪಡೆದು ಅವರು ಅವೆಲ್ಲವನ್ನು ಮತ್ತೆ ಎರಡನೇ ಬಾರಿಗೆ ಪಡೆಯಲು ಸಾಧ್ಯವೇ ಎಂದು ಪರೀಕ್ಷೆ ಮಾಡಲು ಕಮಲದ ಪಾರ್ಟಿಗೆ ಬಂದಿರುವ ಹಿರಿಯ ರಾಜಕೀಯ ಮುತ್ಸದ್ಧಿಗೆ ಕಂಪೆನಿ ಮಾಲೀಕರಾದ ಮೋದಿ ಶಾ ರಿಂದ ಇನ್ನೂ ಏನೂ ಸಿಕ್ಕಂತೆ ಕಾಣುವುದಿಲ್ಲ. ಹಾಗಾಗಿ ಕೃಷ್ಣರವರು ಆ ಎರಡು ಹೆಡೆಯ ನಾಯಕತ್ವದ ಗಮನ ಸೆಳೆಯಲು ಆಗಾಗ ಹೀಗೆ ಅರಚುತ್ತಿರುತ್ತಾರೆ.

ಇತ್ತೀಚೆಗೆ ಕರ್ನಾಟಕದಲ್ಲಿ ಒಂದು ಪ್ರವೃತ್ತಿ ಆರಂಭವಾಗಿದೆ. ಹಗರಣಗಳಲ್ಲಿ ಹೆಸರು ಪಡೆದ ಬಿಜೆಪಿಯೇತರ ರಾಜಕಾರಣಿಗಳು ಏಕಾಏಕಿಯಾಗಿ ಬಿಜೆಪಿ ಸೇರುತ್ತಿದ್ದಾರೆ. ಐಟಿ, ಇಡಿ ಇಲಾಖಾ ದಾಳಿಗಳಿಗೆ ಹೆದರಿ ಅವರು ಹೀಗೆ ಮಾಡುತ್ತಿರಬಹುದೇ ಎಂದು ಜನ ಅನುಮಾನ ಪಡುತ್ತಿದ್ದಾರೆ. ಕೃಷ್ಣ ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದ್ದು ಯಾಕಿರಬಹುದು ಎಂದು ಪ್ರಶ್ನಿಸುತ್ತಾರೆ.

2018 ರ ಕರ್ನಾಟಕದ ಪರಿಸ್ಥಿತಿ ಈಗ ಮಹಾರಾಷ್ಟ್ರದಲ್ಲಿದೆ. ಅಲ್ಲೊಂದು ಮೈತ್ರಿ ಸರ್ಕಾರ ಅಧಿಕಾರಕ್ಕೆ ಬಂದಿದೆ. ಎಸ್ಸೆಂ ಕೃಷ್ಣರವರ ವಿಶ್ಲೇಷಣೆ ಪ್ರಕಾರ ನೋಡುವುದಾದರೆ ಮಹಾರಾಷ್ಟ್ರದಲ್ಲೂ ಕರ್ನಾಟಕದಂತಹ ಅನಿಷ್ಟ ಪರಿಸ್ಥಿತಿ ನಿರ್ಮಾಣವಾಗಿದೆ. ಪರಸ್ಪರ ದೂಷಣೆ ಮಾಡಿಕೊಂಡ ಪಕ್ಷಗಳು ಸೇರಿಕೊಂಡು ಸರ್ಕಾರ ರಚಿಸಲು ಮುಂದಾಗಿವೆ. ದೊಡ್ಡ ಪಕ್ಷವಾಗಿ ಬಿಜೆಪಿ ಹೊರಹೊಮ್ಮುವಂತಾಗಿದ್ದರೂ ಬಿಜೆಪಿಗೆ ಅಧಿಕಾರ ಧಕ್ಕಿಲ್ಲ. ಕೃಷ್ಣ ರವರ ಪ್ರಕಾರ ಇದೊಂದು ಅನಿಷ್ಟ ಪರಿಸ್ಥಿತಿ!.

ಕರ್ನಾಟಕದಲ್ಲಿ ಮೈತ್ರಿ ಸರ್ಕಾರವನ್ನು ಉರಳಿಸುವುದರಲ್ಲಿ ಬಿಜೆಪಿಯ ಪಾತ್ರ ಈಗಾಗಲೇ ಪ್ರಕಟಗೊಂಡಿದೆ, ಖಾತ್ರಿಯಾಗಿದೆ. ಎಸ್ಸೆಂರವರ ಹೇಳಿಕೆ ಇನ್ನೊಂದು ಬಲವಾದ ಸಾಕ್ಷಿಯನ್ನು ಒದಗಿಸಿದೆ. 17 ಮಂದಿ ಬುದ್ಧಿವಂತರಿಂದ ರಾಜಿನಾಮೆ ಕೊಡಿಸಿ ಮೈತ್ರಿ ಸರ್ಕಾರ ಕಿತ್ತುಹಾಕುವ 'ಪುಣ್ಯದ' ಕೆಲಸದಲ್ಲಿ ಎಸ್ಸೆಂರವರು ತಮ್ಮ ಪಾತ್ರವನ್ನು ತಾವೇ ಕೊಂಡಾಡಿದ್ದಾರೆ. ಹೀಗೆ ಅಕ್ರಮವಾಗಿ ಸರ್ಕಾರಗಳನ್ನು ಉರುಳಿಸುವುದರಲ್ಲಿ ತಾವು ಪರಿಣಿತರು ಎಂದು ಎಸ್ಸೆಂ ಒಪ್ಪಿಕೊಂಡಿದ್ದಾರೆ. ಇವರ ಅನುಭವಕ್ಕೆ ಈಗ ಮಹಾರಾಷ್ಟ್ರದಲ್ಲಿ ಬಹಳ ಬೇಡಿಕೆ ಇರಬಹುದು. ಇವರನ್ನು ಬಿಜೆಪಿಯವರು ಆದಷ್ಟು ಬೇಗ ಮಹಾರಾಷ್ಟ್ರಕ್ಕೆ ರಫ್ತು ಮಾಡುವುದು ಅವರಿಗೂ ಕರ್ನಾಟಕಕ್ಕೂ ಶ್ರೇಯಸ್ಕರ! ಆ ನಂತರ ಅವರು 'ಮಹಾರಾಷ್ಟ್ರ ಸಮ್ಮಿಶ್ರ ಸರ್ಕಾರವನ್ನು ಉರುಳಿಸುವುದರಲ್ಲಿ ನನ್ನ ಪಾತ್ರವೂ ಇತ್ತು ಎಂದು ಹೆಮ್ಮೆಯಿಂದ ಅಂದುಕೊಳ್ಳಬಹುದು, ಅಲ್ಲವೆ?

ಸರ್ಕಾರಗಳು ಶಾಶ್ವತವಲ್ಲ. ಅವು ಬದಲಾಗುತ್ತವೆ. ಬದಲಾಗುತ್ತಿರಬೇಕು. ಒಂದು ದಮನಕಾರಿ ಸರ್ಕಾರವನ್ನು ಜನ ಕ್ರಾಂತಿಕಾರಿ ಜನಹೋರಾಟದ ಮೂಲಕ ಪದಚ್ಯುತಗೊಳಿಸುತ್ತವೆ. ಮತದಾನದ ಮೂಲಕ, ಮತಪತ್ರ ಚಲಾವಣೆಯ ಮೂಲಕ ಸಹ ಒಂದು ಅಧಿಕಾರರೂಢ ಸರ್ಕಾರವನ್ನು ಕೆಳಗಿಳಿಸಲು ಸಾಧ್ಯವಿದೆ. ಆದರೆ ಅಕ್ರಮಗಳ ಮೂಲಕ, ಪಿತೂರಿಯ ಮೂಲಕ ಒಂದು ಸರ್ಕಾರ ಬಹುಮತ ಕಳೆದುಕೊಂಡಂತೆ ಮಾಡುವುದು ಆದರ್ಶವಲ್ಲ. ಎಸ್ಸೆಂರವರು ಮಾನ ಮರ್ಯಾದೆ ಎಲ್ಲವನ್ನು ಬಿಟ್ಟು ತನ್ನನ್ನು ತಾನೇ ಈ ದುಷ್ಟ ಕಾರ್ಯದಲ್ಲಿ ತನ್ನ ಪಾತ್ರವೂ ಇದೆ ಎಂದು ಹೊಗಳಿದ್ದಾರೆ.

ಎಸ್ಸೆಂ ಕೃಷ್ಣ ರವರು ಸತ್ಯವನ್ನು ಬಾಯ್ಬಿಟ್ಟು ಹೇಳಿದ್ದನ್ನು ನಾವು ಸ್ವಾಗತಿಸಬಹುದು. ಆದರೆ ಎಸ್ಸೆಂ ಕೃಷ್ಣರವರು ಪ್ರತಿಪಾದಿಸುತ್ತಿರುವ ವಿಚಾರ ಆಕ್ಷೇಪಾರ್ಹವಾಗಿದೆ. ಹಿರಿಯ ರಾಜಕಾರಣಿಯಾಗಿ ಕಿರಿಯರಿಗೆ ಅವರು ಈ ರೀತಿಯ ಭ್ರಷ್ಟ ರಾಜಕಾರಣದ ಧೀಕ್ಷೆ ನೀಡಬಾರದು. ಬಿಜೆಪಿಯನ್ನು ಅಧಿಕಾರಕ್ಕೆ ತರಲು ಯಾವ ಅಕ್ರಮ ಮಾರ್ಗವನ್ನೂ ಅನುಸರಿಸಬಹುದೆಂಬ ವಾದ ಕೃಷ್ಣರವರು ಬಿಜೆಪಿಗೆ ಸೇರ್ಪಡೆಯಾದಂದಿನಿಂದ ಮೈಗೂಡಿಸಿಕೊಂಡಂತೆ ಕಾಣುತ್ತದೆ. ದೇಶದ ಸಂವಿಧಾನಕ್ಕೆ ಅವಮಾನ ಮಾಡುವ ಸರ್ಕಾರವನ್ನು, ದೇಶದಲ್ಲಿ ಕೋಮು ಗಲಭೆಗಳಿಗೆ ಕುಮ್ಮಕ್ಕು ನೀಡಿ ಪ್ರಜೆಗಳ ಐಕ್ಯತೆಯನ್ನು ಧ್ವಂಸಗೊಳಿಸುವ ಸರ್ಕಾರವನ್ನು, ಮಹಿಳೆಯರಿಗೆ ರಕ್ಷಣೆ ನೀಡದ ಸರ್ಕಾರವನ್ನು, ದಲಿತರ ಹಕ್ಕುಗಳ ರಕ್ಷಣೆಗೆ ಗಮನ ನೀಡದ ಸರ್ಕಾರವನ್ನು, ಧಾರ್ಮಿಕ ಅಲ್ಪ ಸಂಖ್ಯಾತರಲ್ಲಿ ಪರಕೀಯ ಪ್ರಜ್ಞೆ, ಅವರ ವಿರುದ್ಧ ದ್ವೇಷವನ್ನು ಬೆಳೆಸುವ ಸರ್ಕಾರವನ್ನು ಕಿತ್ತುಹಾಕಲು ಪ್ರಜೆಗಳಿಗೆ ಹಕ್ಕಿದೆ. ಆದರೆ 'ಆಪರೇಷನ್ ಕಮಲ' ಎಂಬ ಹೆಸರಿನಲ್ಲಿ ಕರ್ನಾಟಕದಲ್ಲಿ ಚುನಾಯಿತ ಸರ್ಕಾರಗಳನ್ನು ಕಿತ್ತುಹಾಕಲು ಬಿಜೆಪಿ ಆರಂಭಿಸಿರುವ ಪದ್ಧತಿ ಅತ್ಯಂತ ಅನಿಷ್ಟ ಪದ್ಧತಿ.

ಮಹಾರಾಷ್ಟ್ರದಲ್ಲಿ ಬಿಜೆಪಿಯ ಬಣ್ಣ ಬಯಲಾಗಿದೆ. ಮುಖವಾಡ ಕಳಚಿ ಬಿದ್ದಿದೆ. ಅದರ ಅಧಿಕಾರದಾಹಕ್ಕೆ ಎಲ್ಲೆ ಇಲ್ಲ ಎಂದು ಸಾಬೀತಾಗಿದೆ. ಅಧಿಕಾರಕ್ಕಾಗಿ ಬಿಜೆಪಿ ಏನು ಬೇಕಾದರೂ ಮಾಡಲು ಸಿದ್ಧ ಎನ್ನುವುದನ್ನು ಮಹಾರಾಷ್ಟ್ರದಲ್ಲಿ ಅದು ಎಳ್ಳಷ್ಟೂ ಮಾನ ಮರ್ಯಾದೆ ಇಲ್ಲದೆ ವರ್ತಿಸಿ ಈಗ ಮುಖಭಂಗಕ್ಕೆ ಒಳಗಾಗಿದೆ. ಮುಂದಿನ ದಿನಗಳಲ್ಲಿ ಬಿಜೆಪಿಯನ್ನು ದೇಶವಾಸಿಗಳು ದೇಶಾದ್ಯಂತ ತಿರಸ್ಕರಿಸುವುದು ದೂರವಿಲ್ಲ.

ಶಿವಸೇನಾ, ಎನ್‌ಸಿಪಿ ಮತ್ತು ಕಾಂಗ್ರೆಸ್ ಪಕ್ಷಗಳ ಸರ್ಕಾರ ಅದರ ಆಂತರಿಕ ವೈರುಧ್ಯಗಳ ಕಾರಣದಿಂದ ಬೇಗನೇ ಕುಸಿದು ಬೀಳಬಹುದು. ಆದರೆ ಅದು ಮುಖ್ಯವಲ್ಲ. ಬಿಜೆಪಿ ಎಂಬ ಕೋಮುವಾದಿ, ಸರ್ವಾಧಿಕಾರಿ ಪಕ್ಷದ ಸರ್ಕಾರ ಅಸ್ತಿತ್ವಕ್ಕೆ ಬರುವುದನ್ನು ಎಲ್ಲ ಪ್ರತಿಪಕ್ಷಗಳು ಒಟ್ಟಾಗಿ ತಡೆದಿರುವುದು ಗಮನಾರ್ಹವಾಗಿದೆ. ಒಂದು ರಾಷ್ಟ್ರೀಯ ವಿಪತ್ತು ಹರಡುವುದನ್ನು ತಡೆಯಲು ಸಾಧ್ಯವಾಗಿರುವುದು ಹೆಮ್ಮೆಯ ವಿಷಯ. ಅದೇ ರೀತಿಯ ಪ್ರಯೋಗ ಆಗಿದ್ದು ಜೆಡಿಎಸ್ ನ ಕುಮಾರಸ್ವಾಮಿ ನೇತೃತ್ವದ ಮೈತ್ರಿ ಸರ್ಕಾರ ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದಾಗ. ಗಲಭೆಕೋರ ಬಿಜೆಪಿಯನ್ನು ಹೊರಗಿಡಲು ಸಾಧ್ಯವಾಗಿತ್ತು. ಮಹಾರಾಷ್ಟ್ರದಲ್ಲಿಯೂ ಅಂತಹ ಪ್ರಯೋಗ ನಡೆಯಲು ಬಿಡಬೇಕು. ಕೃಷ್ಣರವರ ಇಂತಹ ಹೇಳಿಕೆಗಳಿಂದ ಅವರೊಬ್ಬ ಆದರ್ಶ ರಾಜಕಾರಣಿ ಎಂಬ ಹೆಸರು ಅವರಿಗೆ ಪ್ರಾಪ್ತ ಆಗಲಾರರು. ಒಂದು ಸರ್ಕಾರವನ್ನು ಬುಡಮೇಲು ಮಾಡುವ ಉದ್ದೇಶದಿಂದ ಕೆಲವು ಮಂದಿ ಶಾಸಕರನ್ನು ರಾಜಿನಾಮೆ ಕೊಡಿಸಿ, ಜನರ ಮೇಲೆ ಅನಗತ್ಯ ಉಪಚುನಾವಣೆಗಳನ್ನು ಹೇರಿ, ಹಣ ಬಲ, ಜಾತಿ ಬಲ, ತೋಳ್ಬಲ ಬಳಸಿ ಅವರನ್ನು ಗೆಲ್ಲಿಸಿ, ಒಂದು ಪಕ್ಷದ ಸಂಖ್ಯಾ ಬಲವನ್ನು ಹೆಚ್ಚಿಸಿ, ಒಂದು ಸರ್ಕಾರವನ್ನು ಕೆಡವಿ ಇನ್ನೊಂದು ಸರ್ಕಾರವನ್ನು ಅಧಿಕಾರಕ್ಕೆ ತರುವ ಪ್ರಯತ್ನವನ್ನು ಯಾರೂ ಬೆಂಬಲಿಸಬಾರದು.

ಮಹಾರಾಷ್ಟ್ರದ ಬೆಳವಣಿಗೆಯಿಂದ ನಾವು ಕರ್ನಾಟಕದ 17 ಮತಕ್ಷೇತ್ರಗಳಲ್ಲಿ ಮತದಾನ ಮಾಡಲು ಸಜ್ಜಾಗುತ್ತಿರುವ ಪ್ರಜ್ಞಾವಂತ ಮತದಾರರು ಕೃಷ್ಣರವರ ಮಾತುಗಳಿಂದ ಪ್ರಜ್ಞಾಹೀನರಾಗದೆ ಜವಾಬ್ದಾರಿಯಿಂದ ಮತದಾನ ಮಾಡಬೇಕೆಂದು ಮನವಿ ಮಾಡುತ್ತೇವೆ.

ಅಂಗನವಾಡಿ ಕೇಂದ್ರಗಳಲ್ಲಿ ಶಾಲಾ ಪೂರ್ವಪ್ರಾಥಮಿಕ ಶಿಕ್ಷಣ ಪ್ರಾರಂಭಿಸಬೇಕೆಂದೂ ಒತ್ತಾಯಿಸಿ

ಡಿಸೆಂಬರ್ 10 ರಿಂದ ಅಂಗನವಾಡಿ ನೌಕರರ ಅನಿರ್ಧಿಷ್ಟ ಮುಷ್ಕರ

ಫಿರಿಯಾಡಿಕಲ್ ಲೇಬರ್ ಫೋರ್ಸ್ ಸರ್ವೇ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ನಗರ ಮತ್ತು ಗ್ರಾಮೀಣ ಭಾಗಗಳಲ್ಲಿ ಮಹಿಳಾ ನಿರುದ್ಯೋಗ ಹೆಚ್ಚುತ್ತಿದೆ. ಮಾತ್ರವಲ್ಲದೇ ನಿಗದಿತ ಸಂಬಳ ತೆಗೆದು ಕೊಳ್ಳುವವರು 26% ಮಾತ್ರ ಉಳಿದವರು, ಸ್ವಯಂ ಉದ್ಯೋಗ, ಅರೆಕಾಲಿಕ, ಸಾಂಧರ್ಭಿಕ, ಗುತ್ತಿಗೆ ಇತರೆ ಉದ್ಯೋಗಿಗಳಾಗಿದ್ದಾರೆ. ಅಂಗನವಾಡಿ ನೌಕರರು ಇಂತಹ ಉದ್ಯೋಗಿಗಳು ಅರೆಕಾಲಿಕ ಪಡೆಗೆ ಸೇರಿದವರು ಆದರೆ ಇಂದು ಉದಾರೀಕರಣ ನೀತಿಗಳನ್ನು ಅಪ್ಪಿಕೊಂಡು ಮುದ್ದಾಡುತ್ತಿರುವ ಸರ್ಕಾರ ಎಲ್ಲಾ ಕ್ಷೇತ್ರಗಳನ್ನು ಖಾಸಗಿ ಮಾಡುತ್ತಿದೆ. ಆಹಾರ, ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಗಳಿಗಾಗಿ ಇರುವ ಯೋಜನೆಗಳ ಪ್ರಮುಖ ಜವಬ್ದಾರಿಗಳನ್ನು ಬೇರೆಡೆಗೆ ವರ್ಗಾಯಿಸುವ ಮುಖಾಂತರ ಬಲಹೀನಗೊಳಿಸಲು ಪ್ರಯತ್ನಿಸಲಾಗುತ್ತಿದೆ. ಇದರಿಂದ ಸಾವಿರಾರು ಮಹಿಳೆಯರು ಕೆಲಸ ಕಳೆದು ಕೊಳ್ಳುವುದಲ್ಲದೇ ಐಸಿಡಿಎಸ್ ಯೋಜನೆ ತನ್ನ ಉದ್ದೇಶ ಕಳೆದು ಕೊಳ್ಳಲಿದೆ.

ಕೇಂದ್ರ ಸರ್ಕಾರದ ಹೊಸ ಶಿಕ್ಷಣ ನೀತಿ ಇತ್ತೀಚೆಗೆ ಮಾಡಿರುವ ಶಿಫಾರಸ್ಸಿನಲ್ಲಿ 3 ರಿಂದ 8 ವರ್ಷದ ಒಂದು ವರ್ಗೀಕರಣ ಮಾಡಿ ಮಾಧ್ಯಮವನ್ನು ಶಿಕ್ಷಣ ಇಲಾಖೆಯಡಿಯಲ್ಲಿ ತೆರೆಯಬೇಕೆಂಬ ಶಿಫಾರಸ್ಸು ಮಾಡಿದೆ. ಮಾತ್ರವಲ್ಲದೆ ರಾಜ್ಯದಲ್ಲಿ



2019 ಮೇ ತಿಂಗಳಲ್ಲಿ 3 1/2 ವರ್ಷ ಮೇಲ್ಪಟ್ಟ ಮಕ್ಕಳಿಗೆ ಸರ್ಕಾರಿ ಶಾಲೆಗಳಲ್ಲಿ ಎಲ್.ಕೆ.ಜಿ– ಯು. ಕೆ.ಜಿ ಗಳನ್ನು ಈಗಾಗಲೇ ಪ್ರಾರಂಭಿಸಲಾಗಿದೆ. ಶಿಕ್ಷಣ ಇಲಾಖೆ ತಂದಿರುವ ಈ ಸುತೋಲೆ ಐಸಿಡಿಎಸ್ ಯೋಜನೆಯ ಮತ್ತೊಂದು ತದ್ರೂಪಿ (ಡ್ಯೂಪ್ಲಿಕೇಟ್) ಕಾರ್ಯಕ್ರಮವೇ ಹೊರತು ಬೇರೇನಲ್ಲ ಏಕೆಂದರೆ ಇದರ ಪ್ರಾಸ್ತಾಪಿತ ಕಲಿಕೆಯ ಸ್ವರೂಪವೂ ಈಗಗಲೇ ಅಂಗನವಾಡಿ ಕೇಂದ್ರಗಳಲ್ಲಿ ಕೊಡಲಾಗುತ್ತಿದೆ.

ಈಗಾಗಲೇ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ 4200 ಕೋಟಿ ರೂಗಳನ್ನು ಪೂರಕ ಪೌಷ್ಠಿಕ ಆಹಾರ, ಪೂರ್ವಪ್ರಾರ್ಥಮಿಕ ಶಿಕ್ಷಣವನ್ನೊಳಗೊಂಡಂತೆ ಖರ್ಚು ಮಾಡಲಾಗುತ್ತಿದೆ. ಆದರೆ ಸರ್ಕಾರ ಈ ಹಣವನ್ನು ಸದ್ಬಳಿಕೆ ಮಾಡುವ ಬದಲಿಗೆ ಶಿಕ್ಷಣ ಇಲಾಖೆಯ ಮುಖಾಂತರ ಒಂದೇ ಮಗುವಿಗೆ ಡಬಲ್ ಹಣವನ್ನು ಖರ್ಚುಮಾಡಲು ಹೊರಟಿರುವುದು ನ್ಯಾಯವೇ?

ಆದ್ದರಿಂದ ನಮ್ಮ ಸಂಘಟನೆ ಕೆಳಕಂಡ ಬೇಡಿಕೆಗಳನ್ನಿಟ್ಟು ಈಗಾಗಲೇ ಹಲವು ಭಾರಿ ಸಂಬಂಧಿಸಿದವರೊಡನೆ ಚರ್ಚೆಗಳನ್ನು ಮಾಡಿ ಮನವಿಗಳನ್ನು ಕೊಟ್ಟಿದೆ. ಆದರೆ ಅಧಿಕಾರಸ್ಥರ ಉದಾಸೀನತೆ ಮುಂದುವರೆದಿರುವುದನ್ನು ಖಂಡಿಸಿ

ಪುಟ 4 ಕ್ಕೆ

ಅಂಗನವಾಡಿ ಕೇಂದ್ರಗಳಲ್ಲಿ ಶಾಲಾ ಪೂರ್ವಪ್ರಾಥಮಿಕ ಶಿಕ್ಷಣ ಪ್ರಾರಂಭಿಸಬೇಕೆಂದೂ........... ಪುಟ 3 ರಿಂದ

ಅನಿವಾರ್ಯವಾಗಿ ನಮ್ಮ ಸಂಘಟನೆ ಈ ಅನಿರ್ಧಿಷ್ಟಾವಧಿಯ ಹೋರಾಟದ ತೀರ್ಮಾನಕ್ಕೆ ಬಂದಿದೆ.

ರಾಜ್ಯದಲ್ಲಿ ಸಾರ್ವಜನಿಕ, ಪೋಷಕರ ಸಹಿಸಂಗ್ರಹ ಮಾಡಿಸಲಾಗಿದೆ ಮತ್ತು 30 ಜಿಲ್ಲೆಗಳನ್ನೊಳಗೊಂಡ 6 ಜಾಥಗಳನ್ನು ನಡೆಸಲಾಗಿದೆ.

ಜಾಥ :–1 ಬೆಂಗಳೂರು ಪ್ರಾರಂಭ – ನಂತರ ಕೋಲಾರ ತಲುಪಿ ಚಿಕ್ಕ ಬಳ್ಳಾಪುರದಲ್ಲಿ ಸಮಾರೋಪ ಆಗಬೇಕಿದೆ.

ಜವಾಬ್ದಾರಿ – ಟಿ.ಲೀಲಾವತಿ, ಲಕ್ಷ್ಮೀ ದೇವಮ್ಮ, ನಾಗರತ್ನ

ಜಾಥ :– 2 ಕೊಡಗಿನಿಂದ ಪ್ರಾರಂಭ– ನಂತರ ಹಾಸನ – ಮಂಡ್ಯ– ಚಾಮರಾಜನಗರ– ಮೈಸೂರು ಸಮಾರೋಪ

ಜವಾಬ್ದಾರಿ – ಸುನಂದಾ ಹೆಚ್.ಎಸ್, ಸುಜಾತ, ಇಂದ್ರಮ್ಮ

ಜಾಥ :– 3 ಬ್ಯಾಡಗಿ ಪ್ರಾರಂಭ – ನಂತರ ದಾವಣಗೆರೆ – ಚಿತ್ರದುರ್ಗಾ – ತುಮಕೂರು ಸಮಾರೋಪ

ಜವಾಬ್ದಾರಿ – ಕಮಲಾ, ಗುಲ್ಜಾರ್ , ಮಹಂತೇಶ್

ಜಾಥ :– 4 ಬಳ್ಳಾರಿ ಪ್ರಾರಂಭ – ನಂತರ ಕೊಪ್ಪಳ – ರಾಯಚೂರು ಯಾದಗಿರಿ – ಬೀದರ್, ಗುಲ್ಬರ್ಗಾ ಸಮಾರೋಪ

ಜವಾಬ್ದಾರಿ – ಶಾಂತ ಘಂಟೆ, ನಾಗರತ್ನ .ಕೆ, ಪದ್ಮ, ಶ್ರೀದೇವಿ, ಕಲಾವತಿ , ಸುರೇಖಾ

ಜಾಥ :– 5 ಕೊಪ್ಪ ಪ್ರಾರಂಭಿಸಿ ನಂತರ – ಶಿವಮೊಗ್ಗ , ದಕಿಣ ಕನ್ನಡ – ಉಡುಪಿ– ಉತ್ತರ ಕನ್ನಡ ಸಮಾರೋಪ

ಜವಾಬ್ದಾರಿ – ಸುಶೀಲಾ, ಯಮುನಾ ಗಾಂವ್ಕರ್

ಜಾಥ :– 6 ಗದಗ ಪ್ರಾರಂಭ ನಂತರ – ಹುಬ್ಬಳಿ – ಬಾಗಲಕೋಟೆ – ವಿಜಯಪುರ– ಬೆಳಗಾಂ ಸಮಾರೋಪ ನಡೆಸಬೇಕಿದೆ.

ಜಾಥಗೆ ಹೆಸರು

1. ಬಳ್ಳಾರಿ – ಕಾಂ. ಪ್ರಸನ್ನ ಕುಮಾರ್ – ವಿಮಲಾರಣದೀವೆ ಜಾಥ
2. ಕೊಡಗು – ಕಾಂ.ಉಗ್ರಪ್ಪ – ಕಾಂ. ಪ್ರಭಾಕರ್ ಜಾಥ
3. ಕೊಪ್ಪ – ಕಾಂ.ಮಾಧವಾ – ಕಾಂ. ಕ್ಯಾಪ್ಟನ್ ಲಕ್ಷ್ಮೀ ಸೆಹಗಲ್ ಜಾಥ
4. ಬ್ಯಾಡಗಿ – ಕಾಂ. ಮಹಮದ್ ದಸ್ತಗೀರ್– ಕಾಂ. ಸುಶೀಲಾ ಗೋಪಾಲನ್
5. ಬೆಂಗಳೂರು – ಕಾಂ. ಸೂರ್ಯ ನಾರಾಯಣ್ – ಕಾಂ.ಆರ್.ಶ್ರೀನಿವಾಸ್ ಕಾಂ.ಮುನಿರಾಜಮ್ಮ
6. ಹುಬ್ಬಳ್ಳಿ – ಕಾಂ.ಎನ್.ಕೆ. ಉಪಾಧ್ಯಾಯ – ಕಾಂ. ಎಮ್.ಕೆ. ಉಪಾಧ್ಯಾಯ– ಕಾಂ.ಅಹಲ್ಯ ರಂಗ್ನೇಕರ್


ಅಂತಿಮವಾಗಿ ಡಿಸೆಂಬರ್ 10 ರಿಂದ ಅಂಗನವಾಡಿ ನೌಕರರು ಅನಿರ್ಧಿಷ್ಟಾವಧಿಯ ಹೋರಾಟವನ್ನು ನಡೆಸುತ್ತಿದ್ದು ಬೆಂಗಳೂರಿಗೆ ಪಾದಾಯಾತ್ರೆಯ ಮುಖಾಂತರ ಎಲ್ಲಾ ನೌಕರರು ಆಗಮಿಸುತ್ತಿದ್ದಾರೆಂದೂ, ನಮ್ಮ ಸಂಘಟನೆ ಮುಂದಿಟ್ಟಿರುವ ಎಲ್ಲಾ ಬೇಡಿಕೆಗಳನ್ನು ಈಡೇರಿಸಬೇಕೆಂದು ಈ ಮುಖಾಂತರ ತಮಗೆ ತಿಳಿಸಲು ಇಚ್ಛೀಸುತ್ತಿದ್ದೇವೆ.

ಬೇಡಿಕೆಗಳು

1. ಅಂಗನವಾಡಿ ಕೇಂದ್ರಗಳಲ್ಲಿ ಪಾಲನೆಯೊಟ್ಟಿಗೆ ಎಲ್.ಕೆ.ಜಿ – ಯು.ಕೆ.ಜಿ ಶಿಕ್ಷಣ ನೀಡಿ ಸಮಾಜ ಬದಲಾವಣೆಯನ್ನು ಬಯಸುತ್ತಿದೆ ಆದರೆ ಅಂಗನವಾಡಿ ಕೇಂದ್ರಗಳು ಮಾತ್ರ ಹಳೆಯ ರೀತಿಯಲ್ಲಿಯೇ ಕಾರ್ಯಚರಿಸುತ್ತೇವೆ. ಬದಲಾದ ಸಮಾಜದ ರೀತಿಯಲ್ಲಿ ಅಂಗನವಾಡಿ ಕೇಂದ್ರಗಳು ಮಕ್ಕಳನ್ನು ಆಕರ್ಷಿಸುವ ಕೇಂದ್ರಗಳಾಗಬೇಕು. ಆದ್ದರಿಂದ ಅಂಗನವಾಡಿ ಕೇಂದ್ರಗಳನ್ನು ಪಾಲನಾ ಮತ್ತು ಕಲಿಕೆಯ ಕೇಂದ್ರಗಳನ್ನಾಗಿಸಬೇಕು. ಈಗಿರುವ
   - ಅಂಗನವಾಡಿ ಕೇಂದ್ರ ವೇಳಾಪಟ್ಟಿಯಲ್ಲಿ 3 ಗಂಟೆ ಶಾಲಾಪೂರ್ವ ಶಿಕ್ಷಣಕ್ಕೆ ಆದ್ಯತೆ ನೀಡಬೇಕು.
   - ಅಂಗನವಾಡಿ ಕೇಂದ್ರಗಳಲ್ಲಿ ಮಾತೃಪೂರ್ಣ ಯಶಸ್ವಿ ಮಾಡಲು ಹೆಚ್ಚುವರಿ ಸಹಾಯಕಿಯನ್ನು ಕೊಡಬೇಕು.
   - ಅಂಗನವಾಡಿ ಕೇಂದ್ರಗಳಿಗೆ ಎಲ್ಲಾ ರೀತಿಯ ಗುಣಾತ್ಮಕ ಮೂಲಭೂತ ಸೌಲಭ್ಯಗಳನ್ನೊದಗಿಸಬೇಕು.
   - 1995 ರಿಂದ ಪ್ರಾರಂಭವಾಗಿರುವ ಎಲ್ಲಾ ಯೋಜನೆಗಳಲ್ಲಿ ಆಯ್ಕೆಯಾಗಿರುವ ಎಲ್ಲಾ ಅಂಗನವಾಡಿ ಕಾರ್ಯಕರ್ತೆಯರು ಎಸ್.ಎಸ್.ಎಲ್.ಸಿ ಪಾಸಾದವರು ಅನೇಕರು ಪಧವೀದರರು ಆಗಿರುವುದರಿಂದ ಅವರಿಗೆ ತರಭೇತಿಯನ್ನು ಕೊಟ್ಟು, ಅಂಗನವಾಡಿ ಕೇಂದ್ರಗಳಲ್ಲಿಯೇ ಎಲ್.ಕೆ.ಜಿ – ಯು.ಕೆ.ಜಿ ಯನ್ನು ಪ್ರಾರಂಭಿಸಬೇಕು.
   - ಈಗಾಗಲೇ ಸರ್ಕಾರಿ ಶಾಲೆಗಳಲ್ಲಿ ಪ್ರಾರಂಭವಾಗಿರುವ ಮತ್ತು ಪ್ರಾರಂಭವಾಗುತ್ತಿರುವ ಎಲ್.ಕೆ.ಜಿ – ಯು.ಕೆ.ಜಿಯನ್ನು ಪ್ರಾರಂಭಿಸದಂತೆ ಇಲಾಖೆಯಿಂದ ತಡೆಯೊಡ್ಡಬೇಕು. ಅದಕ್ಕೆ ಬೇಕಾದ ಎಲ್ಲಾ ರೀತಿಯ ಕ್ರಮಗಳನ್ನು ಕೂಡಲೇ ವಹಿಸಬೇಕು.
   - ಐಸಿಡಿಎಸ್ 6 ಉದ್ದೇಶಗಳಿಗೆ ಬಿಟ್ಟು ಉಳಿದ ಯಾವುದೇ ಕೆಲಸವನ್ನು ಅಂಗನವಾಡಿ ನೌಕರರಿಂದ ಕಡ್ಡಾಯವಾಗಿ ಮಾಡಿಸಬಾರದು.
2. ಹೊಸ ಶಿಕ್ಷಣ ನೀತಿಯ ಶಿಫಾರಸ್ಸಿನಲ್ಲಿರುವ 3 ರಿಂದ 9 ವರ್ಷದ ವರ್ಗೀಕರಣವನ್ನು ವಿರೋಧಿಸಬೇಕು.
3. ಈಗಿರುವ ನಿವೃತ್ತಿ ಸೌಲಭ್ಯವನ್ನು ಬದಲಾಯಿಸಿ ಐ.ಎಲ್.ಸಿ ಆಧಾರಿತ ಪೆನ್‌ಷನ್ ನೀಡಬೇಕು.
   - ರಾಜ್ಯ ಮತ್ತು ಕೇಂದ್ರ ಸರ್ಕಾರಿ ನೌಕರರಿಗೆ ಕೊಡುವ ಎನ್.ಪಿ.ಎಸ್ ಮಾನದಂಡದಂತೆ ವೇತನ ವಂತಿಕೆ ಆಧಾರಿತ ಪಿಂಚಣಿ ಯೋಜನೆ ಜಾರಿ ಮಾಡಬೇಕು.
   - ನಿವೃತ್ತಿ ಆದ ಕಾರ್ಯಕರ್ತೆಯರಿಗೆ ಮತ್ತು ಸಹಾಯಕಿಗೆ ಇಡುಗಂಡು ತಕ್ಷಣ ಬಿಡುಗಡೆ ಆಗಬೇಕು.
   - ಇಲಾಖೆಯ ಲೋಪದೋಷಗಳಿಂದ ಪ್ರಾನ್ ಕಾರ್ಡು ನೀಡದವರಿಗೆ – ಹಣ ಕಡಿತ ಆಗದವರಿಗೂ ನಿವೃತ್ತಿ ಸೌಲಭ್ಯ ಬಿಡುಗಡೆ ಮಾಡಬೇಕು.
   - ಕಾರ್ಯಕರ್ತೆ– ಸಹಾಯಕಿಯರಿಗೆ ಪ್ರಾನ್ ಕಾರ್ಡು ನೀಡದವರಿಗೆ ತಕ್ಷಣ ನೀಡಬೇಕು.
   - 2016 ಏಪ್ರಿಲ್ ನಿಂದ ಆಯ್ಕೆ ಆದ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ಖಾಯಂ ನಿವೃತ್ತಿ ಸೌಲಭ್ಯದಡಿ ತರಬೇಕು.
   - ಈಗಾಗಲೇ ನಿವೃತ್ತಿ ಆದವರಿಗೆ ಕನಿಷ್ಠ 6000/– ರೂ ಪಿಂಚಣಿ ನೀಡಬೇಕು.
4. ಸೇವಾ ಜೇಷ್ಠತೆಯ ಆಧಾರದಲ್ಲಿ ಕನಿಷ್ಠ ವೇತನ ಜಾರಿ ಮಾಡಬೇಕು : 45 ಐಎಲ್.ಐ.ಸಿ ಯ ಶಿಫಾರಸ್ಸಿನ ಪ್ರಕಾರ 21,000 ಕನಿಷ್ಠ ವೇತನ ಜಾರಿ ಮಾಡಬೇಕು. ದಿನಕ್ಕೆ 6–30 ಘಂಟೆ ಕೆಲಸ ಮಾತೃಪೂರ್ಣ ಮುಂತಾದ ಕೆಲಸ ಹೊರೆಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಮತ್ತೊಂದೆಡೆ ಬೆಲೆಯೇರಿಕೆ, ಮಾತ್ರವಲ್ಲದೆ ಹರಿಯಾಣ, ತೆಲಂಗಾಣ, ಆಂದ್ರಪ್ರದೇಶ, ತಮಿಳುನಾಡು, ಗೋವಾ, ಪಾಂಡಿಚೇರಿ, ಕೇರಳ ಮುಂತಾದ ರಾಜ್ಯಗಳಲ್ಲಿ 11 ರಿಂದ 19 ಸಾವಿರ ವೇತನ ಹೆಚ್ಚಳವಾಗಿದೆ. ಆದ್ದರಿಂದ ರಾಜ್ಯದಲ್ಲಿಯೂ ಕೂಡಾ ಗೌರವಧನ ಹೆಚ್ಚಳವಾಗಬೇಕು ಮತ್ತು ಸೇವಾ ಜೇಷ್ಠತೆಯ ಆಧಾರದಲ್ಲಿ ಈ ಭಾರಿ ಕಡ್ಡಾಯವಾಗಿ ವೇತನವನ್ನು ನಿಗದಿಪಡಿಸಬೇಕು.
   - ಮಾತೃಪೂರ್ಣ ಯೋಜನೆಯ ನಂತರ ಸಹಾಯಕಿಯರ ಕೆಲಸ ದುಪ್ಪಟ್ಟು ಆಗಿರುವುದರಿಂದ ಕಾರ್ಯಕರ್ತೆಯರಿಗೆ ನೀಡುವ ಗೌರವಧನದ 75% ಸಹಾಯಕಿಯರಿಗೂ ಕೊಡಬೇಕು.
   - ಮಿನಿ ಅಂಗನವಾಡಿ ಕಾರ್ಯಕರ್ತೆಯರಿಗೆ ಎರಡು ರೀತಿಯ ಕೆಲಸ ನಿರ್ವಹಿಸುವುದರಿಂದ ರಾಜ್ಯದಿಂದ ಅಂಗನವಾಡಿ ಕಾರ್ಯಜರ್ತೆಯರಿಗೆ ಕೊಡುವ ಗೌರವಧನವನ್ನು ಇವರಿಗೂ ಕೊಡಬೇಕು.
5. ಮೇಲ್ವೀಚಾರಕಿಯಾಗಿಮುಂಬಡ್ತಿ ಹೊಂದುವ ಹುದ್ದೆಗಳನ್ನು ಸಂಪೂರ್ಣ ಅಂಗನವಾಡಿ ನೌಕರರಿಗೆ ಕೊಡಬೇಕು. ಮೇಲ್ವಿಚಾರಕಿಯರ ಹುದ್ದೆಗಳಿಗೆ 2015 ರ ಭಾರತ ಸರ್ಕಾರದ ಸುತ್ತೋಲೆ ಪ್ರಕಾರ ಈಗಾಗಲೇ ಇರುವಂತೆ, 50% ಹುದ್ದೆಗಳಿಗೆ ಮುಂಬಡ್ತಿ ಪ್ರಕ್ರಿಯೆಯನ್ನು ತಕ್ಷಣ ಪ್ರಾರಂಭಿಸಬೇಕು:–2015 ರ ಸುತೋಲೆ ಪ್ರಕಾರ ಮೇಲ್ವೀಚಾರಕಿಯರ ಹುದ್ದೆಗೆ ಮುಂಬಡ್ತಿ ಕೊಡಲು ಸೂಕ್ತ ಕಾನೂನು ಕ್ರಮವನ್ನು ವಹಿಸಬೇಕು ನಂ.1–2 /2014– ಸಿಡಿ–1 ಕೇಂದ್ರ ಸರ್ಕಾರದ ಆದೇಶ 15 ಸೆಪ್ಟೆಬರ್ 2015 ರ ಆದೇಶದಂತೆ ಒಟ್ಟು ಖಾಲಿ ಇರುವ ಮೇಲ್ವೀಚಾರಕಿಯರ ಹುದ್ದೆಗಳಿಗೆ ಅಂಗನವಾಡಿ ನೌಕರರಿಗೆ 50% ಮುಂಬಡ್ತಿ ಕೊಡಬೇಕೆಂದೂ ಆದೇಶಿಸಿದೆ. ರಾಜ್ಯದಲ್ಲಿ ವಿಶೇಷ ಪ್ರಕರಣ ಎಂದು ಪರಿಗಣಿಸಿ ಮುಂಬಡ್ತಿ ಕೊಡಲು ಕಾನೂನಿನಲ್ಲಿ ಬದಲಾವಣೆ ತರಬೇಕು.

   ಕರ್ನಾಟಕದಲ್ಲಿ ಭಾರತ ಸರ್ಕಾರ ಹಿಂದೆ ನಿಗದಿ ಪಡಿಸಿದ 45% ಮೀಸಲಾತಿ ಆಧಾರದಲ್ಲಿ ಕೆ.ಪಿ.ಎಸ್.ಸಿ ಮುಖಾಂತರ ಮೇಲ್ವೀಚಾರಕಿಯರ ಹುದ್ದೆಗಳಿಗೆ ಭರ್ತಿ ಮಾಡಿಕೊಳ್ಳುವ ತೀರ್ಮಾನದಲ್ಲಿ ಅಂಗನವಾಡಿ ನೌಕರರಿಗೆ ಅನ್ಯಯವಾಗಿದೆ. 20% 7 ವರ್ಷ ಸೇವೆ ಮತ್ತು ಪಧವೀಧರ ಅಂಗನವಾಡಿ ನೌಕರರಿಗೆ 25% 10 ವರ್ಷ ಸೇವೆ ಮತ್ತು ಖ.ಖ.ಐ.ಅ ಪಾಸಾದವರಿಗೆ ಸಂಪೂರ್ಣ ಕೊಡಬೇಕಿದೆ. ಆದರೆ ಈ 5% ಗಳಲ್ಲಿ ಅಂಗನವಾಡಿ ನೌಕರರಿಗೆ ತರಬೇತಿ ಕೊಡುವ ಸಂಸ್ಥೆಗಳ ಪ್ರಿನ್ಸಿಪಾಲರು ಮತ್ತು ಪ್ರಾಧ್ಯಾಪಕರುಗಳಿಗೆ ಇದರಲ್ಲಿಯೇ ಮೀಸಲಾತಿ ಕೊಟ್ಟಿರುವುದು ಅನ್ಯಾಯವಾಗಿದೆ ಮತ್ತು ಇದು ಕೇಂದ್ರ ಸರ್ಕಾರದ ಸುತ್ತೋಲೆಗಳಿಗೆ ವ್ಯತಿರಿಕ್ತವಾಗಿದೆ. ಆದ್ದರಿಂದ ಇನ್ನೂ ಮುಂದೆ ಈ ರೀತಿ ಆಗದಂತೆ ಎಚ್ಚರಿಕೆ ವಹಿಸಬೇಕು.
6. ಆದೇಶ ಸಂಖ್ಯೆ ಮಾಮಾಇ 237 ಐಸಿಡಿ 2012. ಬೆಂಗಳೂರು ದಿನಾಂಕ 15/6/2102 ಆದೇಶದ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಆಯ್ಕೆ ಕುರಿತು ಪರಿಷ್ಕೃತ ಆದೇಶದಲ್ಲಿರುವ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಉಪ ನಿರ್ದೇಶಕರು, ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ. ಇವರಿಗೆ ಶಿಸ್ತು ಪ್ರಾಧೀಕಾರ ವಹಿಸಿರುವುದರಿಂದ ಇಡೀ ರಾಜ್ಯದಲ್ಲಿ ಅಂಗನವಾಡಿ ನೌಕರರು ಭಯಭೀತರಾಗುತ್ತಿದ್ದಾರೆ. ಆದ್ದರಿಂದ ಇಲಾಖೆಯ ಅಧಿಕಾರಿಗಳಿಗೆ ಶಿಸ್ತು ಕ್ರಮ ಕೈಗೊಳ್ಳುವ ಆದೇಶವನ್ನು ನೀಡಿ ಉಳಿದವರನ್ನು ಈ ಜವಬ್ದಾರಿ ಯಿಂದ ಬಿಡುಗಡೆ ಮಾಡಬೇಕೆಂದು ಒತ್ತಾಯಿಸುತ್ತೇವೆ. ಈ ರೀತಿಯ ಪದ್ಧತಿ ಬೇರೆ ರಾಜ್ಯಗಳಲ್ಲಿ ಇಲ್ಲ.
7. ಅಂಗನವಾಡಿ ಸಹಾಯಕಿ ಕಾರ್ಯಕರ್ತೆಯಾಗಿ ಮುಂಬಡ್ತಿ ಪಡೆಯಲು ಇರುವ ವಯಸ್ಸಿನ ಭೌಗೋಳಿಕ ವಿಸ್ತೀರ್ಣದ ಮಿತಿಯನ್ನು ಸಡಿಲಿಸಬೇಕು.
8. ಅನುಕಂಪದ ಆಧಾರದಲ್ಲಿರುವ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಮದುವೆಯಾಗದ ಹೆಣ್ಣು ಮಕ್ಕಳಿಗೆ ಎಂಬ ಷರತ್ತನ್ನು ತೆಗೆದು ಕುಟುಂಬದವರಿಗೆ ಎಂದು ತಿದ್ದುಪಡಿಯಾಗಬೇಕು.
9. ಖಾಲಿಯಿರುವ ಸಹಾಯಕಿ ಮತ್ತು ಕಾರ್ಯಕರ್ತೆಯರ ಹುದ್ದೆಗಳನ್ನು ತುಂಬಬೇಕು.
10. ಹಲವು ಯೋಜನೆಗಳಿಗೆ ಡಿಡಿ, ಪಿಓ, ಸಿಡಿಪಿಓ, ಎಸಿಡಿಪಿಓ ಮೇಲ್ವಿಚಾರಕಿಯರನ್ನು ಖಾಯಂ ಆಗಿ ನೇಮಕ ಮಾಡಬೇಕು.
11. ಅಂಗನವಾಡಿ ಕಾರ್ಯಕರ್ತೆಯರಿಗೆ ಸೇವಾ ನಿಯಾಮಾವಳಿ ರಚಿಸಬೇಕು.
12. ಕೇಂದ್ರ ಸರ್ಕಾರ ಕಡಿತ ಮಾಡಿರುವ ಅನುದಾನ ವಾಪಸ್ಸು ಆಗಬೇಕು.
13. ಅಂಗನವಾಡಿ ಕೇಂದ್ರದ ಫಲಾನುಭವಿಗಳಿಗೆ ನೇರ ನಗದು ವರ್ಗಾವಣೆಯನ್ನು ಸೂಚನೆಯನ್ನು ರಾಜ್ಯ ಸರ್ಕಾರ ಒಪ್ಪಬಾರದು.
14. ವರ್ಷಗಳನ್ನು ಪೂರೈಸಿದ ಮೇಲ್ವಿಚಾರಕಿಯರನ್ನು ಕಡ್ಡಾಯ ವರ್ಗಾವಣೆ ಮಾಡಬೇಕು.

●



ಗಾಂಧಿ ಬದಲಾವಣೆಗೆ ಸಿದ್ಧರಿದ್ದರು : ಡಾ.ಜಿ.ಭಾಸ್ಕರ ಮಯ್ಯ

ಮಂಗಳೂರಿನಲ್ಲಿ ಸಮುದಾಯದ 'ಗಾಂಧಿ 150' ವಿಚಾರ ಸಂಕಿರಣ

ನವೆಂಬರ್ 24 ರಂದು ಮಂಗಳೂರು ಸಮುದಾಯದ 7ನೇ ಘಟಕ ಸಮ್ಮೇಳನದ ಭಾಗವಾಗಿ "ಗಾಂಧಿ ಚಿಂತನೆಗಳೊಂದಿಗೆ ಮುಖಾಮುಖಿ" ಎಂಬ ವಿಚಾರ ಸಂಕಿರಣ ನಡೆಯಿತು. 'ಗಾಂಧಿ ಮತ್ತು ಹಿಂದ್ ಸ್ವರಾಜ್' ಬಗ್ಗೆ ಡಾ.ದಿನೇಶ್ ನಾಯಕ್, 'ಇ.ಎಂ.ಎಸ್ ಕಂಡಂತೆ ಗಾಂಧಿ' ಬಗ್ಗೆ ಡಾ.ಕೃಷ್ಣಪ್ಪ ಕೊಂಚಾಡಿ, 'ಗಾಂಧಿ ಮತ್ತು ಅಂಬೇಡ್ಕರ್' ಬಗ್ಗೆ ಡಾ.ವಾಸುದೇವ ಬೆಳ್ಳೆ ವಿಚಾರ ಮಂಡಿಸಿದರು. ಗಾಂಧಿಯವರನ್ನು ಅವರದೇ ಒಂದು ಬರಹದ ನೆಲೆಯಲ್ಲಿ, ಮಾರ್ಕ್ಸ್‌ವಾದದ ನೆಲೆಯಲ್ಲಿ ಮತ್ತು ಅಂಬೇಡ್ಕರ್ ದೃಷ್ಟಿಕೋನದಿಂದ – ಹೀಗೆ 3 ಕೋನಗಳಿಂದ ವಿಶ್ಲೇಷಿಸುವ ಪ್ರಯತ್ನ ಈ ವಿಚಾರ ಸಂಕಿರಣದಲ್ಲಿ ನಡೆಯಿತು. ಕರಾವಳಿಯ ಹಿರಿಯ ವಿದ್ವಾಂಸ ಡಾ.ಜಿ.ಭಾಸ್ಕರ ಮಯ್ಯ ಅವರ ದಿಕ್ಸೂಚಿ ಭಾಷಣ ಅಪೂರ್ವ ಒಳನೋಟಗಳನ್ನು ಒದಗಿಸಿಕೊಟ್ಟಿತು.



ಪ್ರೊ.ಜಿ. ಭಾಸ್ಕರ ಮಯ್ಯ ಅವರು 20ನೇ ಶತಮಾನವನ್ನು ಜಾಗತಿಕವಾಗಿ ಪರಿವರ್ತಿಸುವಲ್ಲಿ ಗಾಂಧಿ, ಐನ್‌ಸ್ಟೈನ್ ಮತ್ತು ಲೆನಿನ್ ಅವರ ಹೆಸರುಗಳು ಅತಿ ಮುಖ್ಯದ್ದಾಗಿದೆ ಎಂದು ತಿಳಿಸುತ್ತಾ, ಗಾಂಧಿ ವಸಾಹತುಶಾಹಿಯನ್ನು ಹಾಗೂ ಪಾಳೆಗಾರಿ ಭಾರತದ ಜಗತ್ತನ್ನು ಎದುರಿಸುತ್ತಾ ಹೋದ ದಾರಿಯನ್ನು ವಿವರಿಸಿ, ಈ ದಾರಿಯಲ್ಲಿ ಅವರು ಅಂತಿಮವಾಗಿ ಯಾವ ದರ್ಶನದೆಡೆಗೆ ಬಂದರು ಎಂದು ವಿಶ್ಲೇಷಿಸಿದರು.

ಚಿತ್ರಗಳಲ್ಲಿ ನಾವು ಕಂಡ ನಿತ್ಯವೇಷದಲ್ಲೇ ಗಾಂಧೀಜಿ ಇಂಗ್ಲೆಂಡಿನ ರಾಣಿಯನ್ನು ಭೇಟಿಯಾಗುತ್ತಾರೆ. ದೇಶದ ಸ್ವಾತಂತ್ರ್ಯದ ಘಟ್ಟದಲ್ಲಿ ಕೋಮು ದಾಳಿಯಿಂದ ಉರಿಯುತ್ತಿದ್ದ ನೌಕಾಲಿಯಲ್ಲಿ ಬರಿಗಾಲಲ್ಲಿ ನಡೆದು ಉದ್ರಿಕ್ತ ಜನರನ್ನು ಮಾತಾಡಿಸುತ್ತಾರೆ. ಹೃದಯದ ಪಾವಿತ್ರ್ಯ ಉಳ್ಳವರು ಇದ್ದವರು ಮಾತ್ರ ನೌಕಾಲಿಯಲ್ಲಿ ಜನರ ದಾಳಿಯನ್ನು ಎದುರಿಸಲು ಹಾಗೂ ಕೋಮು ಜ್ವಾಲೆಯನ್ನು ತಣ್ಣಗಾಗಿಸಲು ಸಾಧ್ಯವಾಯಿತು. ಅಹಿಂಸೆಯ ಬಗ್ಗೆ ರಾಜಿಯಿಲ್ಲದ ತಾತ್ವಿಕನಾದರೂ, ಆ ಕೊನೆಯ ದಿನಗಳಲ್ಲಿ "32 ವರ್ಷಗಳ ಅನಂತರ ನನ್ನ ಕಣ್ಣುಗಳು ತೆರೆದಿವೆ. ನಮ್ಮ ಅಹಿಂಸೆ ದುರ್ಬಲರ ಅಹಿಂಸೆ" ಎಂದು ಹೇಳಿದರು. "ನನ್ನ ಮಾತು ಯಾರೂ ಕೇಳುತ್ತಿಲ್ಲ" ಎಂಬ ಅಸಹಾಯಕತೆ ವ್ಯಕ್ತಪಡಿಸುತ್ತಾರೆ. ಸ್ವಾತಂತ್ರ್ಯ ಬಂದ ಮೇಲೆ ಯಾರೋ ಅವರನ್ನು ದೇಶಕ್ಕೆ ಸಂದೇಶ ಕೊಡಲು ಹೇಳಿದಾಗ ಅವರು ಹೇಳುತ್ತಾರೆ – "ನನ್ನ ಬಳಿ ಕೊಡಲು ಯಾವ ಸಂದೇಶವೂ ಇಲ್ಲ."

ಗಾಂಧೀಜಿಯ ಅಹಿಂಸೆ ಹಾಗೂ ಸತ್ಯಾಗ್ರಹದ ಚಳುವಳಿಗಳು ದೇಶದ ಪಾಳೇಗಾರಿ–ಬಂಡವಾಳಶಾಹಿ ಶಕ್ತಿಗಳಿಗೆ ಬಲಕೊಟ್ಟುವು ಎಂಬುದಾಗಿ ಮಾರ್ಕ್ಸ್‌ವಾದಿಗಳು ಟೀಕೆ ಮಾಡುತ್ತೇವೆ. ಆದರೆ ಅವರು ಅದನ್ನು ಬೇಕೆಂದೇ ತಿಳಿದು ಮಾಡಲಿಲ್ಲ. ದೇಶದ ಆಳ್ವಿಕೆ ಒಂದು ಬಲಶಾಲಿ ವಿದೇಶೀ ವರ್ಗದಿಂದ ದೇಶೀಯ ಬಲಶಾಲಿ ವರ್ಗಕ್ಕೆ ಹಸ್ತಾಂತರ ಆಗಲಿದೆ ಎಂಬ ಸಂದೇಹ ಅವರಿಗೆ ಬಂದಿತ್ತು. ಎರಡನೇ ಪ್ರಜಾಪ್ರಭುತ್ವ ಕ್ರಾಂತಿಗೆ ಅವರು ಸಿದ್ಧರಾಗಿದ್ದರು. ಅದಕ್ಕಾಗಿ ಕಾಂಗ್ರೆಸನ್ನು ಬರ್ಖಾಸ್ತು ಮಾಡಿ ಎಂದು ಅವರು ಕರೆ ನೀಡಿದರು. ಅವರ ಅರಿವಿಲ್ಲದೆ ಮೊದಲ ಕ್ರಾಂತಿಯ ಸಲಕರಣೆಗಳೇ ಅವರು ಅಪೇಕ್ಷಿಸುತ್ತಿದ್ದ ಎರಡನೆ ಕ್ರಾಂತಿಯ ತಡೆಗೆ ಬೇಕಾದ ಸಾಧನಗಳಾದುವು.

1909 ರಷ್ಟು ಹಿಂದೆಯೇ ಗಾಂಧಿ ಬರೆದ 'ಹಿಂದ್ ಸ್ವರಾಜ್' ಕೃತಿಯಲ್ಲಿ ಅವರು ಯಂತ್ರನಾಗರಿಕತೆಯನ್ನು ದ್ವೇಷಿಸುತ್ತಾರೆ. ಆದರೆ ಅವರು ಮುಂದೆ ಬರೆದ 'ನನ್ನ ಕನಸಿನ ಭಾರತ' ಎಂಬ 172 ಪುಟಗಳ ಬರಹವನ್ನು ಬಹಳ ಮಂದಿ ಗಮನಿಸುವುದೇ ಇಲ್ಲ. ಅಲ್ಲಿ ಅವರು ನಿರೂಪಿಸುವ ಭಾರತದ ಹಳ್ಳಿಯು 'ಹಿಂದ್ ಸ್ವರಾಜ್'ಗಿಂತ ಮುಂದುವರಿದದ್ದೇ ಆಗಿದ್ದು, ಅದು ಸಮಕಾಲೀನ ಸಮಾಜದ ಅಗತ್ಯಕ್ಕೆ ತಕ್ಕಂತೆ ಆಧುನಿಕಗೊಳ್ಳಬಹುದಾಗಿತ್ತು. ಆದಾಗ್ಯೂ ದೇಶದ ಸ್ವಾತಂತ್ರ್ಯದ ಸಿದ್ಧತೆಗಳು ನಡೆಯುತ್ತಿದ್ದಂತೆ, ನೆಹರೂ ಮುಂದಾಳುತ್ವ ಎತ್ತಿಕೊಳ್ಳುವ ಸಂದರ್ಭದಲ್ಲಿ ಬದಲಾಗುತ್ತಿದ್ದ ಗಾಂಧಿಯ ಆರ್ಥಿಕ ಚಿಂತನೆಗಳನ್ನು ಪರಾಮರ್ಶಿಸಲು ನೆಹರೂ ನಿರಾಕರಿಸಿದರು. ಗಾಂಧಿ ಬದಲಾವಣೆಗೆ ಸಿದ್ಧರಿದ್ದರು. ಅದನ್ನು ಕಾಂಗ್ರೆಸ್ಸಿಗರು ಗುರುತಿಸದೆ ಹೋದರು ಮತ್ತು ಬಂಡವಾಳಶಾಹಿಗೆ ಅನುಕೂಲವಾಗುವ ಆರ್ಥಿಕತೆಗೆ ನೆಲ ಒದಗಿಸಿದರು. "ಮನುಷ್ಯ ಬಯಸುವ ವಸ್ತುವಿಗೆ ಆತನ ಒಡೆತನವಿರಬೇಕು' ಎಂಬುದೇ ಗಾಂಧೀಜಿಯವರ ಆತ್ಯಂತಿಕವಾದ ಚಿಂತನೆ. "ಕೆಲವರು ಮಾತ್ರವೇ ಐಶಾರಾಮದ ಪ್ರಯೋಜನ ಪಡೆಯುವುದಲ್ಲ". ಈ ಬಗೆಯ ಗಾಂಧಿಯವರ ಕೊನೆದಿನಗಳ ಚಿಂತನೆಗಳು ಹೇಗೆ ಬಂಡವಾಳಶಾಹಿ ಭೂಮಾಲಕರ ಪರ ಆದಾವು? ಖ್ಯಾತ ಅರ್ಥಶಾಸ್ತ್ರಜ್ಞ ಪ್ರೊ.ಪ್ರಭಾತ್ ಪಾಟ್ನಾಯಕ್ ಅವರು ಹೀಗೆ ಬದಲಾವಣೆಗೊಂಡ ಗಾಂಧಿ ವಿಚಾರಗಳ ಬಗ್ಗೆ ತಮ್ಮ ಇತ್ತೀಚಿನ ಬರಹದಲ್ಲಿ ಶ್ಲಾಘನೆ ವ್ಯಕ್ತಪಡಿಸುತ್ತಾರೆ.

ಅಂಬೇಡ್ಕರ್ ಮತ್ತು ಗಾಂಧಿ ಅವರ ಮಧ್ಯೆ ಸುದೀರ್ಘಕಾಲ ಸಂವಾದ ನಡೆದಿದೆ. ಒಂದೇ ಗಾಂಧಿ ಇಲ್ಲವೇ ಅಂಬೇಡ್ಕರ್ ಎಂಬ ನೆಲೆಯಲ್ಲಿ ಇವತ್ತೂ ವಾದಿಸುವವರಿದ್ದಾರೆ. ಈ ಧೋರಣೆ ಈ ಇಬ್ಬರು ಮಹಾನ್ ಚೇತನಗಳಿಗೆ ಅನ್ಯಾಯ ಮಾಡಿದಂತೆ. ಪೂನಾ ಒಪ್ಪಂದದ ಬಳಿಕ ಗಾಂಧಿ ಬದಲಾಗಿದ್ದಾರೆ. ಅವರು ಮೊದಲು ಗ್ರಹಿಸಲಾಗದಿದ್ದ ಭಾರತದ ವರ್ಣವ್ಯವಸ್ಥೆ–ಜಾತಿವಿನಾಶವಾಗದೆ ಬದಲಾಗತಕ್ಕದ್ದಲ್ಲ ಎಂಬ ಅಂಬೇಡ್ಕರ್ ತಿಳಿವಳಿಕೆಯ ಸಮೀಪ ಗಾಂಧಿಯವರನ್ನು ಕೊಂಡೊಯ್ಯುತ್ತದೆ. ಅಂಬೇಡ್ಕರ್ ಅವರೂ ಗಾಂಧಿಯ ಒಳಗಿರುವ ಸತ್ಯಪ್ರಿಯತೆ, ಮಾನವ ಪ್ರೀತಿಯನ್ನು ಗುರುತಿಸುತ್ತಾರೆ. ಅಂಬೇಡ್ಕರ್ ಹೇಳುತ್ತಾರೆ – "ಗಾಂಧಿ ಸತ್ಯವನ್ನೇ ಹೇಳುತ್ತಾರೆ. ಆದರೆ ಅದನ್ನು ಜೀರ್ಣಿಸುವ ಶಕ್ತಿ ಯಾರಿಗೂ ಇಲ್ಲ".

ಸಾಮ್ರಾಜ್ಯಶಾಹಿಗಳನ್ನುತೊಲಗಿಸುವುದಕ್ಕಾಗಿಯೇ ಹಿಂದೆ ಸ್ವಾತಂತ್ರ್ಯ ಹೋರಾಟ ನಡೆಸಲಾಗಿತ್ತು. ಹಾಗೆ ದೊರೆತ ಸ್ವಾತಂತ್ರ್ಯವು ಜನಸಾಮಾನ್ಯರಿಗೆ ಲಭಿಸಬೇಕಿತ್ತು. ಆದರೆ ಇಂದು ಆ ಸ್ವಾತಂತ್ರ್ಯವು ದೇಶದೊಳಗಿನ ಪಾಳೇಗಾರಿ ಬಂಡವಾಳಶಾಹಿ ವರ್ಗಕ್ಕೆ ಹಸ್ತಾಂತರಗೊಂಡಿದೆ ಎಂಬ ಖೇದ ಡಾ.ಜಿ.ಭಾಸ್ಕರ ಮಯ್ಯರ ದಿಕ್ಸೂಚಿ ಉಪನ್ಯಾಸದ ತಿರುಳಾಗಿತ್ತು.

'ಗಾಂಧಿ ಮತ್ತು ಹಿಂದ್ ಸ್ವರಾಜ್' ಕುರಿತಾಗಿ ಡಾ.ದಿನೇಶ್ ನಾಯಕ್ ಮಾತನಾಡಿದರು. ಯಾಕೆ 'ಹಿಂದ್ ಸ್ವರಾಜ್' ರಚಿತವಾಯಿತು? ವಸಾಹತುಶಾಹಿ ಮತ್ತು ಅದರ ಬಲಪ್ರಯೋಗದ ವಿರುದ್ಧ, ವಿದೇಶದಲ್ಲಿದ್ದ ಭಾರತೀಯರು ಕೆಲವರ ತೀವ್ರಗಾಮಿ ಚಿಂತನೆಗಳ ವಿರುದ್ಧ ಈ ಕೃತಿ ರಚನೆಯಾಗಿದೆ. 'ಹಿಂದ್ ಸ್ವರಾಜ್' ನಾಗರಿಕ ಅಸಹಕಾರದ ಕಲ್ಪನೆಯನ್ನು ಗಾಂಧೀಜಿ ಪಡಕೊಂಡಿದ್ದು ರಷ್ಯನ್ ಸಾಹಿತಿ ಟಾಲ್‌ಸ್ಟಾಯ್‌ನಿಂದ. ಈ ಕೃತಿಯಲ್ಲಿ ಏನಿದೆ? ತೀವ್ರವಾದ ಆಧುನೀಕತೆಯನ್ನು ಕೃತಿ ವಿರೋಧಿಸುತ್ತದೆ. ಆಧುನಿಕ ಬಲಿಷ್ಟ ರಾಷ್ಟ್ರ ಕಲ್ಪನೆ ಮನುಷ್ಯನಿಗೆ ತನ್ನ ಕರ್ತವ್ಯಗಳನ್ನು ತಿಳಿಸಿಕೊಡುವುದಿಲ್ಲ. ಭಾರತಕ್ಕೆ ರಾಷ್ಟ್ರೀಯತೆಯ ಪರಿಕಲ್ಪನೆ ಬಂದುದಕ್ಕೆ ಆಧುನಿಕತೆಯ ಪ್ರವೇಶವೇ ಕಾರಣ ಎಂದರು ಗಾಂಧಿ. ಸ್ವರಾಜ್ ಎಂದರೆ ತನ್ನನ್ನು ತಾನು ಆಳುವುದು ಎಂದು ಅರ್ಥ. 'ಹಿಂದ್ ಸ್ವರಾಜ್' ಬರಹದ ಸ್ವರೂಪ ಏನು? ಇದು ಇಬ್ಬರು ವ್ಯಕ್ತಿಗಳ ನಡುವಿನ ಸಂವಾದದ ಶೈಲಿಯಲ್ಲಿದೆ. ಎದುರುಗಡೆಯವರನ್ನು ಒಳಗೊಂಡು ಮಾತನಾಡುವ ಶೈಲಿಯಲ್ಲಿದೆ. ಇಲ್ಲಿ ವಾಗ್ಮಿಯ ಅಬ್ಬರ, ಠೇಂಕಾರವಿಲ್ಲ. ಗಾಂಧೀಜಿಯವರಿಗೆ ಅನೇಕರಲ್ಲಿ ಅಭಿಪ್ರಾಯಭೇದವಿತ್ತು. ಆದರೆ ಭಿನ್ನಾಭಿಪ್ರಾಯವುಳ್ಳವರ ಜೊತೆ ಅವರು ಆಪ್ತತೆಯನ್ನು ಕಳೆದುಕೊಂಡಿರಲಿಲ್ಲ. ಇದು ಅವರ ಹಿರಿಮೆಯಾಗಿದೆ ಎಂದು ಡಾ.ದಿನೇಶ್ ನಾಯಕ್ ವಿವರಿಸಿದರು.

ಡಾ.ಕೃಷ್ಣಪ್ಪ ಕೊಂಚಾಡಿಯವರ ಪ್ರಬಂಧವನ್ನು ಅವರ ಅನುಪಸ್ಥಿತಿಯಲ್ಲಿ ಮಾಧುರಿ ಬೋಳಾರ್ ವಾಚಿಸಿದರು. "ಇ.ಎಂ.ಎಸ್ ಕಂಡಂತೆ ಗಾಂಧಿ" ಎಂಬುದು ಅವರ ಪ್ರಬಂಧವಾಗಿತ್ತು. ಇಎಂಎಸ್ ನಂಬೂದಿರಿಪಾಡರು ಗಾಂಧಿಯವರೊಂದಿಗೆ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗಿಯಾಗಿದ್ದ ಪ್ರಸಿದ್ಧ ಮಾರ್ಕ್ಸ್‌ವಾದಿ ಚಿಂತಕರು. ಗಾಂಧೀಜಿಯವರಿಗೆ ಸತ್ಯ, ಅಹಿಂಸೆ, ವಿರಕ್ತಿ ಅವರ ನೈತಿಕ ಮೌಲ್ಯಗಳು; ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಶಾಂತಿ ರಾಜಕೀಯ ಮೌಲ್ಯಗಳು; ಜಾತಿಭೇದದ ನಿರ್ಮೂಲನೆ, ಮಹಿಳಾ ಉದ್ಧಾರ, ಅಸ್ಪೃಶ್ಯತಾ ಆಚರಣೆಯ ವಿರುದ್ಧ ಆಂದೋಲನ, ಧಾರ್ಮಿಕ ಕೋಮುಗಳ ಮಧ್ಯೆ ಐಕ್ಯತೆ ಸಾಮಾಜಿಕ ಮೌಲ್ಯಗಳಾಗಿದ್ದವು. ಈ ನೆಲೆಯ ಹೋರಾಟದ ಪ್ರಮುಖ ಕಾಲಘಟ್ಟದಲ್ಲಿ ಅಸಂಖ್ಯಾತ ಪ್ರಜಾಸತ್ತಾತ್ಮಕ ಗುರಿಗಳನ್ನು ಅವರು ಪ್ರತಿಪಾದಿಸಿದ್ದಲ್ಲದೆ, ಕೊನೆಯಲ್ಲಿ ರಾಷ್ಟ್ರೀಯ ಐಕ್ಯತೆಯ ಉದಾತ್ತ ಗುರಿಸಾಧನೆಯಲ್ಲಿ ಅವರೇ ಸ್ವತ: ಹುತಾತ್ಮರಾಗುವಂತೆ ಮಾಡಿದ್ದು ಕೂಡಾ ಇವೇ ಅವರ ಮೌಲ್ಯಗಳು ಎಂದು ಇ.ಎಂ.ಎಸ್. ರವರು ನಮೂದಿಸುತ್ತಾರೆ. ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಅವರ ಹಲವು ವಿಚಾರಗಳು ಖಂಡಿತವಾಗಿಯೂ ಪ್ರತಿಗಾಮಿ ವಿಚಾರಗಳೇ ಆಗಿದ್ದು, ಈ "ಪ್ರತಿಗಾಮಿ" ವಿಚಾರಗಳೇ ವಿಶಾಲ ರೈತಾಪಿ ಜನಸಮೂಹ ಮತ್ತು ಆಧುನಿಕ ರಾಷ್ಟ್ರೀಯ ಪ್ರಜಾಪ್ರಭುತ್ವ ಆಂದೋಲನದ ನಯ–ನಾಜೂಕಿನ ಮುಖಂಡರ ನಡುವೆ ಒಂದು ಸೇತುವೆ ಕಟ್ಟಲು ಗಾಂಧೀಜಿಗೆ ಅನುವು ಮಾಡಿಕೊಟ್ಟವು ಎಂಬ ಸತ್ಯಾಂಶವನ್ನು ಗುರುತಿಸದೇ ಇರುವುದು ಕೂಡಾ ತಪ್ಪಾಗುತ್ತದೆ ಎಂದು ಇ.ಎಂ.ಎಸ್. ಹೇಳುತ್ತಾರೆ. ಈ ವಿರೋಧಾಭಾಸ ನಮ್ಮ ದೇಶದ ರಾಜಕೀಯ ವಿರೋಧಾಭಾಸದ ಒಂದು ಪ್ರತಿಫಲನ ಎಂದು ಹೇಳುತ್ತಾರೆ. ಅದೇನೆಂದರೆ ನಮ್ಮ ರಾಷ್ಟ್ರೀಯ ಪ್ರಜಾಪ್ರಭುತ್ವ ಆಂದೋಲನದ ಮುಖಂಡತ್ವವನ್ನು ಬಂಡವಾಳಶಾಹಿ ವರ್ಗ ವಹಿಸಿತ್ತು. ಅದು ತಾನು ಕುಟ್ಟಿ ಪುಡಿ ಪುಡಿ ಮಾಡಿ ನಾಶ ಮಾಡಬೇಕಾಗಿದ್ದ ಪಾಳೆಯಗಾರಿ ಶಕ್ತಿಗಳೊಂದಿಗೆ ಕೈಜೋಡಿಸಿರುವ ರಾಜಕೀಯ ವಸ್ತುಸ್ಥಿತಿಯಿಂದ ಮೂಡಿಬಂದ ವಿರೋಧಾಭಾಸವಾಗಿದೆ ಎಂದು ಇ.ಎಂ.ಎಸ್ ಹೇಳುತ್ತಾರೆ.

"ಗಾಂಧಿ ಮತ್ತು ಅಂಬೇಡ್ಕರ್" ಕುರಿತು ಮಾತನಾಡಿದ ಡಾ.ವಾಸುದೇವ ಬೆಳ್ಳೆ ಅವರು ಗಾಂಧಿ ವಿಚಾರಗಳ ಮಾರ್ಕ್ಸ್‌ವಾದಿ ವಿಶ್ಲೇಷಣಾ ವಿಧಾನದಿಂದ, ತಾನು ಅಂಬೇಡ್ಕರ್‌ವಾದಿಗಳ ನೆಲೆಯಲ್ಲಿ ಗಾಂಧಿಚಿಂತನೆಗಳ ವಿಶ್ಲೇಷಣೆ ನಡೆಸುವ ಕ್ರಮದಲ್ಲಿ ಕೆಲವು ನ್ಯೂನತೆಗಳನ್ನು ಕಂಡುಕೊಂಡುದಾಗಿ ತಿಳಿಸಿದರು. 1909 ರಲ್ಲಿ 'ಹಿಂದ್ ಸ್ವರಾಜ್' ಪ್ರಕಟವಾದಾಗ ಅಂಬೇಡ್ಕರ್ ಅವರಿಗೆ 18–19 ವರ್ಷ. ಅವರಿಬ್ಬರ ಮಧ್ಯೆ ವಯಸ್ಸಿನಲ್ಲಿ 30 ವರ್ಷಗಳ ಅಂತರವಿದೆ. ಅವರಿಬ್ಬರ ನಡುವೆ ಪೂನಾ ಒಪ್ಪಂದದಿಂದ ಮೊದಲಾದ ಬಿರುಸಿನ ಚರ್ಚೆ ಸಂಪೂರ್ಣ ಅಹಿಂಸಾಮಟ್ಟದ್ದಾಗಿದ್ದು, ಅವರಿಬ್ಬರ ಪ್ರಾಮಾಣಿಕತೆಯನ್ನು ಎತ್ತಿ ಹಿಡಿಯುತ್ತದೆ. ಗಾಂಧಿಯವರ ಸ್ವರಾಜ್ ಜಾರಿಯನ್ನು ಯಾರು ನಡೆಸುವವರು–ಅದರ ಮೆಕಾನಿಸಂ ಏನು–ಎಂಬ ಪ್ರಶ್ನೆ ಅಂಬೇಡ್ಕರ್ ಕೇಳುತ್ತಾರೆ. ಅವರೆತ್ತಿದ ತಕರಾರು ಮುಂದೆ ಗಾಂಧೀಜಿಗೆ ತಮ್ಮ ಪ್ರಾಯೋಗಿಕ ಹಂತದಲ್ಲಿ ವರ್ಣವ್ಯವಸ್ಥೆಯ ಬಗೆಗಿನ ತಮ್ಮ ಅರಿವನ್ನು ಬದಲಿಸಲು ಕಾರಣವಾಯಿತು. ಜಾತಿ–ವರ್ಣವ್ಯವಸ್ಥೆ ನಾಶ ಮಾಡದೆ ನೀವು ಹೇಗೆ ಪ್ರಜಾಸತ್ತೆ–ಗ್ರಾಮಸ್ವರಾಜ್ಯವನ್ನು ಕಟ್ಟಲು ಸಾಧ್ಯ ಎಂದು ಅಂಬೇಡ್ಕರ್ ನೇರ ಪ್ರಶ್ನಿಸುತ್ತಾರೆ. ಗಾಂಧಿ ಅವರು ಅಂಬೇಡ್ಕರ್ ಅವರ ಬಗ್ಗೆ ಅತ್ಯಂತ ಗೌರವ ಕೊಡುತ್ತಾರೆ. ಗಾಂಧಿ ಬ್ರಿಟಿಷರನ್ನು ದೇಶದಿಂದ ಹೊರಗಟ್ಟುವ ಹೋರಾಟದ ನೇತಾರರಾಗಿದ್ದರು. ಅಂಬೇಡ್ಕರ್ ಅವರು ಗಾಂಧಿ ಗಳಿಸಿಕೊಟ್ಟ ಸ್ವತಂತ್ರ ದೇಶವನ್ನು ಕಟ್ಟುವ ವ್ಯವಸ್ಥೆಗೆ 'ಸಂವಿಧಾನ'ದ ಮೂಲಕ ತಳಪಾಯ ಹಾಕಿದ್ದರು. ಗಾಂಧಿ–ಅಂಬೇಡ್ಕರ್ ಪರಸ್ಪರ ವಿರುದ್ಧ ಧ್ರುವಗಳಲ್ಲ. ಗಾಂಧಿ ತಮ್ಮ ಆರಂಭದ ಚಿಂತನೆಗಳಲ್ಲಿ ವರ್ಣಾಶ್ರಮ ಎಂದರೆ ಶ್ರಮದ ವರ್ಗೀಕರಣ ಎಂದಿದ್ದರು. ಆದರೆ ಅದು ಶ್ರಮದ ವರ್ಗೀಕರಣವಲ್ಲ, ಶ್ರಮ ಜೀವಿಗಳ ವರ್ಗೀಕರಣ ಎನ್ನುತ್ತಾರೆ ಅಂಬೇಡ್ಕರ್. ಬರಲಿರುವುದು ಭೂಮಾಲಕ ಸ್ವಾತಂತ್ರ್ಯ. ಮೊದಲು ತಳಜಾತಿಗಳ ಸ್ವಾತಂತ್ರ್ಯ ಬರಲಿ, ಆ ಬಳಿಕ ಭೂಮಾಲಕ ಸ್ವಾತಂತ್ರ್ಯ ಬರಬೇಕು ಎಂದಿದ್ದರು ಅಂಬೇಡ್ಕರ್. ಅಂಬೇಡ್ಕರ್–ಗಾಂಧಿ ಮುಖಾಮುಖಿ ವಿದೇಶೀವಾದ (ಪ್ರಜಾಪ್ರಭುತ್ವ, ಸೆಡಕ್ಯುಲಾರಿಸಂ ಇವನ್ನು ಹಾಗೆಂದು ಪರಿಗಣಿಸಿದಲ್ಲಿ) ಮತ್ತು ದೇಶೀವಾದದ ನಡುವಿನ ಮುಖಾಮುಖಿ ಎಂದರೂ ತಪ್ಪಲ್ಲ ಎಂಬುದಾಗಿ ಡಾ. ವಾಸುದೇವ ಬೆಳ್ಳೆ ವಿಶ್ಲೇಷಿಸಿದರು.

ಸಮುದಾಯ ಕರ್ನಾಟಕದ ಸಂಘಟಕರಲ್ಲೊಬ್ಬರಾದ ವಾಸುದೇವ ಉಚ್ಚಿಲ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಮಂಗಳೂರು ಸಮುದಾಯದ ಕಾರ್ಯದರ್ಶಿ ಮನೋಜ್ ವಾಮಂಜೂರು ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು. ●

ರಾಜ್ಯ–ಪ್ರಾಂತಗಳ ಸಂಬಂಧವನ್ನು ಇಂದು ಕೇಂದ್ರವು ಸಮಾನತೆಯ ನೆಲೆಯಲ್ಲಿ ನಿರ್ವಹಿಸುತ್ತಿಲ್ಲ. ರಾಷ್ಟ್ರೀಯತೆ ಎನ್ನುವುದು ಏಕಾಕಾರಿ ಸಂಗತಿಯಲ್ಲ. ನಮ್ಮ ಸಮಾಜದ ಬಹುರೂಪಿ ಸಂಸ್ಕೃತಿಯ ರಕ್ಷಣೆಯಲ್ಲಿಯೇ ರಾಷ್ಟ್ರೀಯತೆಯನ್ನು ಸಾಧಿಸಿಕೊಳ್ಳಬೇಕಾಗಿದೆ. ಪ್ರಾಂತೀಯತೆಯನ್ನು ರಾಷ್ಟ್ರೀಯತೆಯ ವಿರೋಧದ ನೆಲೆಯಲ್ಲಿ ಪರಿಭಾವಿಸಿಕೊಳ್ಳುವ ಅಗತ್ಯವಿಲ್ಲ. ಇವೆರಡೂ ಪರಸ್ಪರ ಪೂರಕ ಸಂಬಂಧದ ಕರ್ನಾಟಕದ ಸ್ವಾಯತ್ತತೆ ಎಂದರೆ ಅದು ಕೇವಲ ಭಾಷೆಯ ಪ್ರಶ್ನೆಯಲ್ಲ. ಅದು ಇಡೀ ಸಮುದಾಯದ ಬದುಕಿನ ಪ್ರಶ್ನೆ. ಕೇಂದ್ರವು ಒಕ್ಕೂಟ ಧರ್ಮವನ್ನು ಪಾಲಿಸುತ್ತಿಲ್ಲ. ಅದು ಪ್ರಜ್ಞಾಪೂರ್ವಕವಾಗಿ ಕೇಂದ್ರೀಕರಣ ನೀತಿಯನ್ನು ಅನುಸರಿಸುತ್ತಿದೆ. ಈ ಬಗೆಯ ನೀತಿಗಳ ದೂರಗಾಮಿ ಪರಿಣಾಮಗಳ ಬಗ್ಗೆ ನಾವು ಗಮನ ನೀಡಬೇಕಾಗಿದೆ.

ಅತಿಥಿ ಅಂಕಣ



ಡಾ. ಟಿ.ಆರ್. ಚಂದ್ರಶೇಖರ

ಕರ್ನಾಟಕ ಮತ್ತು ಭಾರತೀಯ ಒಕ್ಕೂಟ ವ್ಯವಸ್ಥೆ


ಕರ್ನಾಟಕವು ಭಾರತ ಒಕ್ಕೂಟದಲ್ಲಿನ ಒಂದು ಚಾರಿತ್ರಿಕ–ಸಾಂಸ್ಕೃತಿಕ ಪ್ರದೇಶವಾಗಿದೆ. ಚಾರಿತ್ರಿಕವಾಗಿ ಕರ್ನಾಟಕವು ಕವಿರಾಜಮಾರ್ಗಕಾರ ಹೇಳಿದಂತೆ 'ಭಾವಿಸಿದ' ಒಂದು ಕನ್ನಡ ಜನಪದ. ಹೀಗೆ ಭಾವಿಸಿದ ಕರ್ನಾಟಕಕ್ಕೆ ಸಾವಿರ ವರ್ಷಗಳಿಗೂ ಮೀರಿದ ಚರಿತ್ರೆಯಿದೆ. ಇಂದು ನಾವು ರಾಜಕೀಯವಾಗಿ 1956ರಲ್ಲಿ ಅಸ್ತಿತ್ವಕ್ಕೆ ಬಂದ ಕರ್ನಾಟಕದ ಬಗ್ಗೆ ಇಲ್ಲಿ ಚರ್ಚೆ ಮಾಡುತ್ತಿದ್ದೇವೆ. ಭಾವಿಸಿದ ಕರ್ನಾಟಕ–ಕರ್ನಾಟಕಸ್ಥರು ಎನ್ನುವುದು ಒಂದು ನೆಲೆ. 1956ರ ನಂತರದ ಅಸ್ತಿತ್ವಕ್ಕೆ ಬಂದಿರುವ ರಾಜಕೀಯ ಕರ್ನಾಟಕ ಬೇರೆ. ಇವೆರಡರ ನಡುವಿನ ಸಂಬಂಧ ವಿಶಿಷ್ಟವಾದುದಾಗಿದೆ.

ನಮ್ಮ ಒಕ್ಕೂಟ ವ್ಯವಸ್ಥೆಯ ಸಿದ್ಧಾಂತಕ್ಕೆ ಕರ್ನಾಟಕದಲ್ಲಿ ಸಾವಿರಾರು ವರ್ಷಗಳ ಚರಿತ್ರೆಯಿದೆ. ಇದನ್ನು ಕವಿರಾಜಮಾರ್ಗಕಾರ ಅತ್ಯಂತ ವಿಶಿಷ್ಟವಾಗಿ ಸಾವಿರ ವರ್ಷಗಳ ಹಿಂದೆ ಪರಿಭಾವಿಸಿಕೊಂಡಿದ್ದಾನೆ. ಅವನ ಒಂದು ಪ್ರಸಿದ್ಧ ಪದ್ಯದಲ್ಲಿ ಒಕ್ಕೂಟ ಸಿದ್ಧಾಂತವನ್ನು ಕಾಣಬಹುದು.

ಕಾವೇರಿಯಿಂದ ಮಾ ಗೋದಾವರಿವರಮಿರ್ಪ
ನಾಡದಾ ಕನ್ನಡದೊಳ್ ಭಾವಿಸಿದ ಜನಪದ
ವಸುಧಾ ವಲಯ ವಿಲೀನ ವಿಷದ ವಿಷಯ ವಿಶೇಷಂ

ನಾವು ಇದರಲ್ಲಿನ ಮೊದಲ ಎರಡು ಸಾಲುಗಳ ಬಗ್ಗೆ ವಿವರವಾಗಿ ಚರ್ಚೆ ಮಾಡಿಕೊಂಡು ಬರುತ್ತಿದ್ದೇವೆ. ಇದರ ಬಗ್ಗೆ ನೂರಾರು ಪುಟಗಳನ್ನು–ಸಾವಿರಾರು ಸಾಲುಗಳನ್ನು ಬರೆದಿದ್ದೇವೆ. ಇಲ್ಲಿ ನಮ್ಮ ಚರ್ಚೆಯ ದೃಷ್ಟಿಯಿಂದ ಪದ್ಯದ ಕೊನೆಯ ಸಾಲು ಮುಖ್ಯ. ಈ ಸಾಲಿನಲ್ಲಿ ಕವಿರಾಜಮಾರ್ಗಕಾರ ಒಕ್ಕೂಟ ವ್ಯವಸ್ಥೆಯ ಸೂತ್ರವನ್ನು ಮಂಡಿಸುತ್ತಿದ್ದಾನೆ. ಕನ್ನಡ ಜನಪದವು ವಿಶಾಲವಾದ 'ವಸುಧೆ'ಯಲ್ಲಿ (ವಿ)ಲೀನವಾಗಿದೆ. ಆದರೂ ಅದು ತನ್ನ ವಿಷದವಾದ ವಿಷಯಗಳ ಮೂಲಕ ವಿಶಿಷ್ಟತೆಯನ್ನು ಕಾಯ್ದುಕೊಂಡು ಬರುತ್ತಿದೆ. ಇದು ಕನ್ನಡ ಜನಪದದ ವಿಶೇಷತೆಯಾಗಿದೆ. ಇದು ಕನ್ನಡ–ಕನ್ನಡ ನಾಡಿನ ಐಡೆಂಟಿಟಿ–ಅನನ್ಯತೆ–ಗುರುತು ಹೌದು ಮತ್ತು ವಸುಧೆಯಲ್ಲಿ(ಭಾರತದಲ್ಲಿ–ಜಗತ್ತಿನಲ್ಲಿ) ಲೀನವಾಗಿರುವ ಒಂದು ಭಾಗವೂ ಹೌದು. ವಿಶಿಷ್ಟತೆ ಮತ್ತು ವಿಲೀನತೆ ಜೊತೆ ಜೊತೆಯಾಗಿ ನಡೆಯುವ ಒಂದು ಪ್ರಕ್ರಿಯೆ ಒಕ್ಕೂಟ ವ್ಯವಸ್ಥೆ. ನಮ್ಮ ದೇಶದ–ರಾಜ್ಯದ ಚರಿತ್ರೆಯೆಂದರೆ ಅದು ಒಕ್ಕೂಟದ ಚರಿತ್ರೆಯೇ ಆಗಿದೆ. ಇದನ್ನು ಪ್ರಿಮಾರ್ಡಿಯಲ್ ಪ್ಲೂರಲಿಸಮ್ ಅಂದರೆ ನಮ್ಮದು ಆದಿಮ ಬಹುತ್ವ ದೇಶ ಎಂದು ಕರೆಯಲಾಗಿದೆ. ಪ್ರಾಚೀನ ಕಾಲದಿಂದಲೂ ಭಾರತವು ಒಕ್ಕೂಟ ವ್ಯವಸ್ಥೆಯಾಗಿ ನಡೆದುಕೊಂಡು ಬಂದಿದೆ.

ಭಾರತ ಒಕ್ಕೂಟದಲ್ಲಿ ಕರ್ನಾಟಕವು ಒಂದು ಘಟಕ. ಆದರೆ ಅದು ತನ್ನ ವಿಶಿಷ್ಟತೆಯನ್ನು ಲಾಗಾಯ್ತಿನಿಂದ ಕಾಯ್ದುಕೊಂಡು ಬರುತ್ತಿದೆ. ನಮ್ಮ ದೇಶವು ಚರಿತ್ರೆಯಲ್ಲಿ ಯಾವತ್ತೂ ಒಕ್ಕೂಟ ವ್ಯವಸ್ಥೆಯಾಗಿತ್ತೇ ವಿನಾ ಏಕಚಕ್ರಾಧಿಪತ್ಯವಾಗಿರಲಿಲ್ಲ. ಉದಾ: ಸಾಮಾನ್ಯ ಶಕೆ 600 ರಿಂದ 650ರಲ್ಲಿ ಉತ್ತರ ಭಾರತದಲ್ಲಿ ಹರ್ಷವರ್ಧನ ಉತ್ತರಾಪಥೇಶ್ವರ ಎನ್ನಿಸಿಕೊಂಡಿದ್ದರೆ ಅವನ ಸಮಕಾಲೀನನಾಗಿ ಇಮ್ಮಡಿ ಪುಲಕೇಶಿ ದಕ್ಷಿಣಾಪಥೇಶ್ವರನಾಗಿದ್ದ. ಹರ್ಷವರ್ಧನನ ಸಾಮ್ರಾಜ್ಯದಲ್ಲಿ ಅನೇಕ ಸಾಮಂತರಿದ್ದರು. ಇಮ್ಮಡಿ ಪುಲಕೇಶಿ ಸಾಮ್ರಾಜ್ಯದಲ್ಲಿಯೂ ಅನೇಕ ಸಾಮಂತರಿದ್ದರು. ಇವರಿಬ್ಬರೂ ಸಮಕಾಲೀನರು. ಇಲ್ಲಿನ ವಿಶೇಷತೆಯನ್ನು ಗಮನಿಸಿಬೇಕು. ಹರ್ಷವರ್ಧನನ ಸಾಮ್ರಾಜ್ಯವೂ ಒಂದು ಒಕ್ಕೂಟ, ಇಮ್ಮಡಿ ಪುಲಕೇಶಿಯ ಸಾಮ್ರಾಜ್ಯವೂ ಒಂದು ಒಕ್ಕೂಟ. ಇವೆರಡೂ ಕೂಡಿ ಒಂದು ಮಹಾಒಕ್ಕೂಟ. ಹೀಗೆ ಎಂದೂ ಭಾರತವು ಏಕಚಕ್ರಾಧಿಪತ್ಯವಾಗಿರಲಿಲ್ಲ. ನಮ್ಮ ಸಂವಿಧಾನದಲ್ಲಿ ಭಾರತವನ್ನು ಯೂನಿಯನ್ ಆಫ್ ಸ್ಟೇಟ್ಸ್ ಎಂದು ಕರೆಯಲಾಗಿದೆಯೇ ವಿನಾ ಫೆಡರೇಶನ್ ಆಫ್ ಸ್ಟೇಟ್ಸ್ ಎಂದು ಕರೆದಿಲ್ಲ. ಇದಕ್ಕೆ ಎರಡು ಕಾರಣ. 1. ಭಾರತೀಯ ಒಕ್ಕೂಟವು ರಾಜ್ಯಗಳು ಮತ್ತು ಕೇಂದ್ರಗಳ ನಡುವಿನ ಒಪ್ಪಂದದ ಮೂಲಕ ಅಸ್ತಿತ್ವಕ್ಕೆ ಬಂದ ರಾಜಕೀಯ ವ್ಯವಸ್ಥೆಯಲ್ಲ. ಇದೊಂದು ಭಾವಿಸಿದ ರಾಷ್ಟ್ರ. ನಾವು ಗಣರಾಜ್ಯವಾದ 1950ಕ್ಕೂ ಹಿಂದೆ ಭಾವಿಸಿದ ಭಾರತ ಎನ್ನುವುದಿತ್ತು. 2. ಭಾರತೀಯ ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯಗಳಿಗೆ ಒಕ್ಕೂಟದಿಂದ ಪ್ರತ್ಯೇಕಗೊಳ್ಳುವ ಹಕ್ಕಿಲ್ಲ–ಅಧಿಕಾರವಿಲ್ಲ. ಅಂದರೆ ಸಮಾನತೆಯ ನೆಲೆಯಲ್ಲಿ ಎರಡೂ ಕೂಡಿ ಒಕ್ಕೂಟ ವ್ಯವಸ್ಥೆಯಾಗಿದೆ.



ಕೃಪೆ: ಪಿ. ಮಹಮ್ಮದ್, ವಾ.ಭಾ.

ಆದರೆ ನಮ್ಮ ಏಕೀಕರಣದ ಹಿರಿಯರು ಮತ್ತು ಸಂವಿಧಾನ ಕರ್ತೃಗಳು ಪರಿಭಾವಿಸಿಕೊಂಡಿದ್ದ ಮತ್ತು ರಚಿಸಿಕೊಂಡಿದ್ದ 'ವಸುಧಾ ವಲಯ ವಿಲೀನ ವಿಷದ ವಿಶಯ ವಿಶೇಷಂ' ಎಂಬ ಸಿದ್ಧಾಂತಕ್ಕೆ ಇಂದು ಅಪಾಯ ಉಂಟಾಗಿದೆ.

ನಮ್ಮ ಸಂವಿಧಾನದ ಪರಿಚ್ಛೇದ 1 ರಲ್ಲಿನ ಮೊದಲ ವ್ಯಾಕ್ಯ ಇದು: India, that is Bharat, shall be a Union of States. ಅಂದರೆ ಸ್ಟೇಟ್ಸ್ ಇಲ್ಲದೆ ಯೂನಿಯನ್ ಇರಲು ಸಾಧ್ಯವಿಲ್ಲ ಮತ್ತು ಯೂನಿಯನ್ ಇಲ್ಲದೆ ಸ್ಟೇಟ್ಸ್ ಇರಲು ಸಾಧ್ಯವಿಲ್ಲ. ಯೂನಿಯನ್ ಆಫ್ ಸ್ಟೇಟ್ಸ್ ಎಂದರೆ ಯೂನಿಟಿ ಇನ್ ಡೈವರ್ಸಿಟಿ ಎಂದೇ ಅರ್ಥ. ಇದೇ ರೀತಿಯಲ್ಲಿ ಡೈವರ್ಸಿಟಿ ಇನ್ ಯೂನಿಟಿ ಎಂದರೆ ಯೂನಿಯನ್ ಆಫ್ ಸ್ಟೇಟ್ಸ್ ಎಂದು ಅರ್ಥ. ಈ ಯೂನಿಯನ್ ಮತ್ತು ಸ್ಟೇಟ್‌ಗಳ ನಡುವೆ ಏರುಪೇರು ಉಂಟಾದರೆ ಒಕ್ಕೂಟಕ್ಕೆ ಅಪಾಯ. ಇದಕ್ಕೆ ಈಗ ಅಪಾಯ ಬಂದಿದೆ. ಇದೊಂದು ಆತಂಕಕಾರಿ ವಿದ್ಯಮಾನ–ಬೆಳವಣಿಗೆಯಾಗಿದೆ. ಒಕ್ಕೂಟ ಧರ್ಮಕ್ಕೆ ಕುತ್ತುಂಟಾಗಿದೆ.

ಇಂದು ನಮ್ಮ ದೇಶವನ್ನು ವ್ಯವಸ್ಥಿತವಾಗಿ ಏಕಾಕಾರಿ ಕೇಂದ್ರೀಯ ವ್ಯವಸ್ಥೆಯನ್ನಾಗಿ ರೂಪಿಸುವ ಕಾರ್ಯ ನಡೆದಿದೆ. ಒಂದು ಬೃಹತ್ ಸಾಂಸ್ಕೃತಿಕ ಸಂಘಟನೆ ಎಂದು ಹೇಳಿಕೊಳ್ಳುತ್ತಿರುವ ಸಂಘಟನೆಯು ಸ್ವಾತಂತ್ರ್ಯದ ಆರಂಭದಿಂದಲೂ ಒಕ್ಕೂಟ ವ್ಯವಸ್ಥೆಯ ಬಗ್ಗೆ ತನ್ನ ವಿರೋಧವನ್ನು ವ್ಯಕ್ತಪಡಿಸುತ್ತಲೇ ಬಂದಿದೆ. 21ನೆಯ ಶತಮಾನದ ಎರಡನೆಯ ದಶಕದಲ್ಲಿ ಇದಕ್ಕೆ ಹೆಚ್ಚಿನ ಬಲ ಬಂದಿರುವಂತೆ ಕಾಣುತ್ತದೆ.

ಒಕ್ಕೂಟ ವ್ಯವಸ್ಥೆಯು ಎದುರಿಸುತ್ತಿರುವ ಅಪಾಯಗಳು ಹೀಗಿವೆ:


1. ನೀಟ್ ಪರೀಕ್ಷೆ(ಒಂದು ದೇಶ–ಒಂದು ಪರೀಕ್ಷೆ) 2. ಬ್ಯಾಂಕುಗಳ ವಿಲೀನ(ಒಂದು ದೇಶ–ಒಂದು ಬ್ಯಾಂಕು–ಬೃಹತ್ ಬ್ಯಾಂಕು) 3. ರಾಜ್ಯಗಳ ತೆರಿಗೆ ಹಕ್ಕಿನ ಅಪಹರಣ/ವರ್ಗಾವಣೆ – ಜಿಎಸ್‌ಟಿ (ಒಂದು ತೆರಿಗೆ–ಒಂದು ದೇಶ) 4. ಏಕಕಾಲಕ್ಕೆ ಲೋಕಸಭೆ ಮತ್ತು ವಿಧಾನಸಭೆಗಳ ಚುನಾವಣೆ (ಒಂದು ದೇಶ–ಒಂದು ಚುನಾವಣೆ) 5. ಹಿಂದಿ ಒಂದು ರಾಷ್ಟ್ರೀಯ ಭಾಷೆ–ಹಿಂದಿ ಭಾಷೆಯ ಹೇರಿಕೆ(ಒಂದು ದೇಶ–ಒಂದು ಭಾಷೆ). 6. ಕೇಂದ್ರ–ರಾಜ್ಯಗಳ ಹಣಕಾಸಿನ ಸಂಬಂಧದ ಕೇಂದ್ರೀಕರಣ. 7. ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಭಾಷೆಗೆ ಸಂಬಂಧಿಸಿದ ಸಂಗತಿಗಳು. ಒಂದು ಭಾಷೆ ಎನ್ನುವ ಮೂಲಕ ದೇಶೀ ಭಾಷೆಗಳ ದಮನ.

ಇವೆಲ್ಲವೂ ಸೂಕ್ಷ್ಮವಾಗಿ ಹೆಚ್ಚುತ್ತಿರುವ 'ಕೇಂದ್ರೀಕರಣ'ವನ್ನು ತೋರಿಸುತ್ತವೆ. ಈ ಎಲ್ಲ ಬೆಳವಣಿಗೆಗಳು ರಾಜ್ಯಗಳ ಅಧಿಕಾರವನ್ನು ಕೇಂದ್ರವು ತನ್ನ ವಶಪಡಿಸಿಕೊಳ್ಳುತ್ತಿರುವ ಕ್ರಮವನ್ನು ಸೂಚಿಸುತ್ತವೆ. ಏಕೀಕರಣೋತ್ತರ ಕಾಲಾವಧಿಯಲ್ಲಿ ನಿರಂತರವಾಗಿ ನಡೆಯುತ್ತಾ ಬಂದಿರುವ ಪ್ರಕ್ರಿಯೆ ಇದು ಎನ್ನುವುದು ನಿಜವಾದರೂ, ಈ ಪ್ರಕ್ರಿಯೆಯು ಹೆಚ್ಚು ತೀವ್ರತೆಯನ್ನು 2014ರ ನಂತರದಲ್ಲಿ ಪಡೆದುಕೊಂಡಂತೆ ಕಾಣುತ್ತದೆ. ಈ ಬೆಳವಣಿಗೆಗಳೆಲ್ಲವೂ ನಮ್ಮ ಸಂವಿಧಾನದ ಬೇರೆ ಬೇರೆ ಸೂತ್ರ–ಅನುಚ್ಛೇದ–ನಿಯಮ ಮುಂತಾದವುಗಳ ನೇರ ಉಲ್ಲಂಘನೆಯಾಗಿ ಕಾಣುತ್ತದೆ.

* ಬ್ಯಾಂಕುಗಳ ವಿಲೀನದಿಂದ ಉಂಟಾಗಬಹುದಾದ ಆರ್ಥಿಕ ಅಪಾಯಗಳೇನೆ ಇರಲಿ. ಅದು ಬೇರೆ ಚರ್ಚೆ. ಇದು ರಾಜ್ಯಗಳ ವಿಶಿಷ್ಟತೆಯನ್ನು ನಾಶ ಮಾಡುತ್ತದೆ. ಉದಾ: ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಎನ್ನುವುದು ಕರ್ನಾಟಕದಲ್ಲಿ ಮೈಸೂರು ಬ್ಯಾಂಕೆಂದೇ ಹೆಸರುವಾಸಿಯಾಗಿತ್ತು ಮತ್ತು ಇದು ಸರ್. ಎಂ, ವಿಶ್ವೇಶ್ವರಯ್ಯ ಅವರು ಆರಂಭಿಸಿದ್ದ ಬ್ಯಾಂಕು. ಕರ್ನಾಟಕದ ವಿಶಿಷ್ಟತೆ ಇದಾಗಿತ್ತು. ಪ್ರದೇಶ–ವಿಶಿಷ್ಟ ಬ್ಯಾಂಕುಗಳನ್ನು ವಿಲೀನಗೊಳಿಸಿ ರಾಷ್ಟ್ರಮಟ್ಟದ ಬ್ಯಾಂಕುಗಳನ್ನಾಗಿ ಮಾಡಿ ಸಾಧಿಸಿಕೊಳ್ಳುವದಾದರೂ ಏನು? ಒಂದು ವೇಳೆ ಒಂದು ಬೃಹತ್ ಬ್ಯಾಂಕು ('ಒಂದು ದೇಶ–ಒಂದು ಬ್ಯಾಂಕು') ದಿವಾಳಿಯಾದರೆ – ವಿಫಲವಾದರೆ ಅಥವಾ ಮುಳುಗಿದರೆ ಅದರ ಪರಿಣಾಮ ಇಡೀ ರಾಷ್ಟ್ರದ ಮೇಲೆ ಉಂಟಾಗುತ್ತದೆ ಮತ್ತು ರಾಷ್ಟ್ರೀಯ ಆರ್ಥಿಕತೆಯು ಅಭದ್ರವಾಗುತ್ತದೆ. ಉದಾ: ಮುಂಬೈ ನಗರದಲ್ಲಿ ಪಂಜಾಬ್–ಮಹಾರಾಷ್ಟ್ರ ಕೋಆಪರೇಟಿವ್ ಲಿಮಿಟೆಡ್ ಬ್ಯಾಂಕು ಮುಳುಗುತ್ತಿರುವಾಗ ಅದರ ಪರಿಣಾಮ ಮುಂಬೈ ನಗರದ ಅಥವಾ ಮಹಾರಾಷ್ಟ್ರದ ಠೇವಣಿದಾರರ ಮೇಲೆ ಉಂಟಾಗುತ್ತದೆ. ಇಂತಹ ಅಘಾತಕಾರಿ ಸಂಗತಿಗಳನ್ನು ಆರ್ಥಿಕತೆಯು ತಡೆದುಕೊಳ್ಳಬಹುದು. ಆದರೆ ಒಂದು ದೇಶವ್ಯಾಪ್ತಿ ಬ್ಯಾಂಕು ವಿಫಲವಾದರೆ–ಮುಳುಗಿದರೆ ಅದರ ಪರಿಣಾಮ ಇಡೀ ಆರ್ಥಿಕತೆಯ ಮೇಲುಂಟಾಗುತ್ತದೆ. ಇಂದು ನಾವು ತಂತ್ರಜ್ಞಾನ–ಮಾಹಿತಿ ಕ್ರಾಂತಿ – ಬಿಗ್ ಡೇಟಾ ಯುಗದಲ್ಲಿ ಬದುಕುತ್ತಿದ್ದೇವೆ. ಈ ಪ್ರಕ್ರಿಯೆಯಲ್ಲಿ 'ಬೃಹತ್' ಎನ್ನುವುದಕ್ಕೆ ಅರ್ಥವಿಲ್ಲ. ವ್ಯಾಪಾರ – ಉದ್ದಿಮೆಗಳು, ಹಣಕಾಸು ಸಂಸ್ಥೆಗಳು ಸಣ್ಣದಿರಲಿ ಅಥವಾ ಬೃಹತ್ತಾಗಿರಲಿ ಅವು ಜಾಗತಿಕಮಟ್ಟದಲ್ಲಿ ವ್ಯವಹಾರ ನಡೆಸಬಹುದು. ಇದಕ್ಕೆ ಬ್ಯಾಂಕುಗಳ ವಿಲೀನದ ಅಗತ್ಯವಿಲ್ಲ. ರಾಜ್ಯಗಳ ವಿಶಿಷ್ಟತೆಯನ್ನು ನಾವು ಕಳೆದುಕೊಳ್ಳಬಾರದು. ಕವಿರಾಜಮಾರ್ಗಕಾರ ನಮಗೆ ಸಾವಿರ ವರ್ಷಗಳ ಹಿಂದೆ ಪ್ರದೇಶ–ವಿಶಿಷ್ಟತೆಯನ್ನು ಕಾಯ್ದುಕೊಳ್ಳುವ ಜವಾಬ್ದಾರಿಯನ್ನು ವಹಿಸಿದ್ದಾನೆ. ಇದಕ್ಕೆ ಇಂದು ಅಪಾಯ ತಟ್ಟಿದೆ. ಈ ವಿಶಿಷ್ಟತೆಯು ಈಗ ನಾಶವಾಗುತ್ತಿದೆ.

* ಇದೇ ರೀತಿಯಲ್ಲಿ ಕರ್ನಾಟಕವು ಸಿ ಈ ಟಿ ಪರೀಕ್ಷೆ ಮೂಲಕ ತಾಂತ್ರಿಕ ಶಿಕ್ಷಣ ಮತ್ತು ವೈದ್ಯಕೀಯ ಶಿಕ್ಷಣಕ್ಕೆ ಪ್ರವೇಶ ನೀಡುವ ಕ್ರಮವನ್ನು ಒಂದು ಅತ್ಯುತ್ತಮ ವ್ಯವಸ್ಥೆಯಾಗಿ ರೂಪಿಸಿತ್ತು. ಆದರೆ ನೀಟ್(ಎನ್ ಈ ಈ ಟಿ: ನ್ಯಾಷಿನಲ್ ಎಲಿಜಬಲಿಟಿ ಕಂ ಎನ್‌ಟ್ರೆನ್ಸ್ ಟೆಸ್ಟ್) ಎನ್ನುವ ಕ್ರಮವನ್ನು ಜಾರಿಗೆ ತಂದು ರಾಜ್ಯಗಳ ಸ್ವಾಯತ್ತತೆಯನ್ನು ಕಸಿದುಕೊಳ್ಳಲಾಗಿದೆ. ಇಲ್ಲಿ ನಾವು ಕೇಳಿಕೊಳ್ಳಬೇಕಾದ ಪ್ರಶ್ನೆ: ಕೇಂದ್ರ ಸರ್ಕಾರವು ಪ್ರಾಥಮಿಕ ಶಾಲೆಗಳ ಪರೀಕ್ಷೆಯನ್ನೂ ಕೇಂದ್ರೀಕರಿಸುತ್ತದೆಯೇ? ಎಲ್ ಕೆ ಜಿ – ಯು ಕೆ ಜಿ ಪ್ರವೇಶ ಪರೀಕ್ಷೆಯನ್ನು ಕೇಂದ್ರ ನಡೆಸುತ್ತದೇನು? ಇದು ಹುಚ್ಚುತನದ ಪರಾಕಾಷ್ಠೆ. ಕ್ಯೋಟ್ಯಾಂತರ ಮಕ್ಕಳ ಪರೀಕ್ಷೆಯನ್ನು ದೇಶದಾದ್ಯಂತ ಏಕಕಾಲದಲ್ಲಿ ನಡೆಸಲಾಗುತ್ತದೇನು? ಇದು ನಡೆಸಬಹುದಾದ ಪ್ರಾಯೋಗಿಕ ಸಂಗತಿಯೇನು? ಈ ಹುಚ್ಚುತನವನ್ನು ರಾಜ್ಯಗಳು ಪ್ರಶ್ನಿಸುತ್ತಿಲ್ಲ–ಪ್ರತಿಭಟಿಸುತ್ತಿಲ್ಲ. ಇದರಿಂದ ರಾಜ್ಯಗಳ

ಪುಟ 15 ಕ್ಕೆ


ಮಹಾರಾಷ್ಟ್ರದ ಹೀನಾಯ ಸೋಲಿನಲ್ಲಿ ಬಟ್ಟಬಯಲಾದ ಬಿಜೆಪಿ–ಆರೆಸ್ಸೆಸ್



ವ್ಯಂಗ್ಯಚಿತ್ರ ಕೃಪೆ: ನವತೆಲಂಗಾಣ

ಫಡ್ನವೀಸ್ ಸರಕಾರದ ಮೂರು ದಿನದ ಕೌತುಕ ಈಗ ಮಾಯವಾಗಿರುವುದರಿಂದ ಈ ಇಡೀ ಹೊಲಸು ಪ್ರಕರಣದಿಂದ ಏನೇನೆಲ್ಲ ಪಾಟಗಳನ್ನು ಕಲಿಯಬಹುದು ಎಂದು ಹಿಂದಿರುಗಿ ನೋಡಬಹುದಾಗಿದೆ.

ನವಂಬರ್ 23ರ ರಾತ್ರಿ ಮತ್ತು 24ರ ಮುಂಜಾನೆ ನಡೆದದ್ದು ಸಂವಿಧಾನ ಮತ್ತು ಪ್ರಜಾಪ್ರಬುತ್ವ ನೀತಿಗಳ ಮೇಲೆ ಒಂದು ನಾಚಿಕೆಗೆಟ್ಟ ಪ್ರಹಾರ. ಮನಸ್ಸನ್ನು ಘಾಸಿಗೊಳಿಸುವ ಸಂಗತಿಯೆಂದರೆ ಈ ಸ್ವಯಂ–ದೋಷಾರೋಪಣೆಯ ಪ್ರಾಜೆಕ್ಟಿನಲ್ಲಿ ಮೂವರು ಉನ್ನತ ಸಂವಿಧಾನಿಕ ವ್ಯಕ್ತಿಗಳು ಕಂಡುಬಂದರು– ರಾಜ್ಯಪಾಲರು, ಭಾರತದ ಪ್ರಧಾನ ಮಂತ್ರಿಗಳು ಮತ್ತು ರಾಷ್ಟ್ರಪತಿಗಳು. ಇವರೆಲ್ಲರೂ ಸಂವಿಧಾನಿಕ ವಿಧಿವಿಧಾನಗಳನ್ನು ಅನುಸರಿಸುವ ಬದಲು ಬಿಜೆಪಿಯ ಆಣತಿಯಂತೆ ಮತ್ತು ಆಳುವ ಪಕ್ಷದ ಹಿತ ಸಾಧಿಸಲು ಕೆಲಸ ಮಾಡಿದರು.



ವ್ಯಂಗ್ಯಚಿತ್ರ ಕೃಪೆ: ಪಿ.ಮಹಮ್ಮದ್

ದೇವೇಂದ್ರ ಫಡ್ನವೀಸರಿಗೆ, ಎನ್‌ಸಿಪಿ ಶಾಸಕಾಂಗ ಪಕ್ಷದ ಮುಖಂಡರಾದ ಅಜಿತ್ ಪವಾರ್ ಕೊಟ್ಟ ಒಂದು ಬೋಗಸ್ ಪತ್ರದ ಆಧಾರದಲ್ಲಿ ಮುಖ್ಯಮಂತ್ರಿಯಾಗಿ ಪ್ರತಿಜ್ಞೆ ಸ್ವೀಕಾರ ಮಾಡಿಸಿ ರಾಜ್ಯಪಾಲ ಭಗತ್ ಸಿಂಗ್ ಕೋಶಿಯಾರಿ ತನ್ನ ಪಕ್ಷದ ಆಶಯವನ್ನು ಈಡೇರಿಸಲು ತನ್ನ ಹುದ್ದೆಯನ್ನು ದುರುಪಯೋಗ ಪಡಿಸಿಕೊಂಡರು. ರಾಷ್ಟ್ರಪತಿ ಆಳ್ವಿಕೆಯನ್ನು ತೆಗೆಯಲು ಮಧ್ಯರಾತ್ರಿಯಲ್ಲಿ ಅವರು ಶಿಫಾರಸು ಮಾಡಿದ ರೀತಿ ಇದನ್ನು ಮತ್ತಷ್ಟು ಗಹನಗೊಳಿಸಿತು.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಮುಂಜಾನೆ 5.47ಕ್ಕೆ ಸಂಪುಟ ಮಂಜೂರಾತಿ ಇಲ್ಲದೆ ರಾಷ್ಟ್ರಪತಿ ಆಳ್ವಿಕೆಯನ್ನು ತೆಗೆಯಲು ಒಪ್ಪಿಗೆಯನ್ನು ಪಡೆದರು. ಇದಕ್ಕಾಗಿ ಅವರು ಭಾರತ ಸರಕಾರ (ವ್ಯವಹಾರ ನಡಾವಳಿ) ನಿಯಮಗಳಲ್ಲಿ, ತುರ್ತು ಸಂದರ್ಭಗಳಲ್ಲಿ ಬಳಸಲೆಂದು ಇರುವ ಅವಕಾಶವನ್ನು ಬಳಸಿಕೊಂಡರು. ಪ್ರಧಾನ ಮಂತ್ರಿಗಳು ಈ ಮಧ್ಯರಾತ್ರಿಯ ರಾಜಕೀಯ ಕ್ಷಿಪ್ರಕ್ರಾಂತಿಯನ್ನು ನಡೆಸಲು ಈ ನಿಯಮವನ್ನು ಬಳಸಲೂ ಹೇಸಲಿಲ್ಲ.

ಅಂತಿಮವಾಗಿ, ಭಾರತದ ರಾಷ್ಟ್ರಪತಿಗಳು ವಿಧಿ ವಿಧಾನಗಳನ್ನು ಸರಿಯಾಗಿ ಅನುಸರಿಸಲಾಗಿದೆಯೇ ಎಂದು ಸ್ವತಃ ಖಾತ್ರಿಪಡಿಸಿಕೊಳ್ಳದೆಯೇ ರಾಷ್ಟ್ರಪತಿ ಆಳ್ವಿಕೆಯನ್ನು ತೆಗೆಯುವ ಆದೇಶಕ್ಕೆ ಸಹಿ ಹಾಕಿದರು.

ಇವನ್ನೆಲ್ಲ ಮಾಡಿದ್ದು ಸ್ಪಷ್ಟ ಬಹುಮತ ಪಡೆದಿರುವ ಶಿವಸೇನಾ–ಎನ್‌ಸಿಪಿ–ಕಾಂಗ್ರೆಸ್ ಮೈತ್ರಿಕೂಟ ಅಧಿಕಾರಕ್ಕೆ ಬರುವ ಅವಕಾಶವನ್ನು ಮೊದಲೇ ಮೊಟಕುಗೊಳಿಸುವುದಕ್ಕಾಗಿ.

ಆದರೆ ಇದೆಲ್ಲ ಸಂವಿಧಾನ ಮತ್ತು ಸಂಸದೀಯ ಪ್ರಜಾಪ್ರಭುತ್ವದ ಮೇಲೆ ಎಷ್ಟರ ಮಟ್ಟಿನ ಪ್ರಹಾರ ಮಾಡಲಾಗಿದೆ ಎಂಬುದನ್ನು ವಿವರಿಸುವುದಿಲ್ಲ. ಈ ಪ್ರಜಾಪ್ರಭುತ್ವ–ವಿರೋಧಿ ಯೋಜನೆಯನ್ನು ದಕ್ಕಿಸಿಕೊಳ್ಳಬಹುದು ಎಂಬ ಆತ್ಮವಿಶ್ವಾಸ ಬಿಜೆಪಿಗೆ ಬಂದದ್ದಾದರೂ ಹೇಗೆ? ಅದು ದುರಹಂಕಾರದ ಆತ್ಮವಿಶ್ವಾಸ. ಏಕೆಂದರೆ ತನ್ನ ಹಣಬಲವನ್ನು ಮುಂದಿಟ್ಟುಕೊಂಡು ಮತ್ತು ಭ್ರಷ್ಟಾಚಾರದ ಹೂಟವನ್ನು ಬಳಸಿ ಸಾಕಷ್ಟು ಸಂಖ್ಯೆಯಲ್ಲಿ ಪಕ್ಷಾಂತರ ಮಾಡಿಸಬಹುದೆಂಬ ಪೂರ್ಣ ವಿಶ್ವಾಸ ಅದಕ್ಕೆ ಇತ್ತು.

ಈ ಮಹಾರಾಷ್ಟ್ರ ಪ್ರಕರಣ ಬಿಜೆಪಿ ರಾಜಕೀಯ ವಿಧೇಯತೆಗಳನ್ನು ಚಿತಾಯಿಸಲು ಭಾರೀ ಕುಳಗಳಿಂದ ಪಡೆದ ಹಣವನ್ನು ಮತ್ತು ಪ್ರಭುತ್ವದ ಸಂಸ್ಥೆಗಳ ಮೂಲಕ ಭೀತಿ ಹುಟ್ಟಿಸುವುದನ್ನು ಎಷ್ಟರ ಮಟ್ಟಿಗೆ ಬಳಸುತ್ತದೆ ಎಂಬುದನ್ನು ಪ್ರಕಟಪಡಿಸಿದೆ. ಅಜಿತ್ ಪವಾರ್ ಪಕ್ಷಾಂತರ ಇದಕ್ಕೆ ಕಣ್ಣುಕುಕ್ಕುವಂತಹ ರುಜುವಾತು. ಉಪಮುಖ್ಯಮಂತ್ರಿಯಾಗಿ ಪ್ರತಿಜ್ಞಾ ಸ್ವೀಕಾರದ 48 ಗಂಟೆಗಳ ನಂತರ ಅವರ ವಿರುದ್ಧ ಇದ್ದ ನೀರಾವರಿ ಹಗರಣದ ಒಂಭತ್ತು ಪ್ರಕರಣಗಳಲ್ಲಿ ಆರೋಪಗಳನ್ನು ಭ್ರಷ್ಟಾಚಾರ ನಿಗ್ರಹ ಕಚೇರಿ (ಎಸಿಬಿ) ಕೈಬಿಟ್ಟಿತು. ಈ ಹಿಂದೆ ಒಬ್ಬ ಪ್ರತಿಪಕ್ಷದ ಶಾಸಕನಾಗಿ ದೇವೇಂದ್ರ ಫಡ್ನವೀಸ್ ಈ 70,000ರೂ.ಗಳ ಹಗರಣದಲ್ಲಿ ಪವಾರ್ 'ಕೇಂದ್ರವ್ಯಕ್ತಿ' ಎಂದು ಆಪಾದಿಸಿದ್ದರು. ಬಿಜೆಪಿ ಪಕ್ಷಾಂತರ ಮಾಡುವ ಪ್ರತಿಯೊಬ್ಬ ಎನ್‌ಸಿಪಿ ಶಾಸಕರಿಗೆ ಅಪಾರ ಮೊತ್ತ ತೆರಲು ಸಿದ್ಧವಾಗಿತ್ತು ಎಂದು ವರದಿಯಾಗಿದೆ.

ಬಿಜೆಪಿ ಕಳೆದ ವರ್ಷ ಕರ್ನಾಟಕದಲ್ಲಿ ಇಂತಹುದೇ ಒಂದು ಹಿನ್ನಡೆಯನ್ನು ಅನುಭವಿಸಿತ್ತು. ರಾಜ್ಯಪಾಲರು ಯೆಡಿಯೂರಪ್ಪನವರನ್ನು ಮುಖ್ಯಮಂತ್ರಿಯಾಗಿ ಪ್ರತಿಜ್ಞೆ ಬೋಧಿಸುವಂತೆ ಅದು ಮಾಡಿತ್ತು. ಆದರೆ ಅವರು 24 ಗಂಟೆಗಳೊಳಗೆ ಸದನದಲ್ಲಿ ಬಲಪರೀಕ್ಷೆ ನಡೆಸಬೇಕು ಎಂದು ಸುಪ್ರಿಂ ಕೋರ್ಟ್ ಆದೇಶ ನೀಡಿದಾಗ ರಾಜೀನಾಮೆ ನೀಡಬೇಕಾಯಿತು.

ಆದರೆ ಬಿಜೆಪಿಯಾಗಲೀ, ಅದರ ಅಧ್ಯಕ್ಷ ಅಮಿತ್ ಷಾರಾಗಲೀ ಇದರಿಂದ ಬುದ್ಧಿ ಕಲಿಯಲಿಲ್ಲ ಎಂಬುದು ಸ್ವಯಂವೇದ್ಯ. ಇನ್ನಷ್ಟು ದೊಡ್ಡ ಬಹುಮತದೊಂದಿಗೆ ಮತ್ತೆ ಅಧಿಕಾರಕ್ಕೆ ಬಂದು ಗೃಹಮಂತ್ರಿಯಾದದ್ದು ಈ 'ಚಾಣಕ್ಯ' ಇನ್ನಷ್ಟು ಭಂಡತನದಿಂದ ಹೊಲಸು ಉಪಾಯಗಳನ್ನು ಮಾಡಲು ಧೈರ್ಯ ತುಂಬಿತಷ್ಟೇ. ಆದರೆ ಈ ಕೊಬ್ಬಿನ ಫಲಿತಾಂಶ–ಒಂದು ಅವಮಾನಕಾರೀ ಪರಾಭವ.

ಮರುದಿನವೇ ಸದನದಲ್ಲಿ ಬಲಪರೀಕ್ಷೆ ನಡೆಯಬೇಕು ಎಂಬ ಸುಪ್ರಿಂ ಕೋರ್ಟಿನ ಆದೇಶ ಅಸಂವಿಧಾನಿಕ ಮತ್ತು ಅಪ್ರಾತಿನಿಧಿಕ ಸರಕಾರದ ಗುಳ್ಳೆಯನ್ನು ಚುಚ್ಚಿತು. ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಹಿತದೃಷ್ಟಿಯಿಂದ ನ್ಯಾಯಾಲಯ ಈ ಇಡೀ ಪ್ರಕರಣವನ್ನು ಪರೀಕ್ಷಿಸಬೇಕು ಮತ್ತು ಇದಕ್ಕೆ ಹೊಣೆಗಾರರಾದ ಅಪರಾಧಿಗಳನ್ನು ಬೊಟ್ಟುಮಾಡಿ ತೋರಬೇಕು.

ಭಾರತದ ಜನತೆಗೆ ಮಹಾರಾಷ್ಟ್ರದ ಕುತಂತ್ರಗಳು ಬಿಜೆಪಿಯ ಮತ್ತು ಅದಕ್ಕೆ ನೇತೃತ್ವ ನೀಡಿರುವ ಆರೆಸ್ಸೆಸ್ ಮುಖಂಡರುಗಳ ಪ್ರಜಾಪ್ರಭುತ್ವ–ವಿರೋಧಿ ಮತ್ತು ಸರ್ವಾಧಿಕಾರಶಾಹೀ ಚಾರಿತ್ರ್ಯದ ನಿಜಸ್ವರೂಪ ಕಣ್ಣು ತೆರೆಸಬೇಕು.

ಉದ್ಧವ್ ಥಾಕ್ರೆ ನೇತೃತ್ವದ ಹೊಸ ಸರಕಾರ ಈ ಮೂರು ಪಕ್ಷಗಳ ಮೈತ್ರಿಕೂಟ ನಿರ್ಧರಿಸಿರುವ ಕನಿಷ್ಟ ಸಾಮಾನ್ಯ ಕಾರ್ಯಕ್ರಮದ ಪ್ರಕಾರ ಕೆಲಸ ಮಾಡಬೆಕು. ಮಹಾರಾಷ್ಟ್ರದ ಜನತೆ ಈ ಸರಕಾರದಿಂದ ಅದನ್ನು ನಿರೀಕ್ಷಿಸುತ್ತಾರೆ. ಈ ಸರಕಾರದ ಅಂಗಪಕ್ಷಗಳು ಸೈದ್ಧಾಂತಿಕವಾಗಿ ವಿರುದ್ಧವಾದ ಕಣ್ಣೋಟಗಳನ್ನು ಹೊಂದಿರುವುದರಿಂದ ಇದು ಮತ್ತಷ್ಟು ಮಹತ್ವದ್ದಾಗುತ್ತದೆ.

ಈ ಸ್ವಯಂ–ದೋಷಾರೋಪಣೆಯ ಪ್ರಾಜೆಕ್ಟಿನಲ್ಲಿ ಮೂವರು ಉನ್ನತ ಸಂವಿಧಾನಿಕ ವ್ಯಕ್ತಿಗಳು ಕಂಡುಬಂದರು– ರಾಜ್ಯಪಾಲರು, ಭಾರತದ ಪ್ರಧಾನ ಮಂತ್ರಿಗಳು ಮತ್ತು ಭಾರತದ ರಾಷ್ಟ್ರಪತಿಗಳು. ಇಂತಹ ಪ್ರಜಾಪ್ರಭುತ್ವ–ವಿರೋಧಿ ಯೋಜನೆಯನ್ನು ದಕ್ಕಿಸಿಕೊಳ್ಳಬಹುದು ಎಂಬ ಆತ್ಮವಿಶ್ವಾಸ ಬಿಜೆಪಿಗೆ ಬಂದದ್ದಾದರೂ ಹೇಗೆ? ಕಳೆದ ವರ್ಷ ಕರ್ನಾಟಕದಲ್ಲಿ ಆದ ಮುಖಭಂಗದಿಂದಲೂ ಬಿಜೆಪಿಯಾಗಲೀ, ಅದರ ಅಧ್ಯಕ್ಷ ಅಮಿತ್ ಷಾರಾಗಲೀ ಬುದ್ಧಿ ಕಲಿಯಲಿಲ್ಲ. ಇನ್ನಷ್ಟು ದೊಡ್ಡ ಬಹುಮತದೊಂದಿಗೆ ಮತ್ತೆ ಅಧಿಕಾರಕ್ಕೆ ಬಂದು ಗೃಹಮಂತ್ರಿಯಾದದ್ದು ಈ 'ಚಾಣಕ್ಯ' ಇನ್ನಷ್ಟು ಭಂಡತನದಿಂದ ಹೊಲಸು ಉಪಾಯಗಳನ್ನು ಮಾಡಲು ಧೈರ್ಯ ತುಂಬಿತಷ್ಟೇ. ಈ ಕೊಬ್ಬಿನ ಫಲಿತಾಂಶ ದೇಶದ ಮುಂದಿದೆ. ಮಹಾರಾಷ್ಟ್ರದ ಕುತಂತ್ರಗಳು ಬಿಜೆಪಿಯ ಮತ್ತು ಅದಕ್ಕೆ ನೇತೃತ್ವ ನೀಡಿರುವ ಆರೆಸ್ಸೆಸ್ ಮುಖಂಡರುಗಳ ಪ್ರಜಾಪ್ರಭುತ್ವ–ವಿರೋಧಿ ಮತ್ತು ಸರ್ವಾಧಿಕಾರಶಾಹೀ ಚಾರಿತ್ರ್ಯದ ಬಗ್ಗೆ ಭಾರತದ ಜನತೆಯ ಕಣ್ಣು ತೆರೆಸಬೇಕು.



ಪ್ರಕಾಶ ಕಾರಟ್



ಬಯಲು ಶೌಚ ಮುಕ್ತ ಎಂದರೆ ಇದು!
ಬಯಲು ಪಕ್ಷಾಂತರ–ಗೋವಾ, ಕರ್ನಾಟಕ,
ಈಗ ಮಹಾರಾಷ್ಟ್ರ
ವ್ಯಂಗ್ಯಚಿತ್ರ: ಸಂದೀಪ್ ಅಧ್ವರ್ಯು, ಟೈಂಸ್ ಆಫ್ ಇಂಡಿಯ



ಸ್ವಚ್ಛ ರಾಜಕೀಯ ನಿಧಿ ಸಂಗ್ರಹ ಕಾರ್ಯಕ್ರಮ
ವ್ಯಂಗ್ಯಚಿತ್ರ: ಮಂಜುಲ್

ಅಧಿಕಾರ ಬಾಚಿಕೊಳ್ಳಲು ನೀಚ ಕೈಚಳಕ, ಪಾತಾಳಕ್ಕಿಳಿದ ರಾಜಕೀಯ ಅನೈತಿಕತೆ

ಮಹಾರಾಷ್ಟ್ರದ ಫಡ್ನವೀಸ್ ಸರಕಾರದ 'ಮೂರು ದಿನಗಳ ಕೌತುಕ' ಆರಂಭವಾದಾಗ ಸಿಪಿಐ(ಎಂ) ಪೊಲಿಟ್‌ಬ್ಯುರೊ ಈಕೆಳಗಿನ ಹೇಳಿಕೆಯನ್ನು ನೀಡಿತ್ತು:

ಬಿಜೆಪಿಯ ರಾಜಕೀಯ ಅನೈತಿಕತೆ ಪಾತಾಳವನ್ನು ಮುಟ್ಟಿದೆ. ಮಹಾರಾಷ್ಟ್ರದ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಗಳ ಪ್ರತಿಜ್ಞಾ ಸ್ವೀಕಾರವನ್ನು ಗುಪ್ತವಾಗಿ ನಡೆಸಿರುವ ರೀತಿ ಬಿಜೆಪಿ ಅಧಿಕಾರ ಬಾಚಿಕೊಳ್ಳಲು ಯಾವ ಮಟ್ಟಕ್ಕೆ ಇಳಿಯಬಲ್ಲದು ಎಂಬುದನ್ನು ತೋರಿಸಿದೆ. ಇದು ಈ ಹಿಂದೆ ಗೋವಾ, ಕರ್ನಾಟಕ ಮತ್ತು ಈಶಾನ್ಯ ಭಾರತದ ರಾಜ್ಯಗಳು ಮುಂತಾದೆಡೆಗಳಲ್ಲಿ ಮಾಡಿದ್ದ ರೀತಿಯಲ್ಲೇ ಇದೆ.

ಸಂವಿಧಾನಿಕ ಅಧಿಕಾರಿಗಳ– ರಾಷ್ಟ್ರಪತಿಗಳ ಮತ್ತು ರಾಜ್ಯಪಾಲರ ಕಚೇರಿಗಳನ್ನು ತಮ್ಮ ರಾಜಕೀಯ ಉದ್ದೇಶಕ್ಕೆ ದುರುಪಯೋಗ ಪಡಿಸಿಕೊಂಡಿರುವುದು ದುರದೃಷ್ಟಕರ.

ಮುಂದಿನ ಬೆಳವಣಿಗೆಗಳನ್ನು ನಿಕಟವಾಗಿ ಕಾದುನೋಡಲಾಗುವುದು.

ಶತಮಾನೋತ್ಸವ ಲೇಖನಮಾಲೆ-4

ಕಾನ್ಪುರ ಕಮ್ಯುನಿಸ್ಟ್ ಸಮ್ಮೇಳನ – 1925

ಭಾರತದ ಕಮ್ಯುನಿಸ್ಟ್ ಪಕ್ಷವೊಂದನ್ನು ರಚಿಸುವಲ್ಲಿ ತಾಷ್ಕೆಂಟ್ ಮೊದಲ ಹೆಜ್ಜೆಯಾಗಿದ್ದರೆ, ಕಾನ್ಪುರ ಕಮ್ಯುನಿಸ್ಟ್ ಸಮ್ಮೇಳನವು ಭಾರತದ ನೆಲದಲ್ಲಿ ಒಂದು ಅಖಿಲ ಭಾರತ ಪಕ್ಷವು ಸ್ಥಾಪನೆಯಾಗುವ ನಿಟ್ಟಿನಲ್ಲಿ ಮೊದಲ ಪ್ರಯತ್ನವಾಗಿತ್ತು.

ಕನ್ನಡಕ್ಕೆ: ಟಿ.ಸುರೇಂದ್ರ ರಾವ್



1925ರ ಡಿಸೆಂಬರ್ 26 ರಿಂದ 28 ರವರೆಗೆ ನಡೆದ ಕಾನ್ಪುರ ಕಮ್ಯುನಿಸ್ಟ್ ಸಮ್ಮೇಳನ ಭಾರತದ ಮಣ್ಣಿನಲ್ಲಿ ನಡೆದ ಸಭೆಯಾಗಿತ್ತು. ಅಲ್ಲಿ ಎಲ್ಲಾ ಕಮ್ಯುನಿಸ್ಟ್ ಗುಂಪುಗಳು ಮತ್ತು ವ್ಯಕ್ತಿಗಳು ಒಗ್ಗೂಡಿದ್ದವು. ಕಾನ್ಪುರದಲ್ಲಿನ ಕಾಂಗ್ರೆಸ್ ಅಧಿವೇಶನದ ಸಂದರ್ಭದಲ್ಲಿ ಎಲ್ಲಾ ಕಮ್ಯುನಿಸ್ಟ್ ಗುಂಪುಗಳನ್ನು ಒಂದು ಮಾಡಿ ಸಮ್ಮೇಳನ ಮಾಡಬೇಕೆಂಬ ಕಲ್ಪನೆಯು ಒಂದು ಕರಪತ್ರದ ಮೂಲಕ ಜೂನ್ 18, 1925 ರಂದು ಸತ್ಯಭಕ್ತ ಎಂಬವರು ಪ್ರಕಟಿಸಿದರು. ಸತ್ಯಭಕ್ತರು ಆ ಕಾಲದ ಯಾವುದೇ ಕಮ್ಯುನಿಸ್ಟ್ ಗುಂಪಿನ ಸದಸ್ಯರಾಗಿರಲಿಲ್ಲ. ಮೌಲಾನಾ ಹಸ್ರತ್ ಮೊಹಾನಿಯವರು ಆ ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದರು. ಬ್ರಿಟಿಷ್ ಪಾರ್ಲಿಮೆಂಟಿನ ಕಮ್ಯುನಿಸ್ಟ್ ಸದಸ್ಯರಾಗಿದ್ದ ಶಾಪುರ್ಜಿ ಸಕ್ಲತ್‌ವಾಲಾ ಅವರನ್ನು ಸಮ್ಮೇಳನದ ಅಧ್ಯಕ್ಷರಾಗುವಂತೆ ಕೇಳಿಕೊಳ್ಳಲಾಗಿತ್ತು; ಆದರೆ ಅವರು ಭಾಗವಹಿಸಲು ಸಾಧ್ಯವಾಗದ್ದರಿಂದ ಸಿಂಗಾರವೇಲು ಚೆಟ್ಟಿಯಾರ್ ಅವರು ಅಧಿವೇಶನದ ಅಧ್ಯಕ್ಷತೆ ವಹಿಸಿದ್ದರು.

ಅಖಿಲ ಭಾರತ ಮಟ್ಟದ ವೇದಿಕೆಯನ್ನು ಸತ್ಯಭಕ್ತರು ಕೈವಶ ಮಾಡಿಕೊಳ್ಳುವುದನ್ನು ಬಯಸಿರದ, ಅಂಗೀಕೃತ ಕಮ್ಯುನಿಸ್ಟ್ ಗುಂಪುಗಳ ಮುಖಂಡರು ಈ ಸಮ್ಮೇಳನದಲ್ಲಿ ಭಾಗವಹಿಸಲು ನಿರ್ಧರಿಸಿದರು. ಆ ಪ್ರಕಾರವಾಗಿ, ಬೊಂಬಾಯಿಯಿಂದ ಆರ್.ಎಸ್.ನಿಂಬಕರ್, ಜೆ.ಪಿ.ಬಗೇರ್‌ಹಟ್ಟಾ, ಕೆ.ಎನ್.ಜೋಗ್ಲೇಕರ್, ಎಸ್.ವಿ.ಘಾಟೆ, ಝಾನ್ಸಿಯಿಂದ ಅಯೋಧ್ಯಾ ಪ್ರಸಾದ್, ಪಂಜಾಬಿನಿಂದ ಸಂತೋಕ್ ಸಿಂಗ್, ಲಾಹೋರಿನಿಂದ ಎಸ್.ಡಿ.ಹಸ್ಸನ್, ರಾಮಚಂದ್ರ, ಮದ್ರಾಸಿನಿಂದ ಕಾಮೇಶ್ವರ ರಾವ್, ಕೃಷ್ಣಸ್ವಾಮಿ ಐಯ್ಯಂಗಾರ್ ಮತ್ತು ಸಿಂಗಾರವೇಲು ಚೆಟ್ಟಿಯಾರ್ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಕಲ್ಕತ್ತಾದಿಂದ ಪ್ರತಿನಿಧಿಯಾಗಿ ರಾಧಾಮೋಹನ್ ಗೋಕುಲ್‌ಜಿ ಪಾಲ್ಗೊಂಡಿದ್ದರು. ಕಾನ್ಪುರ ಪಿತೂರಿ ಪ್ರಕರಣದಲ್ಲಿ ಶಿಕ್ಷೆಗೊಳಪಟ್ಟು ಅವಧಿ ಪೂರ್ಣಗೊಳ್ಳುವ ಮೊದಲೇ ಅನಾರೋಗ್ಯದ ಕಾರಣ ಜೈಲಿನಿಂದ ಬಿಡುಗಡೆಯಾಗಿದ್ದ ಮುಜಾಫರ್ ಅಹಮದ್ ಅವರು ಕೂಡ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಅವರು ಆಲ್ಮೋರಾದಿಂದ(ಅಲ್ಲಿ ಅವರು ವಿಶ್ರಾಂತಿ ಪಡೆಯುತ್ತಿದ್ದರು) ನೇರವಾಗಿ ಕಾನ್ಪುರಕ್ಕೆ ಬಂದಿದ್ದರು. ಅಜ್ಮೇರದಿಂದ ಅರ್ಜುನ್‌ಲಾಲ್ ಸೇಥಿಯವರೂ ಭಾಗವಹಿಸಿದ್ದರು.

ಕಾಂಗ್ರೆಸ್ ಅಧಿವೇಶನದಲ್ಲಿ ಪಾಲ್ಗೊಳ್ಳಲು ಕಾನ್ಪುರಕ್ಕೆ ಬಂದಿದ್ದ ಅನೇಕ ಕ್ರಾಂತಿಕಾರಿ ಕಾರ್ಮಿಕ ಸಂಘಗಳ ಮುಖಂಡರುಗಳು ಸಮ್ಮೇಳನದ ಸ್ಥಳಕ್ಕೆ ಭೇಟಿ ಕೊಟ್ಟರು. ಪೋಲಿಸ್ ಬೇಹುಗಾರಿಕೆ ಅಂದಾಜಿನ ಪ್ರಕಾರ, 500 ಕ್ಕೂ ಹೆಚ್ಚಿನ ಜನರು ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು ಮತ್ತು ಬಹುತೇಕರು ಕಾರ್ಮಿಕರು ಮತ್ತು ರೈತರಾಗಿದ್ದರು.

ಮೊದಲ ಕಲಾಪದಲ್ಲಿ ಸಕ್ಲತ್‌ವಾಲಾ ಅವರ ಸಂದೇಶವನ್ನು ಓದಲಾಯಿತು. ಅದರ ನಂತರ ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದ ಹಸ್ರತ್ ಮೊಹಾನಿ ಮತ್ತು ಆನಂತರ ಸಮ್ಮೇಳನದ ಅಧ್ಯಕ್ಷರಾಗಿದ್ದ ಸಿಂಗಾರವೇಲು ಅವರು ಭಾಷಣ ಮಾಡಿದರು. ಎರಡನೇ ಕಲಾಪವನ್ನು ಡಿಸೆಂಬರ್ 26ರ ಸಂಜೆ ಸೇರಿ ನಿರ್ಣಯಗಳ ಅಂಗೀಕಾರಕ್ಕೆ ಮೀಸಲಿಡಲಾಯಿತು. ಡಿಸೆಂಬರ್ 27ರಂದು ನಡೆದ ಮೂರನೇ ಕಲಾಪದಲ್ಲಿ ಸಂವಿಧಾನದ ಅಂಗೀಕಾರ ಹಾಗೂ ಕೇಂದ್ರ ಕಾರ್ಯಕಾರಿ ಸಮಿತಿಯ ಚುನಾವಣೆ ನಡೆಸಲಾಯಿತು. ಡಿಸೆಂಬರ್ 28, 1925 ರಂದು ಕೇಂದ್ರ ಕಾರ್ಯಕಾರಿ ಸಮಿತಿ ಸಭೆ ಸೇರಿತು ಮತ್ತು ಪದಾಧಿಕಾರಿಗಳನ್ನು, ಅಧ್ಯಕ್ಷರನ್ನು, ಉಪಾಧ್ಯಕ್ಷರುಗಳನ್ನು, ಪ್ರಧಾನ ಕಾರ್ಯದರ್ಶಿಗಳನ್ನು ಮತ್ತು ಹಲವಾರು ಪ್ರಾಂತಗಳ ಉಸ್ತುವಾರಿ ವಹಿಸುವ ಕೇಂದ್ರ ಕಾರ್ಯಕಾರಿ ಸಮಿತಿ(ಸಿಇಸಿ)ಯ ಸದಸ್ಯರನ್ನು ಆಯ್ಕೆ ಮಾಡಿತು.

ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಮೊಹಾನಿಯವರು,; ಸ್ವರಾಜ್ಯ ಅಥವಾ ಸಂಪೂರ್ಣ ಸ್ವಾತಂತ್ರ್ಯವನ್ನು ಎಲ್ಲ ನ್ಯಾಯಯುತ ಮಾರ್ಗಗಳಿಂದ ಸ್ಥಾಪನೆ ಮತ್ತು ಅದರ ನಂತರ 'ಸೋವಿಯತ್ ಗಣತಂತ್ರದ ಸ್ವರೂಪವನ್ನು ಜಾರಿಗೆ ತರುವುದು' ಎಂದು ಪಕ್ಷದ ಗುರಿ ಮತ್ತು ಧ್ಯೇಯೋದ್ದೇಶಗಳನ್ನು ವರ್ಣಿಸಿದರು. ದೀರ್ಘ ಅಧ್ಯಕ್ಷೀಯ ಭಾಷಣ ಮಾಡಿದ ಸಿಂಗಾರವೇಲು ಅವರು ದೇಶಬಂಧು ದಾಸ್ ಮತ್ತು ತಿಲಕ್ ಅವರಲ್ಲದೇ ರೋಸಾ ಲಕ್ಸಂಬರ್ಗ್, ಕಾರ್ಲ್ ಲಿಬ್ನೆಕ್ಟ್, ಬಹಳ ಮುಖ್ಯವಾಗಿ ಲೆನಿನ್ ಅವರುಗಳಿಗೆ ಶ್ರದ್ಧಾಂಜಲಿ ಸಲ್ಲಿಸಿದರು. ಬ್ರಿಟಿಷರ ಆಳ್ವಿಕೆಯಿಂದ ಸ್ವಾತಂತ್ರಕ್ಕಾಗಿ ಹೋರಾಡಬೇಕಾದ ಅಗತ್ಯದ ಹೊರತಾಗಿ, ನಮ್ಮ ದೇಶದ ಕಾರ್ಮಿಕರು ಮತ್ತು ರೈತಾಪಿ ಜನಗಳ ಆರ್ಥಿಕ ಸಂಕಷ್ಟಗಳ ಬಗ್ಗೆ ಮತ್ತು ಅವುಗಳ ಪರಿಹಾರಕ್ಕಾಗಿ ಹೋರಾಡಬೇಕಾದ ಅಗತ್ಯದ ಕುರಿತೂ ಮಾತನಾಡಿದರು.

ಆಸಕ್ತಿದಾಯಕವಾದದ್ದೆಂದರೆ, ಸಿಂಗಾರವೇಲು ಅವರು ಜಾತಿವಾದ ಮತ್ತು ಕೋಮುವಾದದ ಸಮಸ್ಯೆಗಳ ಬಗ್ಗೆಯೂ ಮಾತನಾಡಿ ಅವುಗಳನ್ನು ನಾವು ಎದುರಿಸಬೇಕಾದ 'ಮುಂದಿನ ಅಪಾಯಗಳು' ಎಂದು ಹೇಳಿದರು. "ಧರ್ಮ ಮತ್ತು ಜಾತಿ ಪಿಶಾಚಿಗಳಂತೆ ಚಾರಿತ್ರಿಕವಾಗಿ ನಮ್ಮ ರಾಜಕೀಯ ಐಕ್ಯತೆಯನ್ನು ನುಂಗಿ ಹಾಕುತ್ತಿವೆ. ಈ ಧಾರ್ಮಿಕ ಮತ್ತು ಕೋಮುವಾದೀ ಕಲಹಗಳು ಇವತ್ತು ನಮ್ಮ ದೇಶವನ್ನು ಛಿದ್ರಗೊಳಿಸುತ್ತಿವೆ. ಈ ಘೋಕಿಗಳನ್ನು ನಮ್ಮ ಮುಂದೆ ಪ್ರದರ್ಶಿಸುತ್ತಿರುವ ಮುಖಂಡರುಗಳು ನಮ್ಮ ದೇಶದ ಹಾಗೂ ನಮ್ಮ ಧ್ಯೇಯ ಸಾಧನೆಗೆ ದ್ರೋಹಿಗಳು." ಎಂದರು.

ಅಸ್ಪೃಶ್ಯತೆ ಮತ್ತು ಅದು ಹರಡಿರುವ ಪ್ರಶ್ನೆಯ ಕುರಿತು ಹೇಳಿದ ಸಿಂಗಾರವೇಲು "ಅಸ್ಪೃಶ್ಯತೆಯ ಸಮಸ್ಯೆಯು ಮೂಲತಃ ಒಂದು ಕಾರ್ಷಿಕ ಸಮಸ್ಯೆ, ಮತ್ತು ಈ ಆರ್ಥಿಕ ಅವಲಂಬನೆಯಿಂದ ಮುಕ್ತಿ ಸಿಗದೆ, ಅಸ್ಪೃಶ್ಯತೆಯ ನಿರ್ಮೂಲನೆಯ ಮಾತನ್ನಾಡುವುದು ಅಪ್ರಾಮಾಣಿಕತೆಯಾಗುತ್ತದೆ. ಬದಲಾವಣೆ ಬೇಡ ಎನ್ನುವವನು (ಮಹಾತ್ಮಾ ಗಾಂಧಿಯವರ ಅಸ್ಪೃಶ್ಯತೆ ಮೂಲೋತ್ಪಾಟನೆ ಕಾರ್ಯಕ್ರಮದ ಕುರಿತಂತೆ) ನಮ್ಮ ಒಡನಾಡಿಗಳನ್ನು ಅಸ್ಪೃಶ್ಯರೆಂದು ಕಾಣುವುದನ್ನು ದೊಡ್ಡ ಅನ್ಯಾಯ ಹಾಗೂ ಅಮಾನವೀಯವಾದದ್ದು ಎಂದು ಮಾತನಾಡುವವನು, ಅವರು ಹೊಟ್ಟೆಗಿಲ್ಲದೆ ನರಳುವುದರ ಬಗ್ಗೆ, ತಲೆ ಮೇಲೆ ಸೂರಿಲ್ಲದೇ ಇರುವುದರ ಬಗ್ಗೆ ಚಕಾರವೆತ್ತದಂತೆ ಜಾಗರೂಕತೆ ವಹಿಸುತ್ತಾನೆ. ಅಸ್ಪೃಶ್ಯತೆಯನ್ನು ಹಾಗೆಯೇ ಮೂಲೋತ್ಪಾಟನೆ ಮಾಡುತ್ತೇನೆಂಬ ಮಾತನಾಡುವುದು ಅಪ್ರಾಮಾಣಿಕವಾದದ್ದು ಹಾಗೂ ಅಸಂಬದ್ಧವಾದದ್ದು. ಆದ್ದರಿಂದ ನಾವು ಕಮ್ಯುನಿಸ್ಟರು ದಮನಿತ ವರ್ಗಗಳ ಆರ್ಥಿಕ ಹಕ್ಕುಗಳ ಬಗ್ಗೆ ಒತ್ತಾಯಿಸಬೇಕು ಮತ್ತು ಅವರ ಬದುಕು ಕೊನೇಪಕ್ಷ ಸಹನೀಯವಾಗುವಂತೆ ಒಂದು ಬದುಕುವ ಕೂಲಿಯನ್ನು ಅವರಿಗೆ ನೀಡುವಂತೆ ನಾವು ಪ್ರತಿಪಾದಿಸಬೇಕು."

ಈ ಎಲ್ಲಾ ಪ್ರಗತಿಪರ ಸಮರ್ಥನೆಗಳ ಹೊರತಾಗಿಯೂ, ಈ ಮುಖಂಡರ ಭಾಷಣಗಳಲ್ಲಿ ಕೆಲವು ಇತಿಮಿತಿಗಳೂ ಇದ್ದವು ಎನ್ನುವುದನ್ನು ನಾವು ನೋಡಬಹುದು. ಅವರು ಸಮಾಜವಾದ ಮತ್ತು ಸೋವಿಯತ್ ಯೂನಿಯನ್‌ನ ಚಿಂತನೆಗಳಿಂದ ಸ್ಫೂರ್ತಿ ಪಡೆದಿದ್ದಾಗ್ಯೂ ಸಮತಾವಾದಿ ಸಿದ್ಧಾಂತದ ಗಟ್ಟಿ ಬುನಾದಿ ಇರಲಿಲ್ಲ; ಸಾಮಾಜಿಕ ಬದಲಾವಣೆಯನ್ನು ತರುವಲ್ಲಿ ವರ್ಗ ಹೋರಾಟವೇ ಕೇಂದ್ರ ಬಿಂದು ಎಂದು ಮನಗಾಣಲು ಅವರಿಗೆ ಸಾಧ್ಯವಾಗಿರಲಿಲ್ಲ. ಕಮ್ಯುನಿಸಂ 'ವಸ್ತುಗಳ ವಿತರಣೆ'ಯ ಪರಿಣಾಮದಿಂದಾಗಿ ಉಂಟಾಗಿರುವ ತೀವ್ರ ಅಸಮಾನತೆಗಳನ್ನು 'ಸರಿಪಡಿಸುವ' ಮತ್ತು ಎಲ್ಲರಿಗೂ ಪ್ರಯೋಜನವಾಗುವುದನ್ನು ಖಾತ್ರಿಪಡಿಸುವ ಒಂದು ವ್ಯವಸ್ಥೆ ಎಂದು ಸಿಂಗಾರವೇಲು ಪರಿಗಣಿಸಿದ್ದರು. ಅವರಿಗೆ ಕಮ್ಯುನಿಸಂ"ಪ್ರಸ್ತುತ ಜಾಗತಿಕ ಸಾಮಾಜಿಕ ಮತ್ತು ರಾಜಕೀಯ ವ್ಯವಸ್ಥೆಯಲ್ಲಿ ರಾರಾಜಿಸುತ್ತಿರುವ, ಎದ್ದು ಕಾಣುತ್ತಿರುವ ದುರುಪಯೋಗಗಳನ್ನು ಖಂಡಿತವಾಗಿಯೂ ಸರಿಪಡಿಸುವ ಒಂದು ವಿಧಾನ"ವಾಗಿಯಷ್ಟೇ ಕಂಡಿತ್ತು. ಪಕ್ಷದ ಹೆಸರಿಡುವ, ಮತ್ತದರ ಗುರಿ ಹಾಗೂ ಧ್ಯೇಯೋದ್ದೇಶಗಳು, ಹೋರಾಟಗಳ ಮಾರ್ಗ ಮತ್ತು ಅಂತರ್ರಾಷ್ಟ್ರೀಯತೆಯ ಪ್ರಶ್ನೆ ಬಗ್ಗೆ ಕೂಡ ನಡೆದ ಚರ್ಚೆಗಳಲ್ಲಿ ಈ ಇತಿಮಿತಿಗಳು ಬಿಂಬಿತವಾಗಿದ್ದವು.

ಜಗತ್ತಿನಾದ್ಯಂತ ಇರುವ ಕಮ್ಯುನಿಸ್ಟರ ಜತೆ ಸಹಾನುಭೂತಿ ವ್ಯಕ್ತಪಡಿಸುವ, ಮತ್ತು ಬ್ರಿಟನ್ನಿನಲ್ಲಿ ಕಮ್ಯುನಿಸ್ಟ್ ಸಂಗಾತಿಗಳ ಬಂಧನವನ್ನು ಖಂಡಿಸುವ, ಪೆಶಾವರ್ ಮತ್ತು ಕಾನ್ಪುರ ಪ್ರಕರಣಗಳಲ್ಲಿ ಶಿಕ್ಷೆಗೊಳಗಾಗಿ ಜೈಲಿನಲ್ಲಿರುವ ಕಮ್ಯುನಿಸ್ಟ್ ಬಂಧಿಗಳ ಜತೆ ಸಹಾನುಭೂತಿ ವ್ಯಕ್ತಪಡಿಸುವ ಹಾಗೂ ಸಿಂಗಾರವೇಲು ಅವರು ಆರಂಭಿಸಿದ್ದ ಲೇಬರ್ ಅಂಡ್ ಕಿಸಾನ್ ಪಾರ್ಟಿ ಆಫ್ ಹಿಂದೂಸ್ತಾನ್ ಎಂಬ ಪಕ್ಷವನ್ನು ವಿಸರ್ಜಿಸುವ ನಿರ್ಣಯಗಳನ್ನು ಸಮ್ಮೇಳನ ಅಂಗೀಕರಿಸಿತು. 'ಲೇಬರ್ ಅಂಡ್ ಕಿಸಾನ್ ಗೆಜೆಟ್' ಪತ್ರಿಕೆ ಹೊಸದಾಗಿ ಸ್ಥಾಪಿತವಾದ ಸಿಪಿಐ ಪಕ್ಷದ ಮುಖವಾಣಿ ಎಂದೂ ಮತ್ತು ಪಕ್ಷದ ಕೇಂದ್ರ ಕಛೇರಿಯು ಬೊಂಬಾಯಿಯಲ್ಲಿ ಇರಬೇಕೆಂದು ಸಮ್ಮೇಳನ ತೀರ್ಮಾನಿಸಿತು.

ಚರ್ಚೆಗಳ ಸಂದರ್ಭದಲ್ಲಿ, ಪಕ್ಷದ ಹೆಸರು ಮತ್ತು ಕಾರ್ಯನಿರ್ವಹಣೆಯ ಬಗ್ಗೆ ಸತ್ಯಭಕ್ತರ ಸೂಚನೆಗಳನ್ನು ಒಪ್ಪಿಕೊಳ್ಳಲಿಲ್ಲ. ಪಕ್ಷದ ಹೆಸರು ಇಂಡಿಯನ್ ಕಮ್ಯುನಿಸ್ಟ್ ಪಾರ್ಟಿ ಎಂದಿರಬೇಕೆಂದು ಮತ್ತು ಕಾಮಿಂಟರ್ನ್ ಜತೆ ಸಂಯೋಜಿಸಬಾರದೆಂದು ಸತ್ಯಭಕ್ತರು ಬಯಸಿದ್ದರು. ಯಾವುದೇ ಕಮ್ಯುನಿಸ್ಟ್ ಪಕ್ಷದ ಆಧಾರವಾಗಿರುವ ಅಂತರ್ರಾಷ್ಟ್ರೀಯತೆಯ ಪರವಾಗಿ ಅವರು ಇರಲಿಲ್ಲ. ಈ ಪ್ರಸ್ತಾಪಗಳನ್ನು ಬಹುಸಂಖ್ಯಾತ ಪ್ರತಿನಿಧಿಗಳು ತಿರಸ್ಕರಿಸಿದರು.


ಪಕ್ಷದ ಹೆಸರು ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ ಎಂದಿರಬೇಕು ಮತ್ತು ಪಕ್ಷವನ್ನು ಸೇರಲು ಬಯಸುವವರು ಸಹಿಮಾಡಿ ಕೊಡಬೇಕಾದ ಘೋಷಣಾ ಪತ್ರ ಹೇಗಿರಬೇಕು ಎಂದು ಸಮ್ಮೇಳನ ಅಂಗೀಕರಿಸಿತು. ಈ ಪತ್ರದ ಒಕ್ಕಣೆ ಹೀಗಿದೆ: "ಕೆಳಗೆ ಸಹಿ ಮಾಡಿರುವ, . . .ವಯಸ್ಸಿನವನಾದ ನಾನು, ಭಾರತದಲ್ಲಿ ಒಂದು ಕಾರ್ಮಿಕರ ಮತ್ತು ರೈತರ ಜನತಂತ್ರವನ್ನು ಸ್ಥಾಪಿಸಬೇಕೆಂಬ ಗುರಿಯಿರುವ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾದ ಘೋಷಣಾ ಪತ್ರಕ್ಕೆ ಸಹಿ ಮಾಡಲು ಒಪ್ಪಿದ್ದೇನೆ. ಮೊದಲ ಕಮ್ಯುನಿಸ್ಟ್ ಸಮ್ಮೇಳನದ ನಿರ್ಣಯಗಳನ್ನು ಎಚ್ಚರಿಕೆಯಿಂದ ಓದಿದ್ದೇನೆ . . .ಮತ್ತು ಸಾರ್ವಜನಿಕ ಸೇವೆಗಳನ್ನು – ಭೂಮಿ, ಗಣಿಗಳು, ಕಾರ್ಖಾನೆಗಳು, ಮನೆಗಳು, ಟೆಲಿಗ್ರಾಫ್ ಮತ್ತು ಟೆಲಿಫೋನ್, ರೈಲ್ವೇ ಮತ್ತಿತರ ಎಲ್ಲರ ಒಡೆತನ ಅಗತ್ಯವಾಗಿರುವ ಸಾರ್ವಜನಿಕ ಸೌಲಭ್ಯಗಳ ಸೇವೆಗಳನ್ನು – ರಾಷ್ಟ್ರೀಕರಣಗೊಳಿಸುವ ಮೂಲಕ ಕಾರ್ಮಿಕರಿಗೆ ಮತ್ತು ರೈತರಿಗೆ ಬದುಕುವ ಕೂಲಿಯನ್ನು ಖಾತ್ರಿಪಡಿಸುವ ಪಕ್ಷದ ತಕ್ಷಣದ ಗುರಿಯನ್ನು ಸಂಪೂರ್ಣವಾಗಿ ಒಪ್ಪುತ್ತೇನೆ."

ಕೇಂದ್ರ ಕಾರ್ಯಕಾರಿ ಸಮಿತಿಗೆ 30 ಸದಸ್ಯರನ್ನು ಚುನಾಯಿಸಬೇಕೆಂದು ಸಮ್ಮೇಳನ ಇಂಗಿತ ವ್ಯಕ್ತಪಡಿಸಿತ್ತು, ಆದರೆ ಸಮ್ಮೇಳನ ಕೇವಲ 16 ಸದಸ್ಯರನ್ನು ಚುನಾಯಿಸಿತು, ಉಳಿದ 14 ಸದಸ್ಯರನ್ನು ಪ್ರಾಂತಗಳಿಂದ ನಂತರ ಸಹಸದಸ್ಯರನ್ನಾಗಿ ಆಯ್ಕೆ ಮಾಡುವುದೆಂದು ತೀರ್ಮಾನಿಸಿತು. ಕೇಂದ್ರ ಕಾರ್ಯಕಾರಿ ಸಮಿತಿಯು ಡಿಸೆಂಬರ್ 28ರಂದು ಸಭೆ ಸೇರಿತು ಮತ್ತು ಪದಾಧಿಕಾರಿಗಳನ್ನು ಮತ್ತು

ಪುಟ 14 ಕ್ಕೆ



ಪ್ರಧಾನ ಕಾರ್ಯದರ್ಶಿಯಾಗಿ ಚುನಾಯಿತರಾದ ಎಸ್.ವಿ.ಘಾಟೆ ಮತ್ತು ಮೊದಲ ಕಮ್ಯುನಿಸ್ಟ್ ಸಮ್ಮೇಳನದ ವಂತಿಗೆ ರಸೀದಿ, ಪ್ರವೇಶ ಪತ್ರ ಹಾಗೂ ಸ್ವಯಂಸೇವಕ ಬ್ಯಾಜ್







ಸಿಐಟಿಯು ಸಂಘಟನೆಯನ್ನು ವಿಸ್ತರಿಸಿ ಬಲಪಡಿಸಲು ಕರೆ

ಎಸ್. ವರಲಕ್ಷ್ಮಿ, ರಾಜ್ಯ ಅಧ್ಯಕ್ಷರು

ಮಹತ್ವಪೂರ್ಣವಾದ ಮೂರು ವರ್ಷಗಳ ಸಮರಶೀಲ ಹೋರಾಟಗಳ ವ್ಯಾಪಕ ಅನುಭವಗಳನ್ನು ಹೊತ್ತು ತುಮಕೂರಿನಲ್ಲಿ ಸಿಐಟಿಯು ಕರ್ನಾಟಕ ರಾಜ್ಯ 14 ನೇ ಸಮ್ಮೇಳನದಲ್ಲಿ ಸೇರಿದ್ದೇವೆ. ಈ ಸಮ್ಮೇಳನ ನಡೆಯುತ್ತಿರುವ ಸಮಯ ಕಾರ್ಮಿಕ ವರ್ಗದ ದೃಷ್ಟಿಯಿಂದ ಐತಿಹಾಸಿಕ ವಾದದ್ದು. ಭಾರತದ ವಿಮೋಚನಾ ಆಂದೋಲನದ ಭಾಗವಾಗಿ ಕಾರ್ಮಿಕ ಚಳವಳಿಯ ಅಖಿಲ ಭಾರತ ಕೇಂದ್ರ ರಚನೆಯಾಗಿ ತ್ಯಾಗ–ಬಲಿದಾನಗಳ ನೂರು ವರ್ಷ ಪೂರ್ಣಗೊಳ್ಳುತ್ತಿದೆ. ದೇಶದ ಸಾಮಾಜಿಕ–ರಾಜಕೀಯ–ಆರ್ಥಿಕ ಚಿತ್ರಣ ದಲ್ಲಿ ಕಾರ್ಮಿಕ ವರ್ಗದ ಆಂದೋಲನದ ಪಾತ್ರವನ್ನು ಕುರಿತು ಕಾರ್ಮಿಕ ಸಂಘಗಳಲ್ಲಿ ತೀವ್ರವಾಗಿ ಚರ್ಚೆ ನಡೆಯುತ್ತಿದ್ದ ಸಂದರ್ಭದಲ್ಲಿ ಅಖಿಲ ಭಾರತ ಕೇಂದ್ರ ರಚನೆಯಾಗಿತ್ತು.

"ಭಾರತದ ಕಾರ್ಮಿಕರೇ, ಈ ಭೂಮಿ ನಿಮಗೆಲ್ಲರಿಗೂ ಸಮನಾಗಿ ಸೇರಿದ್ದು, ವೃತ್ತಿ ರಾಜಕಾರಣಿಗಾಗಲಿ, ಅಧಿಕಾರಶಾಹಿಗಳಿಗಾಗಲಿ ಅಥವಾ ಮಿಲ್ ಮಾಲೀಕ ಧನಿಕ ಪ್ರಭುಗಳಿಗಾಗಲಿ ಮೀಸಲಾದ ಸೊತ್ತಲ್ಲ. ನಿಮ್ಮ ದೇಶದ ಮುಖಂಡರು ಸ್ವರಾಜ್ಯ ಕೇಳುವಾಗ ನಿಮ್ಮನ್ನು ಲೆಕ್ಕದಿಂದ ಹೊರಗಿಡಲು ನೀವು ಬಿಡಬಾರದು. ನಿಮಗೆ ಆರ್ಥಿಕ ಸ್ವಾತಂತ್ರ್ಯವಿಲ್ಲದೆ ರಾಜಕೀಯ ಸ್ವಾತಂತ್ರ್ಯ ಅರ್ಥಹೀನ, ಆದ್ದರಿಂದ ಸ್ವಾತಂತ್ರ್ಯ ಹೋರಾಟದ ಆಂದೋಲನವನ್ನು ನೀವು ನಿರ್ಲಕ್ಷಿಸುವಂತಿಲ್ಲ, ನೀವು ಈ ಆಂದೋಲನ ವಿಭಿನ್ನ ಭಾಗ.." ಎಂದು ಎಐಟಿಯುಸಿ ಯ 1920 ರ 'ಭಾರತದ ಕಾರ್ಮಿಕ ರಿಗಾಗಿ ಪ್ರಣಾಳಿಕೆ' ಹೇಳಿತ್ತು. ಹಲವು ಹೊಸ ಹೋರಾಟಗಳ ಮೂಲಕ ಭಾರತದ ಕಾರ್ಮಿಕ ವರ್ಗ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖ ಪಾತ್ರ ನಿರ್ವಹಿಸಲು ಪ್ರಾರಂಭಿಸಿತು.

1970 ರಲ್ಲಿ ಕಾರ್ಮಿಕ ಚಳವಳಿಯಲ್ಲಿ ಪ್ರಜಾಸತ್ತಾತ್ಮಕ ಕಾರ್ಯಾಚರಣೆ ಯನ್ನು ಖಚಿತ ಪಡಿಸುವ ಆಶಯದೊಂದಿಗೆ, ಐಕ್ಯತೆ ಮತ್ತು ಹೋರಾಟ ದ ಘೋಷಣೆ ಯೊಂದಿಗೆ ಸಿಐಟಿಯು ಕಾರ್ಯಾರಂಭವಾಗಿ ಐವತ್ತು ವರ್ಷಪೂರ್ತಿ ಯಾಗುತ್ತಿರುವ ಸಮಯವಿದು. ಕಾರ್ಮಿಕ ವರ್ಗದ ಮೇಲಿನ ಶೋಷಣೆ ಕೊನೆಗೊಳ್ಳಬೇಕಾದರೆ ಎಲ್ಲ ಉತ್ಪನ್ನಗಳ ಸಲಕರಣೆಗಳು ವಿತರಣೆ ಮತ್ತು ವಿನಿಮಯವನ್ನು ಸಾಮಾಜೀಕರಣಗೊಳಿಸಿ ಸಮಾಜವಾದಿ ಪ್ರಭುತ್ವ ಸ್ಥಾಪನೆಯಿಂದ ಮಾತ್ರ ಸಾಧ್ಯ ಎಂದು ಸಿಐಟಿಯು ನಂಬಿಕೆಯಾಗಿದೆ. ಸಮಾಜವಾದದ ಆದರ್ಶಗಳನ್ನು ಎತ್ತಿಹಿಡಿಯುತ್ತಾ ಎಲ್ಲಾ ಶೋಷಣೆಗಳಿಂದ ಸಮಾಜವನ್ನು ಸಂಪೂರ್ಣವಾಗಿ ವಿಮೋಚನೆಗೊಳಿಸಲು ಸಿಐಟಿಯು ಬದ್ಧವಾಗಿದೆ. ಮುಂದುವರೆದು ಯಾವುದೇ ಸಾಮಾಜಿಕ ಬದಲಾವಣೆಯನ್ನು ವರ್ಗ ಹೋರಾಟವಿಲ್ಲದೆ ತರಲು ಸಾಧ್ಯವಿಲ್ಲ ಎಂಬ ತತ್ವಕ್ಕೆ ಸಿಐಟಿಯು ದೃಢವಾಗಿ ಬದ್ಧವಾಗಿರುತ್ತದೆ ಎಂದು ಸಿಐಟಿಯು ಸಂವಿಧಾನ ಹೇಳಿದೆ. ಇಂತಹ ಕಣ್ಣೋಟ ಕಾಲದ ಪರೀಕ್ಷೆ ಮೀರಿ ನಿಂತಿದೆ. ಐವತ್ತು ವರ್ಷಗಳ ಅನುಭವ ಸಿಐಟಿಯು ವನ್ನು ಮತ್ತಷ್ಟು ಬಲಪಡಿಸುವ ದೃಢವಾದ ಕಣ್ಣೋಟದೊಂದಿಗೆ ಸಂವಿಧಾನಾತ್ಮಕ ಗುರಿಗಳನ್ನು ಸಾಧಿಸುವತ್ತ ಮುನ್ನಡೆಯಬೇಕಿದೆ.

ಕರ್ನಾಟಕದಲ್ಲಿ ಸಿಐಟಿಯು ಸ್ಥಾಪನೆಯ ಸಂದರ್ಭದಲ್ಲಿ ನಮ್ಮೊಡನೆಯಿದ್ದ ಎಸ್.ಕೆ.ಟೈಲ್ಸ್ ವರ್ಕರ್ಸ್ ಯೂನಿಯನ್ (ಸ್ಥಾಪನೆ: 1952), ಕರ್ನಾಟಕ ಪ್ರವಿನ್ಷಿಯಲ್ ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್ (1956), ಮೈಸೂರು ಡಿಸ್ಟ್ರಿಕ್ಟ್ ಜನರಲ್ ವರ್ಕರ್ಸ್ ಯೂನಿಯನ್ (1961), ಕ್ಯಾಶುನಟ್ಸ ಎಂಡ್ ಅಲೈಡ್ ವರ್ಕರ್ಸ್ ಯೂನಿಯನ್ (1966), ದಿ ವೆಸ್ಟ್ ಕೋಸ್ಟ್ ಪೇಪರ್ ಮಿಲ್ ಎಂಪ್ಲಾಯೀಸ್ ಯೂನಿಯನ್ (1967), ಮಂಗಳೂರು ಬೀಡಿ ವರ್ಕರ್ಸ್ ಯೂನಿಯನ್ (1968), ಪೆರರ್ಲೈಟ್ ವರ್ಕರ್ಸ್ ಯೂನಿಯನ್ (1971), ಅಂದಿನಿಂದ ಇಂದಿಗೂ ಸಿಐಟಿಯುಗೆ ಸಂಯೋಜನೆಯಾಗಿರುವುದು ಹೆಮ್ಮೆಯ ವಿಷಯ ವಾಗಿದೆ. ಸಂಗಾತಿಗಳೇ, ತುಂಬಾ ಗಂಭೀರ ಸವಾಲಿನ ಸನ್ನಿವೇಶ ದಲ್ಲಿ ಈ ಸಮ್ಮೇಳನ ನಡೆಯುತ್ತಿದ್ದೆ. ರೂಡಿಗತ ಚರ್ಚೆಗಳು , ಸಭೆಗಳು, ಹಳೆಯ ರೀತಿಯ ಕಾರ್ಯವಿಧಾನಗಳು ಇಂದಿನ ಸವಾಲು ಗಳನ್ನು ಎದುರಿಸಲಾಗವು.

ಕಳೆದ ಮೂರು ವರ್ಷಗಳಲ್ಲಿ ಜಗತ್ತಿನ ಜನಸಮುದಾಯದ ಬಹು ದೊಡ್ಡ ಪ್ರಮಾಣದ ಜನರ ದುಡಿಮೆಯ ಮತ್ತು ಜೀವನದ ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿವೆ. ಜಗತ್ತಿನ ಆರ್ಥಿಕತೆಯಲ್ಲಿ ಯಾವುದೇ ಸುಧಾರಣೆ ಗಳಾಗುವ ಲಕ್ಷಣಗಳು ಕಾಣ ಬರುತ್ತಿಲ್ಲ. ದುಡಿಮೆಗಾರರನ್ನು ಶೋಷಿಸುವ ಪ್ರಮಾಣವನ್ನು ಹೆಚ್ಚಿಸಿಕೊಳ್ಳುವ, ಸಣ್ಣಪುಟ್ಟ ಉತ್ಪಾದಕರನ್ನು ನಿರ್ನಾಮ ಗೊಳಿಸುವ, ನಿರುದ್ಯೋಗಿಗಳ ಮೀಸಲು ಸೈನ್ಯ ವನ್ನು ಅನೇಕ ಪಟ್ಟು ಹೆಚ್ಚಿಸುವ ಮೂಲಕ ತನ್ನ ಲಾಭ ಗಳ ರಕ್ಷಣೆಗೆ ದಾರಿ ಮತ್ತು ಸಾಧನಗಳನ್ನು ಹುಡುಕುವ ಭರದಲ್ಲಿ ಜಾಗತಿಕ ಬಂಡವಾಳ ಶಾಹಿ ನಿರತ ವಾಗಿದೆ. ಹೊಸ ಹೊಸ ತಂತ್ರಜ್ಞಾನ, ಆವಿಷ್ಕಾರ ಗಳನ್ನು ವಶಪಡಿಸಿಕೊಂಡು ಅವುಗಳನ್ನು ಕೆಲವೇ ಅತಿ ಶ್ರೀಮಂತರ ಪ್ರಯೋಜನಕ್ಕಾಗಿ ಬಳಸಿಕೊಳ್ಳುವ ಪ್ರವೃತ್ತಿ ಮುಂದುವರಿದಿದೆ. ಅಮೆರಿಕ ನೇತೃತ್ವದ ಜಾಗತಿಕ ಬಂಡವಾಳಶಾಹಿ ತನ್ನ ಯಜಮಾನಿಕೆ ವಿರೋಧಿಸುತ್ತಿದ್ದ ವೆನೆಜುವೆಲಾ, ಇರಾನ್, ಸಿರಿಯಾದ ಚುನಾಯಿತ ಸರ್ಕಾರ ಗಳನ್ನು ಅಸ್ಥಿರ ಗೊಳಿಸುವ ಪ್ರಯತ್ನಗಳನ್ನು ತೀವ್ರ ಗೊಳಿಸಿದೆ. ಅಫಘಾನಿಸ್ಥಾನ್, ಸಿರಿಯಾ, ಯೆಮೆನ್,ಲಿಬಿಯಾ ಗಳಲ್ಲಿ ಸಾವಿರಾರು ಜನರನ್ನು ಹತ್ಯೆ ಮಾಡಿದ್ದಲ್ಲದೆ, ಸಾವಿರಾರು ಜನರು ನಿರಾಶ್ರಿತರು ಆಶ್ರಯ ಮತ್ತು ಉದ್ಯೋಗ ಹುಡುಕಿಕೊಂಡು ದೇಶಗಳ ಗಡಿಯಾಚೆ, ಸಮುದ್ರಗಳಾಚೆ ವಲಸೆ ಹೋಗುವಂತೆ ಮಾಡಿದೆ. ಪ್ಯಾಲೆಸ್ತೈನ್ ಮೇಲೆ ಇಸ್ರೇಲ್ ಆಕ್ರಮಣವನ್ನು ಉತ್ತೇಜಿಸುವುದನ್ನು ಮುಂದುವರೆಸಿದೆ. ತನ್ನನ್ನು ವಿರೋಧಿಸುತ್ತಿರುವ ದೇಶಗಳನ್ನು ಮಣಿಸಲು ಆರ್ಥಿಕ, ರಾಜಕೀಯ ಮತ್ತು ಮಿಲಿಟರಿ ದಿಗ್ಬಂಧನ ಅಸ್ತ್ರಗಳನ್ನು ಬಳಸಿಕೊಳ್ಳುವುದನ್ನು ಮುಂದುವರಿಸುತ್ತಿದೆ. ಆದರೆ ಚೀನಾ, ಕ್ಯೂಬಾ, ಉತ್ತರ ಕೋರಿಯಾ, ವೆನೆಜುವೆಲಾ ಮುಂತಾದ ಸ್ವಂತತ್ರ್ಯ ದೇಶಗಳು ಸೆಡ್ಡುಹೊಡೆದಿವೆ.

ಜಗತ್ತಿನಾದ್ಯಂತ ಅಂತರರಾಷ್ಟ್ರೀಯ ಹಣಕಾಸು ಬಂಡವಾಳ ಬಲಪಂಥೀಯ ಶಕ್ತಿಗಳನ್ನು ಬೆಂಬಲಿಸುತ್ತಿರುವುದು ತೀವ್ರವಾಗಿದೆ. ವಿದೇಶೀ ಹೂಡಿಕೆ ದಾರರನ್ನು ಒಲೈಸಲು ದೇಶಗಳ ಸಂಪತ್ತಿನ ಮಾರಾಟ ಮಾಡುವಾಗಲೂ, ವಿದೇಶೀ ಮತ್ತು ದೇಶೀಯ ದೊಡ್ಡ ಕಾರ್ಪೊರೇಟ್ ಸಂಸ್ಥೆಗಳಿಗೆ ಜನತೆಯ ಹಿತವನ್ನು ಅಡಮಾನ ವಿಡುವಾಗಲೂ, ಬಲಪಂಥೀಯ ಶಕ್ತಿ ಗಳು ರಾಷ್ಟ್ರೀಯತೆ, ದೇಶಪ್ರೇಮ ದಂತಹ ಜನಪ್ರಿಯ ಮುಖವಾಡಗಳನ್ನು ಧರಿಸುತ್ತವೆ. ವಿಶ್ವದ ಎರಡನೇಯ ಅತಿ ದೊಡ್ಡ ಆರ್ಥಿಕತೆಯಾಗಿರುವ ಚೀನಾ ಅಮೆರಿಕಾದ ಸವಾಲುಗಳನ್ನು ಎದುರಿಸುತ್ತಾ ಮುಂದಿನ ಹದಿನೈದು ವರ್ಷಗಳಲ್ಲಿ ಸಮಾಜವಾದಿ ಆಧುನಿಕರಣ ಸಾಧಿಸುವ ಗುರಿಯತ್ತ ಸಾಗುತ್ತಿದೆ. ಆನಂತರದ ಹದಿನೈದು ವರ್ಷದಲ್ಲಿ ಅಂದರೆ ತನ್ನ ವಿಮೋಚನೆಯ ಶತಮಾನೋತ್ಸವದ ಹೊತ್ತಿಗೆ ಒಂದು ಸಮೃದ್ಧ, ಶಕ್ತಿಶಾಲಿ, ಪ್ರಜಾಸತ್ತಾತ್ಮಕ, ಸಾಂಸ್ಕೃತಿಕ ವಾಗಿ ಮುಂದುವರಿದ ಮತ್ತು ಸೌಹಾರ್ದ ಸಮಾಜವಾದಿ ದೇಶವನ್ನಾಗಿ ಕಟ್ಟುವ ಗುರಿಯನ್ನು ಹೊಂದಿದೆ.

ತಮ್ಮ ಈಗಿನ ಸೌಲಭ್ಯಗಳನ್ನು, ನೈಜ ವೇತನ ಗಳನ್ನು, ಹಾಗೂ ಮೂಲಭೂತ ಹಕ್ಕುಗಳನ್ನು ರಕ್ಷಿಸಿಕೊಳ್ಳಲು ಕಾರ್ಮಿಕರು, ವಿರೋಚಿತ ವಾಗಿ ಪ್ರತಿರೋಧಿಸುವದನ್ನು ಮುಂದುವರಿಸಿದ್ದಾರೆ. ಉದ್ಯೋಗ ಕಳೆದುಕೊಂಡರೂ ಎದೆಗುಂದದೆ ಪ್ರಭುತ್ವದ ದಮನ, ಬಲಿಪಶುಗೊಳಿಸುವಿಕೆ, ಮತ್ತು ದೈಹಿಕ ದಾಳಿಗಳನ್ನು ಎದುರಿಸುತ್ತಿದ್ದಾರೆ. ವಿಶ್ವವಿದ್ಯಾಲಯ ಹಾಗು ಶಾಲಾ ಶಿಕ್ಷಕರು, ಸಾರಿಗೆ ಕಾರ್ಮಿಕರು, ತಯಾರಿಕೆ ಮತ್ತು ಸೇವಾ ಕ್ಷೇತ್ರದ ನೀಲಿ ಮತ್ತು ಬಿಳಿ ಉದ್ಯೋಗಿಗಳು ಅಮೆರಿಕಾ, ಯುರೋಪ ಮತ್ತು ಏಷ್ಯಾ ಸೇರಿದಂತೆ ಜಗತ್ತಿನಾದ್ಯಂತ ಹೋರಾಟದ ಕಣದಲ್ಲಿದ್ದಾರೆ. ಶಿಕ್ಷಕರು ವಿದ್ಯಾರ್ಥಿಗಳ ಬೇಡಿಕೆ ಯನ್ನು ಎತ್ತುತ್ತಿದ್ದಾರೆ. ಪೋಷಕರು ಹಾಗೂ ವಿದ್ಯಾರ್ಥಿಗಳು ಹೊರಾಟವನ್ನು ಸೇರಿಕೊಳ್ಳುತ್ತಿದ್ದಾರೆ.

ಹೌದು, ಜಗತ್ತಿನಲ್ಲಿ ಬಲಪಂಥೀಯ ಶಕ್ತಿಗಳು ಬಲವರ್ಧನೆ ಯಾಗುತ್ತಿರುವುದಕ್ಕೆ ದೊಡ್ಡ ಕಾರ್ಪೊರೇಟ್ ಗಳು ಮತ್ತು ಆಳುವ ವರ್ಗ ಗಳ ಬೆಂಬಲ ಪ್ರಮುಖ ಕಾರಣ ವಾಗಿದ್ದರೂ ಸಹ, ಬಲ, ಮಧ್ಯಮ ಮತ್ತು ತಾವುಮಧ್ಯಮ ದಿಂದ ಎಡಕ್ಕೆ ವಾಲಿರುವ ಪಕ್ಷಗಳು ಎಂದು ಕರೆದು ಕೊಳ್ಳುತ್ತಿರುವ ಪಕ್ಷ ಗಳು ಅನುಸರಿಸುತ್ತಿರುವ ಹಾನಿಕಾರಕ ನವ ಉದಾರೀಕರಣ ನೀತಿಗಳು, ಮಿತವ್ಯಯಿ ಕ್ರಮಗಳು ಮತ್ತು ಕಷ್ಟಪಟ್ಟು ಗಳಿಸಿದ್ದ ಕಾರ್ಮಿಕ ಹಕ್ಕುಗಳ ಮೇಲಿನ ದಾಳಿಗಳಿಂದಾಗಿ ಈ ನೀತಿಗಳಿಗೆ ಬಳಲುತ್ತಿರುವ ಸಾಮಾನ್ಯರು ಪರ್ಯಾಯ ಗಳನ್ನು ಹುಡುಕುತ್ತಿದ್ದಾರೆ. ಇವರಲ್ಲಿ ಅನೇಕರು ಬಲಪಂಥೀಯ ರು ಎತ್ತುತ್ತಿರುವ ಘೋಷಣೆ ಗಳ ಪ್ರಭಾವ ಕ್ಕೆ ಒಳಗಾಗುತ್ತಿದ್ದಾರೆ. ತಮಗಿಂತ ಭಿನ್ನ ವಾದ ಮೈ ಬಣ್ಣ,ಮಾತನಾಡುವ ಭಿನ್ನ ಭಾಷೆ, ಅನುಸರಿಸುವ ಭಿನ್ನ ಧರ್ಮ,ಆಚರಿಸುವ ಭಿನ್ನ ಸಂಸ್ಕೃತಿ ಇವುಗಳು ತಮ್ಮ ಸಂಕಟಕ್ಕೆ ಕಾರಣವೇ ಹೊರತು, ನವ ಉದಾರೀಕರಣವಲ್ಲ ಎಂದು ಭ್ರಮೆ ಯಲ್ಲಿಇದ್ದಾರೆ.

ಎಡ ಪಕ್ಷಗಳ ಬಲವಿದ್ದುದು ಜನರಲ್ಲಿ. ಎಲ್ಲೆಲ್ಲಿ ಹೋರಾಡುತ್ತಿರುವ ಜನರ ಜೊತೆ ದೃಡವಾಗಿ ನಿರಂತರ ಸ್ಥಿರ ವಾಗಿ ನವ ಉದಾರವಾದ ವನ್ನು ಎದುರಿಸಲಾಗಿದೆಯೋ ಅಲ್ಲೆಲ್ಲಾ ಅಂದರೆ ಗ್ರೀಸ್, ಪೋರ್ಚಗಲ್, ಸ್ಪೇನ್, ಡೆನ್ಮಾರ್ಕ್, ದಕ್ಷಿಣ ಅಮೆರಿಕಾದಲ್ಲಿ ಎಡ ಪಕ್ಷಗಳು ಬಲಗೊಂಡಿವೆ. ಸಮಾಜವಾದಿ ಪರಿಕಲ್ಪನೆ, ನಿರ್ದಿಷ್ಟವಾಗಿ ಯುವಜನರು ಮತ್ತು ಮಹಿಳೆಯರ ನಡುವೆ ಹೆಚ್ಚಿನ ಜನಪ್ರಿಯತೆ ಗಳಿಸಿವೆ.

ಸಂಗಾತಿಗಳೇ ಈ ಜಾಗತಿಕ ಪ್ರವೃತ್ತಿಗಳನ್ನು ನಾವು ಗಮನಿಸುತ್ತ ಬಂದಿದ್ದೇವೆ. ಆದರೆ ಪ್ರಶ್ನೆ ಇರುವದು ಈ ಬೆಳವಣಿಗೆಗಳನ್ನು ಭಾರತದ ಪರಿಸ್ಥಿತಿಗೆ ಹೇಗೆ ಅನ್ವಯಿಸುವದು?. ಅಂದರೆ ನಮ್ಮ ದೇಶದ ಸರ್ಕಾರಗಳು ಈಗಲೂ ಆಕ್ರಮಣಕಾರಿ ಯಾಗಿ ಉತ್ತೇಜಿಸುತ್ತಿರುವ ನವ ಉದಾರವಾದ ಕುಖ್ಯಾತಿ ಗೊಂಡಿದೆ ಮಾತ್ರವಲ್ಲ ವಿಫಲವಾದುದು ಸಾಬಿತಾಗಿದೆ. ಬಂಡವಾಳ ಶಾಹಿ ತನ್ನ ಪಾರಮ್ಯವನ್ನು ಕಳೆದುಕೊಂಡಿದ್ದು ಜನ ಪರ್ಯಾಯ ಹುಡುಕುತ್ತಿದ್ದಾರೆ. ಆದರೆ ಬಂಡವಾಳಶಾಹಿ ತನ್ನಷ್ಟಕ್ಕೆ ತಾನೇ ಸೋಲುವುದಿಲ್ಲ, ಅದರ ಬತ್ತಳಿಕೆಯಲ್ಲಿರುವ ಅಸ್ತ್ರ ಗಳು ಮುಗಿದಿಲ್ಲ. ಧಾರ್ಮಿಕ, ಜನಾಂಗೀಯ, ಜಾತಿ, ಭಾಷೆ, ಪ್ರಾದೇಶಿಕ ಆಧಾರಿತ ದ್ವೇಷ ಹರಡಲು ಬಲಪಂಥೀಯ ಶಕ್ತಿಗಳನ್ನು ಉತ್ತೇಜಿಸುವ ಮೂಲಕ ಮತ್ತು ತಳಮಟ್ಟದ ವರ್ಗ ಮೈತ್ರಿ ಯನ್ನು ಹಾಳು ಮಾಡುವ ಅಪ ಸ್ವರ ಗಳನ್ನು ನುಡಿಸುವ ಮೂಲಕ ಮತ್ತು ಜಗತ್ತಿನಾದ್ಯಂತ ವರ್ಗ ಮೈತ್ರಿ ಯನ್ನು ಹಾಳುಗೆಡವಲು ಭಯೋತ್ಪಾದನೆ ಮತ್ತು ಯುದ್ದವನ್ನು ಪ್ರಚೋದಿಸುವ ಮೂಲಕ ತನ್ನನ್ನು ತಾನು ಉಳಿಸಿಕೊಳ್ಳಲು ಪ್ರಯತ್ನಿಸುತ್ತದೆ.

ಭಾರತದಲ್ಲಿ ನಮ್ಮ ಪರಿಸ್ಥಿತಿ ಜಾಗತಿಕ ಬೆಳವಣಿಗೆಗಳಿಂದ ಪ್ರಭಾವಿತವಾಗಿದೆ. ಕಳೆದ ಐದು ವರ್ಷಗಳ ಅತ್ಯಂತ ಬಲಪಂಥೀಯ ಸರ್ಕಾರ ಮತ್ತೆ ಭಾರಿ ಬಹುಮತದಿಂದ ಅಧಿಕಾರಕ್ಕೆ ಬಂದಿದೆ. ಉದಾರವಾದ ಕ್ಕೆ ಅದರ ಅಚಲ ನಿಷ್ಠೆಯ ಕಾರಣ ಸಾರ್ವಜನಿಕ ಕ್ಷೇತ್ರದ ಉದ್ದಿಮೆ ಮತ್ತು ಸಂಸ್ಥೆಗಳು , ಶಿಕ್ಷಣ ಮತ್ತು ಆರೋಗ್ಯ ಸೇರಿದಂತೆ ಎಲ್ಲಾಸಾರ್ವಜನಿಕ ಸೇವೆಗಳನ್ನು ನಾಶಮಾಡುತ್ತಿದೆ.ಇಡಿ ಆರ್ಥಿಕತೆಯನ್ನು ಮತ್ತು ಜನರ ನ್ನು ಮಾರುಕಟ್ಟೆಯ ಮರ್ಜಿಗೆ ಬಲಿಕೊಡುತ್ತದೆ.ವ್ಯಾಪಾರ ಮಾಡುವ ದನ್ನು ಸುಗಮಗೊಳಿಸುವ ನೆಪದಲ್ಲಿ ಕಾರ್ಮಿಕರನ್ನು ನಿಕೃಷ್ಟ ಸ್ಥಿತಿಗೆ ತಳ್ಳುವ ಹಾಗು ಮಾಲೀಕರ ಮರ್ಜಿಗೆ ತಳ್ಳುವ ಕಾರ್ಮಿಕರ ಕಾನೂನು ಸಂಹಿತೆಗಳನ್ನು ಜಾರಿಗೊಳಿಸುತ್ತಿದೆ. ಕಲ್ಯಾಣ ಕಾರ್ಯಕ್ರಮ ಗಳನ್ನು ಸಂಪೂರ್ಣ ನಿರ್ನಾಮ ಗೊಳಿಸುತ್ತಿದೆ.

ಮೂರು ದಶಕಗಳ ನವ ಉದಾರೀಕರಣ ನೀತಿಗಳ ಮುಖ್ಯವಾಗಿ ಕಳೆದ ಐದು ವರ್ಷಗಳಿಂದ ಮೋದಿ ಸರ್ಕಾರ ಅದನ್ನು ತೀವ್ರ ವಾಗಿ ಜಾರಿಗೊಳಿಸಿದ್ದರ ಪರಿಣಾಮವಾಗಿ ಭಾರತದಲ್ಲಿ ಈಗ ಆರ್ಥಿಕ ಹಿಂಜರಿತದ ಅಂಚಿಗೆ ಬಂದಿರುವ ಆರ್ಥಿಕ ಮಂದಗತಿ, ಅದರಿಂದಾಗಿ ವ್ಯಾಪಕ ಪ್ರಮಾಣದ

ಪುಟ 10 ಕ್ಕೆ

ಸಿಐಟಿಯು ಸಂಘಟನೆಯನ್ನು ವಿಸ್ತರಿಸಿ ಬಲಪಡಿಸಲು ಕರೆ....... ಪುಟ 9 ರಿಂದ

ನಿರುದ್ಯೋಗ, ಲಕ್ಷಾಂತರ ಕಾರ್ಮಿಕರ ರಿಟ್ರೆಂಚ್‌ಮೆಂಟ್, ಮುಂದುವರೆಯುತ್ತಿರುವ ಕಾರ್ಷಿಕ ಸಂಕಟ ಇವೆಲ್ಲವೂ ಜನಗಳ ಮೇಲೆ ಹೆಚ್ಚೆಚ್ಚು ದುಸ್ಥಿತಿಗಳನ್ನು ಹೇರುತ್ತಿವೆ. 2011–12ರ ವಿವಾದಾತ್ಮಕ ಮೂಲವರ್ಷ ಸರಣಿಯನ್ನು ಅಧರಿಸಿದ ಜಿಡಿಪಿ ಮಾಹಿತಿಯ ಪ್ರಕಾರವೂ, ಜಿಡಿಪಿ ಬೆಳವಣಿಗೆ ದರ ಕಳೆದ ಐದು ತ್ರೈಮಾಸಿಕಗಳಲ್ಲಿ ಸತತವಾಗಿ ಇಳಿಯುತ್ತ ಬಂದಿದೆ. 2017–18ರ ಕೊನೆಯ ತ್ರೈಮಾಸಿಕದಲ್ಲಿ 8.1 ಶೇ. ಇದ್ದದ್ದು, 2019–20ರ ಮೊದಲ ತ್ರೈಮಾಸಿಕದ ವೇಳೆಗೆ 5ಶೇ.ಕ್ಕೆ ಇಳಿದಿದೆ. ಕೈಗಾರಿಕಾ ಉತ್ಪಾದನೆಯ ಸೂಚ್ಯಂಕ(ಐಐಪಿ)ವೂ ಆರ್ಥಿಕ ಮಂದಗತಿಯನ್ನು ದೃಢಪಡಿಸಿದೆ. ಕೈಗಾರಿಕಾ ಉತ್ಪಾದನೆಯ ತಯಾರಿಕಾ ಸೂಚ್ಯಂಕದಲ್ಲಿ ಬೆಳವಣಿಗೆ 2019–20ರ ಎಪ್ರಿಲ್–ಜುಲೈ ಅವಧಿಯಲ್ಲಿ ಕೇವಲ 2.8ಶೇ. ಕಳೆದ ವರ್ಷ ಇದೇ ಅವಧಿಯಲ್ಲಿ ಅದು 5.6ಶೇ.ವಿತ್ತು. ಇದೇ ರೀತಿ ಒಟ್ಟು ಐ.ಐ.ಪಿ. ಬೆಳವಣಿಗೆ ಕಳೆದ ವರ್ಷದ ಎಪ್ರಿಲ್–ಜೂನ್ ಅವಧಿಯಲ್ಲಿ 5.4ಶೇ. ಇದ್ದದ್ದು, ಈ ವರ್ಷ ಅದೇ ಅವಧಿಯಲ್ಲಿ 3.3ಶೇ.ಕ್ಕೆ ಇಳಿದಿದೆ. ನಿಜ ಸಂಗತಿಯೆಂದರ ಬಂಡವಾಳ ಸರಕುಗಳ ಉತ್ಪಾದನೆ ಹೆಚ್ಚುವ ಬದಲು 4.3ಶೇ.ದಷ್ಟು ಇಳಿದಿದೆ. ಕಳದ ವರ್ಷ ಈ ಅವಧಿಯಲ್ಲಿಅದು 7.1ಶೇ. ಬೆಳವಣಿಗೆ ತೋರಿಸಿತ್ತು. ಬಾಳಿಕೆಯ ಬಳಕೆ ವಸ್ತುಗಳ ಉತ್ಪಾದನೆಯೂ 2.7ಶೇ. ದಷ್ಟು ಕುಂಠಿತಗೊಂಡಿದೆ.

ಈ ಆರ್ಥಿಕ ಹಿಂಜರಿತದ ಪರಿಣಾಮವಾಗಿ ನಿರುದ್ಯೋಗ ಹಿಂದೆಂದೂ ಕಾಣದ ಮಟ್ಟಕ್ಕೆ ಏರಿದೆ. ಅಧಿಕೃತ ಅಂಕೆ–ಸಂಖ್ಯೆಗಳು ಸಾಮಾನ್ಯವಾಗಿ ಕೀಳಂದಾಜನ್ನೇ ಮಾಡುತ್ತವೆ. ಆದರೆ ಈ ಅಂಕೆ–ಸಂಖ್ಯೆಗಳ ಆಧಾರದಲ್ಲಿ ಸಿ.ಎಂ.ಇ.ಐ. ಮಾಡಿರುವ ಅಂದಾಜಿನ ಪ್ರಕಾರವೂ ಸಪ್ಟಂಬರ್ 27, 2019ರ ವೇಳೆಗೆ ನಿರುದ್ಯೋಗ 9.94ಶೇ. ವನ್ನು ತಲುಪಿದೆ. ಇದು ಕಳೆದ ಅರ್ಧ ಶತಮಾನದಲ್ಲೇ ಅತೀ ಹೆಚ್ಚು. ಆಗಸ್ಟ್‌ಅಂತ್ಯದ ವೇಳೆಗೆ ಅಧಿಕೃತವಾಗಿ 4.5 ಕೋಟಿ ಜನಗಳು ನಿರುದ್ಯೋಗಿಗಳಾಗಿದ್ದರು. ಕಳೆದ ವರ್ಷಕ್ಕೆ ಹೋಲಿಸಿದರೆ 1.1. ಕೋಟಿಯಷ್ಟು ಹೆಚ್ಚಳವನ್ನು ಇದುತೋರಿಸುತ್ತದೆ. ಯುವಜನರಲ್ಲಿ ನಿರುದ್ಯೋಗ 28ಶೇ. ಎಂದು ಅಂದಾಜು ಮಾಡಲಾಗಿದೆ.

ಕೆಲವು ದಿನಗಳ ಹಿಂದೆ 2019ರ ಜಾಗತಿಕ ಹಸಿವಿನ ಸೂಚ್ಯಂಕವೂ ಪ್ರಕಟವಾಗಿದೆ. ಇದರಲ್ಲಿ ಭಾರತ 117 ದೇಶಗಳಲ್ಲಿ 102ನೇ ಸ್ಥಾನದಲ್ಲಿದೆ. ಭಾರತವನ್ನು ಹಸಿವಿನ ಪ್ರಮಾಣ ಗಂಭೀರ ಮಟ್ಟದಲ್ಲಿರುವ ದೇಶಗಳ ಪಟ್ಟಿಯಲ್ಲಿ ಹಾಕಲಾಗಿದೆ. ಅಪೌಷ್ಟಿಕತೆಯಿಂದ ನರಳುತ್ತಿರುವ ಜನಸಂಖ್ಯೆಯ ಪ್ರಮಾಣ, 5 ವರ್ಷದ ಕೆಳಗಿನ ಮಕ್ಕಳಲ್ಲಿ ಕುಂಠಿತ ಬೆಳವಣಿಗೆಯ ಪ್ರಮಾಣ ಮತ್ತುಕಡಿಮೆತೂಕದ ಮಕ್ಕಳ ಪ್ರಮಾಣ ಹಾಗೂ 5 ವರ್ಷದ ಕೆಳಗಿನ ಮಕ್ಕಳ ಮರಣದರಇವನ್ನು ಗಮನಕ್ಕೆ ತಗೊಂಡು ಹಸಿವಿನ ಸ್ಕೋರ್ ಲೆಕ್ಕ ಹಾಕಲಾಗುತ್ತದೆ. ಈ ಸ್ಕೋರ್ ಹೆಚ್ಚಿದಷ್ಟು ಹಸಿವಿನ ಪ್ರಮಾಣ ಹೆಚ್ಚು ಎಂಬುದನ್ನು ಗಮನಿಸಬೇಕು. ಆದರೆ ಹಸಿವಿನ ಸೂಚ್ಯಂಕದ ಅಂಕಗಳನ್ನು ಗಮನಿಸಿದರೆ ಭಾರತದ ಸ್ಕೋರ್ 2014 ರಲ್ಲಿ 17.8 ಇದ್ದದ್ದು 2019ರಲ್ಲಿ 30.3 ಆಗಿದೆ. ದಕ್ಷಿಣ ಏಷ್ಯಾದಲ್ಲಿ ಭಾರತ ಎಲ್ಲರಿಗಿಂತ ಕೆಳಗೆ ಇದೆ. ಭಾರತಕ್ಕಿಂತ ಮೇಲೆ ಪಾಕಿಸ್ತಾನ(94), ಬಾಂಗ್ಲಾದೇಶ್(88), ನೇಪಾಳ(73) ಮತ್ತು ಎಲ್ಲಕ್ಕೂ ಮೇಲೆ ಶ್ರೀಲಂಕ(66) ಇವೆ.

ಮೋದಿ ಸರ್ಕಾರ 2014 ರಲ್ಲಿ ಅಧಿಕಾರಕ್ಕೆ ಬಂದ ಕೂಡಲೇ ಕಾರ್ಮಿಕ ಕಾನೂನುಗಳಿಗೆ ತಿದ್ದುಪಡಿಗಳನ್ನು ತಂದಿತು. ಕಾರ್ಖಾನೆ ಕಾಯ್ದೆ–1960, ಕನಿಷ್ಠ ವೇತನ ಕಾಯ್ದೆ–1948, ಅಪ್ರೆಂಟಿಸ್ ಕಾಯ್ದೆ–1961, ವೃತ್ತಿ ಸಂಘಗಳ ಕಾಯಿದೆ–1961,ಸಣ್ಣ ಕೈಗಾರಿಕೆಗಳ (ಉದ್ಯೋಗ ಕ್ರಮೀಕರಣ ಮತ್ತು ಸೇವಾ ನಿಯಮಗಳ) ಮಸೂದೆ–2014, ಗಳನ್ನುಮಾಲೀಕರ ಪರವಾಗಿ ತರಲಾಯಿತು. ಅದಕ್ಕಿಂತ ಮೊದಲು ಬಿಜೆಪಿ ಆಡಳಿತದ ರಾಜಸ್ತಾನ, ಮಧ್ಯಪ್ರದೇಶ ಗಳಲ್ಲಿ ಈ ತಿದ್ದುಪಡಿ ಮಾಡಲಾಯಿತು. ಆನಂತರ ಮುಂದುವರಿದು ಎಲ್ಲಾ 44 ಕಾರ್ಮಿಕ ಕಾನೂನು ಗಳನ್ನು ಸೇರಿಸಿ ನಾಲ್ಕು ಸಂಹಿತೆಗಳನ್ನು ರಚಿಸಲಾಗಿದೆ. ಕಾರ್ಮಿಕ ಕಾನೂನುಗಳ ಎಲ್ಲ ಸಕಾರಾತ್ಮಕ ಅಂಶಗಳನ್ನು ಈ ಸಂಹಿತೆಗಳು ಕೈಬಿಟ್ಟಿವೆ.

ರಾಜ್ಯದ ಪರಿಸ್ಥಿತಿ: ಭಾರತ ಸರ್ಕಾರ ಅನುಸರಿಸುತ್ತಿರುವ ನವ ಉದಾರೀಕರಣ ನೀತಿ ರಾಜ್ಯದಲ್ಲಿಯೂ ದೊಡ್ಡದಾದ ಪರಿಣಾಮ ಬೀರಿದೆ. ಮತ್ತು ರಾಜ್ಯ ಸರ್ಕಾರವೂ ಕೂಡಾ ಈ ನೀತಿಗಳನ್ನು ಜಾರಿ ಮಾಡುವಲ್ಲಿ ಹೆಚ್ಚಿನ ಮುತವರ್ಜಿ ನೋಡಿಸುತ್ತದೆ. ದಕ್ಷಿಣ ಭಾರತದ ಪ್ರಮುಖ 4 ರಾಜ್ಯಗಳಲ್ಲಿ ಕರ್ನಾಟಕ ಅತಿದೊಡ್ಡ ರಾಜ್ಯ. ರಾಜ್ಯದ 6.11 ಕೋಟಿ ಜನಸಂಖ್ಯೆಯಲ್ಲಿ 2 ಕೋಟಿ 78 ಲಕ್ಷ ದುಡಿಯುವ ಜನರಿದ್ದಾರೆ. ಇದರಲ್ಲಿ 65 ಲಕ್ಷ 80 ಸಾವಿರ ಕೃಷಿಕರು, 68 ಲಕ್ಷ 85 ಸಾವಿರ ಕೃಷಿ ಕೂಲಿಕಾರರು, 9 ಲಕ್ಷ ಗೃಹ ಕೈಗಾರಿಕೆಯಲ್ಲಿನ ಕೆಲಸಗಾರರು ಮತ್ತು ಉಳಿದಂತೆ 1 ಕೋಟಿ 33 ಲಕ್ಷ ಜನರು ಇತರೆ ಕೆಲಸಗಾರರಾಗಿದ್ದಾರೆ.



ನವ ಉದಾರವಾದಿ ನೀತಿಗಳ ದುಷ್ಪರಿಣಾಮದಿಂದ ಬಳಲಿದ ದುಡಿಯುವ ಜನತೆಯಲ್ಲಿ ಪ್ರಮುಖವಾಗಿ ರೈತರು ಮತ್ತು ಕಾರ್ಮಿಕರು ಹಾಗೂ ಇತರೆ ಜನ ವಿಭಾಗಗಳಲ್ಲಿ ಅಸಮಾಧಾನ ಹೆಚ್ಚುತ್ತಿದೆ. ಹೋರಾಟಗಳಲ್ಲಿ ಈ ವಿಭಾಗಗಳ ಜನರ ಭಾಗವಹಿಸುವಿಕೆ ಹೆಚ್ಚುತ್ತಿವೆ. ಕೇಂದ್ರ ಕಾರ್ಮಿಕ ಸಂಘಟನೆಗಳ ಕರೆಯ ಮೇರೆಗೆ ನಡೆದ ಸಾರ್ವತ್ರಿಕ ಮುಷ್ಕರಗಳು, ರೈತ ಸಂಘಟನೆಗಳ ಜಂಟೀ ಹೋರಾಟಗಳಲ್ಲಿ ಗಮನಿಸಬಹುದಾಗಿದೆ. ಬೆಳೆದು ಬರುತ್ತಿರುವ ಹೋರಾಟಗಳ ಪ್ರಭಾವಗಳನ್ನು ತಣ್ಣಗಾಗಿಸುವ ನಿಟ್ಟಿನಲ್ಲಿ ಬಿಜೆಪಿ ಹಾಗೂ ಸಂಘ ಪರಿವಾರ ಹಿಂದುತ್ವದ ತನ್ನ ಅಜೆಂಡಾ ಹರಿಬಿಡುತ್ತಿದೆ. ಕೋಮುಗಲಭೆಗಳನ್ನು ಸೃಷ್ಟಿಸಿ ಜನತೆಯನ್ನು ಧರ್ಮದ ಆಧಾರದಲ್ಲಿ ಧೃವೀಕರಿಸಲು ಮುಂದಾಗಿದೆ. ರಾಜ್ಯದಲ್ಲಿ ಅಧಿಕಾರದಲ್ಲಿದ್ದ ಕಾಂಗ್ರೆಸ್ ಇದನ್ನು ಸಮರ್ಥವಾಗಿ ಎದುರಿಸದೇ ಆಂತರಿಕ ಜಗಳದಲ್ಲಿ ಮುಳುಗಿತ್ತು. ಅಂತಿಮವಾಗಿ 15 ನೇ ಕರ್ನಾಟಕ ರಾಜ್ಯ ವಿಧಾನ ಸಭಾ ಚುನಾವಣೆಯ ನಂತರ ಕೋಮುವಾದಿ ಪಕ್ಷವನ್ನು ಅಧಿಕಾರದಿಂದ ದೂರವಿಡಲು ಕಾಂಗ್ರೆಸ್ – ಜೆಡಿಎಸ್ ಪಕ್ಷಗಳು ತೀರ್ಮಾನ ಮಾಡಿ ಮೈತ್ರಿ ಸರ್ಕಾರ ರಚನೆ ಮಾಡಿದವು. ಇದರಿಂದ ಇಡೀ ದೇಶಕ್ಕೆ ಒಂದು ಸಂದೇಶವನ್ನು ಕಳಿಸಲು ಸಾಧ್ಯವಾಯಿತು. ಆದರೆ ಬಿಜೆಪಿ ಕುತಂತ್ರದಿಂದ ಆ ಪಕ್ಷಗಳಿಂದ ಕೆಲವು ಶಾಸಕರನ್ನು ಹೊರ ಸೆಳೆದು ರಾಜೀನಾಮೆ ಕೊಡಿಸಿ ತನ್ನ ಸರ್ಕಾರ ರಚಿಸಿದೆ.

ಉದಾರೀಕರಣ ನೀತಿಗಳ ಅಡಿ ಸಾರ್ವಜನಿಕ ಕೈಗಾರಿಕೆಗಳ ಖಾಸಗಿಕರಣದ ಪರಿಣಾಮದಿಂದ ಈಗಾಗಲೇ ರಾಜ್ಯದಲ್ಲಿ ಃ.ಖ.ಓ.ಐ, ಃಇಐ, ಃಊಇಐ, ಃಇಒಐ, ಗಿಖಖಐಗಳಲ್ಲಿ ಖಾಯಂ ಕಾರ್ಮಿಕರಿಗಿಂತ ಗುತ್ತಿಗೆ, ಟ್ರೈನಿ, ಕ್ಯಾಶ್ಯುಲ್ ಕಾರ್ಮಿಕರ ಸಂಖ್ಯೆಯೇ ಹೆಚ್ಚಾಗಿದೆ. ಭದ್ರಾವತಿಯಲ್ಲಿರುವ ಗಿಖಖಐ 1928 ರಲ್ಲಿ ಮೈಸೂರಿನ ಮಹಾರಾಜರು ಸರ್. ಎಂ. ವಿಶ್ವೇಶ್ವರಯ್ಯ ರವರ ಸಲಹೆಯ ಮೇರೆಗೆ ಸ್ಥಾಪಿಸಿದಂತಹ ಕಾರ್ಖಾನೆ. ಸುಮಾರು 24 ಸಾವಿರ ಕಾರ್ಮಿಕರಿಗೆ ಉದ್ಯೋಗ ನೀಡಿ ಉತ್ತಮ ದರ್ಜೆಯ ಉಕ್ಕನ್ನು ಉತ್ಪಾದಿಸುತ್ತಿದ್ದ ಕಾರ್ಖಾನೆ. ಕಚ್ಚಾ ಸಾಮಾಗ್ರಿ ಒದಗಿಸಲು ಸಂಡೂರು ಬಳಿ 2 ಗಣಿಗಳನ್ನು ಈ ಕಾರ್ಖಾನೆಗೆ ಕೊಡಲಾಗಿದೆ. ಈ ಕಾರ್ಖಾನೆಗೆ ಅಗತ್ಯವಿರುವುದು ತಾಂತ್ರಿಕತೆಯ ಅಪ್‌ಡೇಟ್ ಉಕ್ಕು ಪ್ರಾಧಿಕಾರ ಅದನ್ನು ಮಾಡುವ ಬದಲಿಗೆ ಇಂದು ಖಾಸಗೀಕರಿಸಲು ಹೊರಟಿದೆ. ಕಾರ್ಖಾನೆಯ ಒಡೆತನದಲ್ಲಿದ್ದ 1400 ಎಕರೆ ಜಮೀನನ್ನು ಒಳಗೊಂಡು ಇಡಿ ಕಾರ್ಖಾನೆಯನ್ನು ಮಾರಲು ಹೊರಡಿದೆ.

ವರ್ಲ್ಡ್ ಹೆಲ್ತ್ ಆರ್ಗನೈಸೇಶನ್ ತಂಬಾಕಿನ ಮೇಲೆ ಹೇರಿದ ನಿಷೇಧದ ಪರಿಣಾಮದಿಂದ ಬೀಡಿ ಕೈಗಾರಿಕೆ ಬಿಕ್ಕಟ್ಟಿನಲ್ಲಿದೆ. ಅಮದು ಮತ್ತು ರಫ್ತು ನೀತಿಗಳ ಪರಿಣಾಮವಾಗಿ ಸಾಂಪ್ರದಾಯಿಕ ಕೈಗಾರಿಕೆಗಳಾದ ಟೈಲ್ಸ್, ಗೋಡಂಬಿ, ತರಹದ ಕೈಗಾರಿಕೆಗಳು ಮತ್ತು ಕಾಫಿ ಉದ್ಯಮ ಮೇಲೆ ತೀವ್ರ ತರವಾದ ಸಂಕಷ್ಟಗಳು ಎದುರಾಗಿವೆ. ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಮುಚ್ಚುತ್ತಿವೆ.

ಆಟೋಮೊಬೈಲ್ಸ್ ಮತ್ತು ಇಂಜಿನಿಯರಿಂಗ್ ಇಂಡಸ್ಟ್ರೀಗಳಲ್ಲಿ ಉತ್ಪಾದನೆಯಾಗುತ್ತಿರುವ ವಸ್ತುಗಳು ವ್ಯಾಪಕವಾಗಿ ಮಾರಾಟವಾಗದೆ ಇರುವುದರಿಂದ ನೂರಾರು ಕಾರ್ಖಾನೆಗಳಲ್ಲಿ ಲೇ ಆಫ್ ರಜೆಗಳನ್ನು ಘೋಷಿಸಲಾಗಿದೆ. ಸಾವಿರಾರು ಗುತ್ತಿಗೆ, ದಿನಗೂಲಿ, ಕಾರ್ಮಿಕರನ್ನು ಕೆಲಸದಿಂದ ಹೊರಹಾಕಲಾಗುತ್ತಿದೆ. ಈ ಕೈಗಾರಿಕೆಗಳಿಗೆ ಪ್ರತ್ಯಕ್ಷವಾಗಿ ಆಧಾರಿತ ಮತ್ತು ಅಪ್ರತ್ಯಕ್ಷವಾಗಿ ಆಧಾರಿತ ಸಣ್ಣ ಸಣ್ಣ ಉಪಕರಣಗಳನ್ನು ತಯಾರು ಮಾಡುವ ಕಾರ್ಖಾನೆಗಳ, ಕಾರ್ಖಾನೆಗಳ ಮಾಡುವ ಲಕ್ಷಾಂತರ ಕಾರ್ಮಿಕರ ಮೇಲೂ ಇದರ ಪರಿಣಾಮ ಬೀರಿದೆ.

ಪೀರಿಯಾಡಿಕಲ್ ಲೇಬರ್ ಫೋರ್ಸ್ ಸರ್ವೇ (ಕಐಈಖ) ನ ವರದಿಯ ಪ್ರಕಾರ ರಾಜ್ಯದಲ್ಲಿ ವ್ಯಕ್ತಿ ಆಧಾರಿತ ದುಡಿಮೆಗಾರರು 35%, ಗೃಹ ಆಧಾರಿತ ಕೈಗಾರಿಕೆಗಳಲ್ಲಿ 12.7%, ಅಂದರೆ ಒಟ್ಟೂ ಸ್ವ ಉದ್ಯೋಗಿಗಳು 47.8%, ಇತರೆ ಕಾರ್ಮಿಕರಲ್ಲಿ 26.8%. ಇದರ ಪ್ರಕಾರ ಪ್ರತಿ ತಿಂಗಳು ನಿಗದಿತ ಸಂಬಳ ತೆಗೆದುಕೊಳ್ಳುವವರಿಗಿಂತ ತಮ್ಮ ಸ್ವಂತ ಕೆಲಸಗಳ ಮೇಲೆ ಅವಲಂಬನೆಯಾಗಿರುವವರೇ ಹೆಚ್ಚಾಗಿದ್ದಾರೆ ಮಾತ್ರವಲ್ಲದೇ 26.8% ಜನರು ಸಾಂಧರ್ಭಿಕ, ಗುತ್ತಿಗೆ, ಅರೆಕಾಲಿಕ ಉದ್ಯೋಗಗಳಲ್ಲಿದ್ದಾರೆ. ಎಂಬುದು ಬಹಳ ಗಂಭೀರವಾದ ವಿಷಯ ಮತ್ತು ಇವರು ಯಾವುದೇ ಸವಲತ್ತುಗಳು ಇಲ್ಲದೇ ತಮ್ಮ ಮಾಲೀಕರು ಹೇಳಿದ ಕೆಲಸವನ್ನು ಮಾಡಬೇಕಾದ ದುಸ್ಥಿತಿಯಲ್ಲಿದ್ದಾರೆ. ಇವರನ್ನು ಸಂಘಟಿಸುವುದು ನಮ್ಮ ಮುಂದಿರುವ ದೊಡ್ಡ ಸವಾಲುಗಳಲ್ಲಿ ಒಂದು ಪ್ರಮುಖವಾದ ಸವಾಲು.

ಹಾಗೆಯೇ, 78.32 ಲಕ್ಷ ಉಳಿಮೆಗಾರರು 121.61 ಲಕ್ಷ ಹೆಕ್ಟರ ಕೃಷಿ ಭೂಮಿ ಹೊಂದಿದ್ದಾರೆ. ಸಣ್ಣ ಮತ್ತು ಅತಿ ಸಣ್ಣ ಹಿಡುವಳಿಗಳು 76.44 ಶೇಕಡವಾಗಿದ್ದು, ಒಟ್ಟು ಕೃಷಿ ಭೂಮಿಯಲ್ಲಿ ಅತಿ ಸಣ್ಣ ಹಿಡುವಳಿದಾರರಿದ್ದು 15.34 ಶೇಕಡಾ ಭೂಮಿ ಹೊಂದಿದ್ದಾರೆ. ಸತತ ಬರಗಾಲ ಪರಿಣಾಮವಾಗಿ ಎಲ್ಲಾ ಬೆಳೆಗಳ ಉತ್ಪಾದನೆ ಸತತವಾಗಿ ಕಡಿಮೆಯಾಗಿದೆ. ಇತ್ತೀಚೀನ ಜಿಎಸ್.ಟಿ. ಯಿಂದಾಗಿ ಕೃಷಿಲಾಗುವಾಡುಗಳ ಬೆಲೆಗಳು ಹೆಚ್ಚಾಗಿವೆ. ಪರಿಣಾಮವಾಗಿ ಮೊದಲೇ ಸಂಕಷ್ಟದಲ್ಲಿದ್ದ ರೈತರು ಮತ್ತಷ್ಟು ಸಂಕಷ್ಟಕ್ಕೆ ಒಳಪಟ್ಟಿದ್ದಾರೆ. 21 ಲಕ್ಷ ಹೆಕ್ಟರ್ ಬೇಸಾಯ ಯೋಗ್ಯ ಭೂಮಿ ಬೀಳು ಬಿದ್ದಿದೆ. ರೈತರ ಆತ್ಮ ಹತ್ಯೆಯಲ್ಲಿ 3 ನೇ ಸ್ಥಾನದಲ್ಲಿ ಕರ್ನಾಟಕವಿದೆ. ಈಗ ಅತಿವೃಷ್ಠಿಯ ಕಾರಣದಿಂದ ಕರ್ನಾಟಕ ತತ್ತರಿಸುತ್ತಿದೆ.

ಉದ್ಯೋಗ ಖಾತ್ರಿ ಯೋಜನೆ : 57.23 ಲಕ್ಷ ಕುಟುಂಬಗಳು ಜಾಬ್ಕಾರ್ಡ್ ಪಡೆದಿವೆ. ಕೈಗಾರಿಕೆಗಳಿಗೆ, ರಸ್ತೆ, ವಸತಿಯೋಜನೆಗಳಿಗೆ ಭೂಮಿಯನ್ನು ವಶಪಡಿಸಿಕೊಳ್ಳುವುದು ಹಾಗೂ ಬೀಳು ಬಿದ್ದಿರುವ ಭೂಮಿಯನ್ನು ಸದ್ಬಳಕೆ ಮಾಡುವ ನೆಪದಲ್ಲಿ ಕೇಂದ್ರ ಸರ್ಕಾರವು ಕೃಷಿ ಭೂಮಿ ಗೇಣಿ ಮಾದರಿ ಅದಿನಿಯಮ 2016 ರನ್ನು ರೂಪಿಸಿ ರಾಜ್ಯ ಸರ್ಕಾರಗಳು ಇದನ್ನು ತರಬೇಕೆಂದೂ ಒತ್ತಡ ತರುತ್ತಿದೆ. ಇದು ಬಂದರೆ ಗೇಣಿ ಪದ್ಧತಿ ಮರುಕಳಿಸುವ ಹಾಗೂ ಕೃಷಿಯಲ್ಲಿ ಕಾರ್ಪೊರೇಟ್ಕರಣಕ್ಕೆ ಇದು ಅನುವು ಮಾಡಿಕೊಡುತ್ತದೆ. ಕೃಷಿಯಲ್ಲಿನ ಈ ಸಮಸ್ಯೆಯಿಂದಾಗಿ ಅಪಾರ ಪ್ರಮಾಣದಲ್ಲಿ ರೈತರು ಭೂಮಿ ಕಳೆದುಕೊಂಡು ಕೃಷಿಕೂಲಿಕಾರರಾಗಿ ಪರಿವರ್ತನೆಯಾಗುತ್ತಿದ್ದಾರೆ. ಮಾತ್ರವಲ್ಲದೆ ನಗರಗಳಿಗೆ ದೊಡ್ಡ ಪ್ರಮಾಣದಲ್ಲಿ ವಲಸೆ ಹೋಗಿ, ಅತ್ಯಂತ ಕಡಿಮೆ ಕೂಲಿ ಪಡೆಯುವ ಹಂಗಾಮಿ ಮತ್ತು ಅರೆಕಾಲಿಕ ಕೆಲಸ ಮಾಡುತ್ತಿರುವ ನಿರುದ್ಯೋಗಿ ಸೈನ್ಯಕ್ಕೆ ಭರ್ತಿಯಾಗುತ್ತಿದ್ದಾರೆ.

ರಾಜ್ಯದಲ್ಲಿ ಬರಗಾಲದಿಂದ ತತ್ತರಿಸಿದ 118 ಕ್ಕೂ ಹೆಚ್ಚು ತಾಲೂಕಿನ ಜನ ಇನ್ನೂ ಪರಿಹಾರಕ್ಕಾಗಿ ಕೇಂದ್ರ ಸರ್ಕಾರದಿಂದ ನೆರವನ್ನು ನಿರೀಕ್ಷಿಸುತ್ತಾವಿರುವಾಗಲೇ ರಾಜ್ಯದ ಜನರು 2019 ಅಗಸ್ಟ ಮೊದಲ ವಾರದಿಂದ ಸುರಿಯುತ್ತಿರುವ ಭಾರಿ ಮಳೆಯ ಕಾರಣ ನೆರೆಹಾವಳಿಯಿಂದ ಸಂಕಷ್ಟಕ್ಕೆ ಸಿಲುಕಿದರು.

ಸರ್ಕಾರದ ದಾಖಲೆ ಗಳಂತೆ ರಾಜ್ಯದ 22 ಜಿಲ್ಲೆಗಳಲ್ಲಿ 103 ತಾಲ್ಲೂಕು ಗಳು ನೆರೆಹಾವಳಿಯಿಂದ ಬಾಧಿತವಾಗಿವೆ. 6,97,948 ಜನ ಸ್ಥಳಾಂತರ ಗೊಳ್ಳಬೇಕಾಗಿ ಬಂದಿದೆ. 61 ಜನ ಜೀವ ಕಳೆದುಕೊಂಡರು, 15 ಜನ ನಾಪತ್ತೆ ಯಾದರು.859 ಜಾನುವಾರಗಳು ಸತ್ತಿವೆ. 1160 ನಿರಾಶ್ರಿತ ಕೇಂದ್ರಗಳಲ್ಲಿ 3,96,617 ಜನರಿಗೆ ಆಶ್ರಯ ನೀಡಲಾಗಿದೆ. 56381 ಮನೆ ಗಳು ಹಾನಿಗೊಳಗಾದ ವು. 51460 ಜಾನುವಾರು ಗಳನ್ನು ರಕ್ಷಿಸಲಾಗಿದೆ. 4.8 ಲಕ್ಷ ಹೆಕ್ಟೇರ್ ಗಳಲ್ಲಿನ ಕೃಷಿ ಮತ್ತು ತೋಟಗಾರಿಕೆ ಬೆಳೆಗಳು ಹಾನಿಗೆ ಒಳಗಾಗಿವೆ, ರಾಜ್ಯಹೆದ್ದಾರಿ ಗಳನ್ನು ಒಳಗೊಂಡಂತೆ ರಸ್ತೆ ಗಳು ಸೇತುವೆಗಳು ಹಾಳಾಗಿವೆ. ಒಟ್ಟು ನಷ್ಟ ರೂ.36000 ಕೋಟಿ ಎಂದು ಸರ್ಕಾರದ ಪ್ರಾಥಮಿಕ ಅಂದಾಜುಗಳು ದಾಖಲಿಸಿವೆ.ಸರ್ಕಾರದ ಮಾಹಿತಿ ಸಂಗ್ರಹ ವ್ಯವಸ್ಥೆಯ ನ್ಯೂನ್ಯತೆ ಗಳನ್ನು ಗಮನಿಸಿದರೆ ಬಾಧಿತರ ಸಂಖ್ಯೆ ಇದರ ಎರಡು ಪಟ್ಟು ಇರುವ ಸಾಧ್ಯತೆ ಇದೆ. ನಿರಾಶ್ರಿತರು ನಿರಂತರ ಭಾರಿ ಮಳೆ, ಜಲಾನಯನ ಪ್ರದೇಶಗಳಲ್ಲಿ ಸುರಿದ ಮಳೆ ಕಾರಣ ನದಿಗಳ ನೀರಿನ ಹರಿವು ಹೆಚ್ಚಾಗಿ, ಆಣೆಕಟ್ಟುಗಳಲ್ಲಿ ಸಂಗ್ರಹವಾದ ನೀರನ್ನು ಸೂಕ್ತ ಸೂಚನೆಗಳಿಲ್ಲದೆ ಹೊರ ಬಿಟ್ಟದ್ದು, ಮಾನವ ನಿರ್ಮಿತ ರಸ್ತೆ, ಸೇತುವೆ ಗಳ ಅವೈಜ್ಞಾನಿಕ ಕಾಮಗಾರಿ ಕಾರಣ ಗುಡ್ಡ ಕುಸಿತ, ಕೂಡಲೇ ಸರಕಾರದಿಂದ ಸೂಕ್ತ ಕ್ರಮ ಕೈಗೊಳ್ಳುವದರಲ್ಲಿ ವೈಫಲ್ಯ, ಸರ್ಕಾರವು ಬಹಳ ಸಮಯದವರೆಗೂ ನಿಷ್ಕ್ರಿಯತೆಯಲ್ಲಿ ಇದ್ದು ತೋರಿದ ಅಸಡ್ಡೆಗಳು ಸೇರಿ ಜನರ ಸಂಕಷ್ಟಗಳು ಇಮ್ಮಡಿಯಾದವು.

ಬಹುತೇಕ ಜಿಲ್ಲೆಗಳಲ್ಲಿ ನೈಸರ್ಗಿಕ ವಿಕೋಪಗಳ ಸಂದರ್ಭದಲ್ಲಿ ವ್ಯವಹರಿಸಲು ಪರಿಹಾರ ಯೋಜನೆಗಳ ಕಾರ್ಯಸೂಚಿ ಲಭ್ಯವಿದ್ದರೂ, ಪರಿಹಾರಕ್ಕೆ ನಾಯಕತ್ವ ಕೊಡಬೇಕಾದ ಆಡಳಿತ ಪಕ್ಷದ ರಾಜಕೀಯ ವ್ಯವಸ್ಥೆ

ವಿದ್ಯಾರ್ಥಿ ವೇತನದ ಗೊಂದಲ ನಿವಾರಿಸಲು ಮತ್ತು ಎಲ್ಲಾ ವಿದ್ಯಾರ್ಥಿಗಳಿಗೂ ಲ್ಯಾಪ್‌ಟಾಪ್ ನೀಡಲು SFI ಒತ್ತಾಯ

ಕಾರವಾರ: ಪೋರ್ಟಲ್ ವಿದ್ಯಾರ್ಥಿ ವೇತನದ ಗೊಂದಲವನ್ನು ನಿವಾರಿಸಲು ಒತ್ತಾಯಿಸಿ ಮತ್ತು ಕಳೆದ ಎರಡು ವರ್ಷಗಳಿಂದ ವಿಳಂಬವಿರುವ ಲ್ಯಾಪ್‌ಟಾಪ್ ವಿತರಿಸಲು ಒತ್ತಾಯಿಸಿ ಎಸ್‌ಎಫ್‌ಐ ಉತ್ತರ ಕನ್ನಡ ಜಿಲ್ಲಾ ಸಮಿತಿಯಿಂದ ಮಾನ್ಯ ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ರಾಜ್ಯದಲ್ಲಿ ಈ ಭಾರಿ ವಿದ್ಯಾರ್ಥಿ ವೇತನ ಅರ್ಜಿಯನ್ನು ತುಂಬಾ ವಿಳಂಬವಾಗಿ ಅಹ್ವಾನಿಸಿದ್ದು ಎಲ್ಲಾ ಪದವಿ ವಿದ್ಯಾರ್ಥಿಗಳ ಪರೀಕ್ಷೆ ನಡೆಯುತ್ತಿರುವ ಸಂದರ್ಭದಲ್ಲಿ SSP ಪೋರ್ಟಲ್ ಎಂಬ ಹೊಸ ಗೊಂದಲದ ಗೂಡನ್ನು ಸೃಷ್ಟಿಸಿ ಸದಾ ವೆಬ್ ಸೈಟ್ ಸಮಸ್ಯೆ ಕಾಡುತ್ತಿದೆ ಇತ್ತ ಪರೀಕ್ಷೆ ಬರೆಯಲು ಆಗದೇ ಈ ಗೊಂದಲದಲ್ಲಿ ವಿದ್ಯಾರ್ಥಿಗಳು ಸಿಲುಕಿದ್ದಾರೆ ಹಾಗಾಗಿ ವಿದ್ಯಾರ್ಥಿ ವೇತನದ ಗೊಂದಲ ತಕ್ಷಣ ಬಗೆಹರಿಸಬೇಕು ವೆಬ್ ಸೈಟ್ ಸಮಸ್ಯೆ ನಿವಾರಿಸಲು ಮುಂದಾಬೇಕು ಮತ್ತು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ನವೆಂಬರ್ 30 ಆಗಿದ್ದು ಅದನ್ನು ವಿಸ್ತರಿಸಬೇಕು ಎಂದು ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್‌ಎಫ್‌ಐ) ಉತ್ತರ ಕನ್ನಡ ಜಿಲ್ಲಾ ಸಮಿತಿಯು ಸರ್ಕಾರವನ್ನು ಒತ್ತಾಯಿಸುತ್ತದೆ.

ಅದೇ ರೀತಿ ಕಳೆದ ಎರಡು ವರ್ಷದಿಂದ ನೀಡಬೇಕಾದ ಲ್ಯಾಪ್‌ಟಾಪ್ ಇನ್ನೂ ನೀಡಿಲ್ಲ ಮತ್ತೆ ಈ ವರ್ಷದ ಡಿಗ್ರಿ ಪ್ರಥಮ ವರ್ಷದ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಇದು ಸರ್ಕಾರದ ವಿದ್ಯಾರ್ಥಿ ವಿರೋಧಿ ನೀತಿ ಮತ್ತು ಒಡೆದಾಳುವ ನೀತಿ ಆಗಿದೆ. ತಕ್ಷಣ ಸರ್ಕಾರ ಹಿಂದಿನ ಎರಡು ವರ್ಷಗಳಿಂದ ವಿಳಂಬ ಇರುವ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ನೀಡಬೇಕು ಮತ್ತು ಈಗ ಅರ್ಜಿ ಹಾಕುತ್ತಿರುವ ಎಲ್ಲಾ ವಿದ್ಯಾರ್ಥಿಗಳಿಗೂ ಲ್ಯಾಪ್‌ಟಾಪ್ ನೀಡಬೇಕೆಂದು ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್‌ಎಫ್‌ಐ) ಉತ್ತರ ಕನ್ನಡ ಜಿಲ್ಲಾ ಸಮಿತಿ ಸರ್ಕಾರವನ್ನು ಒತ್ತಾಯಿಸುತ್ತದೆ ಎಂದು ಜಿಲ್ಲಾ ಸಂಚಾಲಕರಾದ ಗಣೇಶ ರಾಠೋಡ ಹೇಳಿದರು.

ಮನವಿಯನ್ನು ಸ್ವೀಕರಿಸಿದ ಮಾನ್ಯ ಜಿಲ್ಲಾಧಿಕಾರಿಗಳು ಲ್ಯಾಪ್‌ಟಾಪ್ ಬಗ್ಗೆ ಸರ್ಕಾರದ ಗಮನಕ್ಕೆ ತರುತ್ತವೆ ಎಂದರು ಇನ್ನೂ SSP ವಿದ್ಯಾರ್ಥಿ ವೇತನದ ವೆಬ್ ಸೈಟ್ ಸಮಸ್ಯೆ ಇರುವುದರಿಂದ ಕೊನೆಯ ದಿನಾಂಕ ನವೆಂಬರ್ 30 ಇರುವುದನ್ನು ವಿದ್ಯಾರ್ಥಿಗಳಿಗೆ ಸಮಸ್ಯೆ ಆಗದೇ ಇರುವ ಹಾಗೆ ವಿಸ್ತರಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಎಸ್‌ಎಫ್‌ಐ ನ ಜಿಲ್ಲಾ ಸಂಚಾಲಕರಾದ ಗಣೇಶ ರಾಠೋಡ ಅವರು ಎಸ್‌ಎಫ್‌ಐ ನ ಜಿಲ್ಲಾ ಸಮಿತಿ ಪರವಾಗಿ ಮನವಿಯನ್ನು ಸಲ್ಲಿಸಿದರು.

ಗಣೇಶ ರಾಠೋಡ

➪➪➪

ನಿಷ್ಕ್ರಿಯವಾಗಿತ್ತು. ಸರ್ಕಾರದಿಂದ ಸೂಕ್ತ ಸಂಪನ್ಮೂಲ ತುರ್ತಾಗಿ ಲಭ್ಯವಾಗಿರಲಿಲ್ಲ. ಕೇಂದ್ರ ಸರ್ಕಾರವಂತೂ ರಾಜ್ಯವನ್ನು ಪೂರ್ತಿ ನಿರ್ಲಕ್ಷಿಸಿತು , ಕರ್ನಾಟಕದ ಆಳುವ ಪಕ್ಷದವರೇ ಆಗಿದ್ದ 25 ಸಂಸದರು ಜನರ ಸಮಸ್ಯೆಗೂ ಸ್ಪಂದಿಸಲಿಲ್ಲ. ಕೇಂದ್ರದಿಂದ ಸಂಪನ್ಮೂಲ ತರಲು ಒತ್ತಾಯಿಸಲಿಲ್ಲ.

ನಮ್ಮ ಸಿಐಟಿಯು ನ ಅನೇಕ ಸದಸ್ಯರು ಸೇರಿದಂತೆ ಸಾವಿರಾರು ಬಡ ರೈತರು, ಕಾರ್ಮಿಕರು ಭಾದಿತರಾದರು. ಸರ್ಕಾರದ ಕಾಳಜಿ ಕೇಂದ್ರಗಳಲ್ಲಿ ಯೋಜನಾ ಕಾರ್ಮಿಕರು ಮುಖ್ಯವಾಗಿ ಅಂಗನವಾಡಿ, ಬಿಸಿಯೂಟ, ಆಶಾ ಕಾರ್ಯಕರ್ತರು, ಪಂಚಾಯತ ನೌಕರರು ತಮ್ಮ ಸ್ವಂತ ಸಂಕಷ್ಟಗಳನ್ನು ಮರೆತು ಭಾದಿತರಿಗೆ ನಿರಂತರ ಪರಿಹಾರ ವದಗಿಸಲು ಅನೇಕ ದಿನದಳ ಕಾಲ ಶ್ರಮಿಸಿದ್ದು ಅಭಿನಂದನಾರ್ಹ. ರಾಜ್ಯದ ವಿವಿಧ ಭಾಗಗಳಿಂದ ಸಿಐಟಿಯು ಒಳಗೊಂಡಂತೆ ಇತರ ಸಾಮೂಹಿಕ ಸಂಘಟನೆ ಗಳ ಸದಸ್ಯರು ,ಬೆಂಗಳೂರಿನ ಕಾರ್ಮಿಕರು, ಸನ್‌ಸೇರಾ ಕಾರ್ಖಾನೆಯ ಕಾರ್ಮಿಕರ ಸಂಘ, ಐಟಿ ಕಾರ್ಮಿಕರು ಸುಮಾರು 2 1/2 ಕೋಟಿರೂ ಗಳನ್ನು ಸ್ವಯಂ ಸ್ಫೂರ್ತಿಯಿಂದ ಅವಶ್ಯಕ ಪರಿಹಾರ ಸಾಮಗ್ರಿಗಳನ್ನು, ಆಹಾರ ಪೊಟ್ಟಣ ಗಳು, ಆಹಾರ ಧಾನ್ಯ, ಬಟ್ಟೆಗಳನ್ನು, ಪಾತ್ರೆಗಳನ್ನು, ಶೈಕ್ಷಣಿಕ ಸಾಮಗ್ರಿಗಳನ್ನು, ತಾತ್ಕಾಲಿಕ ಶೆಡ್ ನಿರ್ಮಾಣ ಸಾಮಗ್ರಿಗಳನ್ನು, ಸಂಗ್ರಹಿಸಿ ನೀಡಿದ್ದಾರೆ. ಅನೇಕ ತಾಲೂಕಿನ ಲ್ಲಿ ನಮ್ಮ ಕಾರ್ಯಕರ್ತರು ಅವುಗಳನ್ನು ಅವಶ್ಯಕತೆ ಇದ್ದವರಿಗೆ ಮುಟ್ಟಿಸಲು ಶ್ರಮಿಸಿದರು.

ಹಿಂದೆ ರಾಜ್ಯಕ್ಕೆ ಬರ ಪರಿಹಾರವನ್ನು ನೀಡುವಲ್ಲಿ ಹಿಂದೇಟು ಹಾಕಿದ್ದ ಕೇಂದ್ರ ಸರ್ಕಾರ ಈಗ ನೆರೆಪರಿಹಾರ ನೀಡುವಲ್ಲಿಯೂ ಭಾರೀ ವಿಳಂಬ ಮಾಡಿತು. ಈಗ ಭಾರಿ ಟೀಕೆಗಳ ನಂತರ ಅಂದಾಜು ನಷ್ಟ ರೂ. 36,000 ಕೋಟಿ ಮೀರಿದ್ದರೂ, ಕೇವಲ ರೂ. 1200 ಕೋಟಿ ಪರಿಹಾರ ನೀಡುವುದಾಗಿ ತಿಳಿಸಿದೆ. ಅದೇ ಸಂದರ್ಭದಲ್ಲಿ ಚುನಾವಣೆ ನಡೆಯಲಿದ್ದ ಮಹಾರಾಷ್ಟ್ರ ಮತ್ತು ಬಿಹಾರ ಗಳಿಗೆ ಹೆಚ್ಚು ಪರಿಹಾರ ಮೀಸಲಾಗಿದೆ. ಕೇಂದ್ರದ ಈ ತಾರತಮ್ಯ ನೀತಿ ಖಂಡನಾರ್ಹ.

ನವ ಉದಾರವಾದಿ ಆರ್ಥಿಕ ನೀತಿಗಳೊಂದಿಗೆ ಸೇರಿ ಕೋಮುವಾದ,ಭಾರತದ ಕಾರ್ಮಿಕವರ್ಗಕ್ಕೆ ಒಂದು ಗಂಭೀರವಾದ ಬೆದರಿಕೆ ಒಡ್ಡುತ್ತಿದೆ.

ಭಾರತದ ಸನ್ನಿವೇಶದಲ್ಲಿ ಕೋಮುವಾದ ಎಂದರೆ ಧರ್ಮದ ಆಧಾರದಲ್ಲಿ ಅಸ್ಮಿತೆಗಳನ್ನು ಕಟ್ಟುವುದು ಮತ್ತು ಬೇರೆಬೇರೆ ಧರ್ಮದ ನಡುವೆ ರಾಜಕೀಯ ಲಾಭ ಕ್ಕಾಗಿ ದ್ವೇಷ ಮತ್ತು ಗಲಭೆ ಹುಟ್ಟು ಹಾಕುವುದು ಎಂದು ವ್ಯಾಖ್ಯಾನ ಮಾಡಬಹುದು.ಧಾರ್ಮಿಕ ಅಸ್ಮಿತೆಗಳು ಮತ್ತು ಧರ್ಮ ರಾಜಕಾರಣ ದಲ್ಲಿ ಕೆಲವು ನಿರ್ದಿಷ್ಟ ಧರ್ಮಗಳನ್ನು ಕುರಿತು ಅಸಂಭದ್ದವಾದ ಅತಿ ವಿಚಿತ್ರ ಕಲ್ಪನೆಗಳ ಮೂಲಕ ದ್ವೇಷ ಪೂರಿತ ಕಾರ್ಯಾಚರಣೆಗಳನ್ನು ನಡೆಸಲಾಗುತ್ತದೆ. ಈ ರಾಜಕೀಯ ಕಾರ್ಯಸೂಚಿಯಲ್ಲಿ ಜನ ಸಮುದಾಯದ ಧಾರ್ಮಿಕ ಮತ್ತು ಸಾಂಸ್ಕೃತಿಕ ಆಚರಣೆಗಳಲ್ಲಿರುವ ಭಿನ್ನತೆಗಳನ್ನು ಉಪಯೋಗಿಸಿ ಕೊಂಡು ಕೆಲವು ಪಕ್ಷಗಳ ಅಥವಾ ವ್ಯಕ್ತಿಗಳ ರಾಜಕೀಯ ಅಧಿಕಾರ ಪಡೆಯುವ, ಉಳಿಸಿಕೊಳ್ಳುವ ಅಥವಾ ತಿರುಗಿ ಪಡೆಯುವ ಪ್ರಯತ್ನ ನಡೆಸಲಾಗುತ್ತದೆ. ಕೋಮುವಾದ ಅದು ಯಾವುದೇ ಬಗೆಯದಾಗಿರಲಿ ಅದು ಧಾರ್ಮಿಕ ನಂಬಿಕೆಗಳ ಕುರಿತುದಾಗಿರುವುದಿಲ್ಲ.

ಮೋದಿ ಸರ್ಕಾರ ಆಡಳಿತಕ್ಕೆ ಬಂದ ನಂತರ ಕೋಮುವಾದಿ ಹಿಂಸೆಗಳು, ಗುಂಪು ಹಲ್ಲೆಗಳು ಹೆಚ್ಚಿವೆ ಮತ್ತು 2017 ರಲ್ಲಿ ಅವು ತೀವ್ರ ಗೊಂಡಿವೆ ಎಂದು ಕೇಂದ್ರ ಗ್ರಹ ಇಲಾಖೆಯ ದಾಖಲೆ ಗಳೇ ಹೇಳುತ್ತವೆ. ಅತಿಹೆಚ್ಚು ಧಾರ್ಮಿಕ ಆಧಾರಿತ ಗಲಭೆಗಳು ನಡೆದ ಕಾರಣದಿಂದ ಜಗತ್ತಿನಲ್ಲಿ ಸಿರಿಯಾ, ನೈಜೆರಿಯಾ, ಇರಾಕಿನ ನಂತರ ನಾಲ್ಕನೇ ಸ್ಥಾನವನ್ನು ಭಾರತ ಪಡೆದಿದೆ. 2015ರಲ್ಲಿ ಕರ್ನಾಟಕದಲ್ಲಿ 105 ಗಲಭೆಗಳು ಮೃತಪಟ್ಟವರು 8 ಜನ, 2016 ರಲ್ಲಿ 101 ಗಲಭೆಗಳು ಮೃತ ಪಟ್ಟವರು 12 ಜನ, 2017 ರಲ್ಲಿ ಕರ್ನಾಟಕದಲ್ಲಿ 100 ಘಟನೆಗಳು ವರದಿಯಾಗಿತ್ತು.



ನವ ಉದಾರವಾದಿ ನೀತಿಗಳು ಕಾರ್ಮಿಕರು ಮತ್ತು ಜನಸಾಮಾನ್ಯರ ಮೇಲೆ ಭಾರಿ ಹೊರೆಯನ್ನು ಹೇರಿವೆ. ಜನರ ದುಡಿಯುವ ಮತ್ತು ಜೀವನದ ಪರಿಸ್ಥಿತಿ ಗಳು ಹದಗೆಟ್ಟಿವೆ. ಅವರ ಮೂಲಭೂತ ಮಾನವ ಹಕ್ಕುಗಳನ್ನು ದಮನ ಮಾಡಲಾಗುತ್ತಿದೆ. ಇವು ಜನಸಾಮಾನ್ಯರಲ್ಲಿ ಸಿಟ್ಟು ಮತ್ತು ರೋಷಕ್ಕೆ ಎಡೆ ಮಾಡಿಕೊಟ್ಟಿವೆ. ಈ ಆಕ್ರೋಶ ವನ್ನು ನವ ಉದಾರೀಕರಣ ನೀತಿಗಳ ವಿರುದ್ದದ ಪರಿಣಾಮಕಾರಿಯಾದ ಬಲಿಷ್ಟ ಹೋರಾಟ ಗಳನ್ನಾಗಿ ರೂಪಿಸಿ ಆಮೂಲಕ ಅವುಗಳನ್ನು ಹಿಮ್ಮೆಟ್ಟಿಸಿ,ಜನಪರ, ಕಾರ್ಮಿಕರ ಪರ ,ಪರ್ಯಾಯ ನೀತಿಗಳ ಜಾರಿಗೆ ಒತ್ತಾಯಿಸಲು, ಕಾರ್ಮಿಕ ವರ್ಗದ ಮತ್ತು ದುಡಿಯುವ ಜನರ ಎಲ್ಲಾ ವಿಭಾಗಗಳ ಸಂಪೂರ್ಣ ಐಕ್ಯತೆ ಅವಶ್ಯಕ. ಕೊಮುವಾದ ಕಾರ್ಮಿಕ ವರ್ಗ ಐಕ್ಯತೆ ಯನ್ನು ತಡೆಯುತ್ತದೆ ಮತ್ತು ಜನಸಮುದಾಯ ದಲ್ಲಿರುವ ಒಗ್ಗಟ್ಟಿಗೆ ಬೆದರಿಕೆ ಒಡ್ಡುತ್ತದೆ.. ದಶಕಗಳಿಂದ ಚಳುವಳಿ ಗಳಲ್ಲಿ ಮೂಡಿಬಂದ ಐಕ್ಯತೆ ಯನ್ನು ನಾಶಪಡಿಸಲು ಪ್ರಯತ್ನಿಸುತ್ತದೆ. ಐಕ್ಯ ಹೋರಾಟಗಳ ಬೆಳವಣಿಗೆ, ಸುಸ್ಥಿರತೆ,ಮತ್ತು ಬಲವರ್ಧನೆ ಯನ್ನು ಗಂಭೀರವಾಗಿ ಪ್ರತಿಭಂದಿಸುತ್ತದೆ.

ಒಂದು ವರ್ಗ ಸಂಘಟನೆಯಾಗಿ ಸಿಐಟಿಯು ಇಡೀ ಕಾರ್ಮಿಕ ವರ್ಗವನ್ನು ಅಣಿನೆರೆಸಿ ನವ ಉದಾರವಾದಿ ನೀತಿಗಳ ವಿರುದ್ದದ ಹೋರಾಟವನ್ನು ತೀವ್ರ ಗೊಳಿಸುವ ಜವಾಬ್ದಾರಿ ಹೊಂದಿದೆ. ಉದಾರವಾದಿ ನೀತಿಗಳನ್ನು ಕಳಚಿ ಹಾಕುವದು ಸಿ ಐ ಟಿ ಯು ನ ಮುಖ್ಯ ಆಶಯವಾಗಿ ಅದರ ಸಂವಿಧಾನ ದಲ್ಲಿ ಅಳವಡಿಸಿದ" ..ಎಲ್ಲಾ ಶೋಷಣೆ ಗಳಿಂದ ಸಮಾಜವನ್ನು ಸಂಪೂರ್ಣವಾಗಿ ವಿಮೋಚನೆ ಗೊಳಿಸಲು ಸಿಐಟಿಯು ಬದ್ದ ವಾಗಿದೆ" ಎನ್ನುವದನ್ನು ಜಾರಿಗೊಳಿಸುವ ಲ್ಲಿ ಪ್ರಮುಖ ಹೆಜ್ಜೆಯಾಗಿದೆ. ಕೋಮು ಗಲಭೆ ಗಳು ಒಮ್ಮೆಲೆ ಘಟಿಸುವದಿಲ್ಲ. ಬದಲಾಗಿ ಅವು ಜರಗುವ ಮೊದಲು ಅನೇಕ ದಿನಗಳ ಕಾಲ ಸೂಪ್ತವಾಗಿ ಶೈಕ್ಷಣಿಕ, ಸಾಂಸ್ಕೃತಿಕ, ಸಾಮಾಜಿಕ ಸಂಸ್ಥೆಗಳು ಮತ್ತು ಮಾಧ್ಯಮಗಳನ್ನು ಬಳಸಿ ಅಪಪ್ರಚಾರ ನಡೆಸಲಾಗುತ್ತದೆ. ಅವೈಚಾರಿಕ ಮತ್ತು ಆವೈಜ್ಞಾನಿಕ ವಿಚಾರಗಳನ್ನು ಹರಿಬಿಡಲಾಗುತ್ತದೆ. ಈ ಕೋಮುವಾದಿ ತತ್ವ ಕಾರ್ಮಿಕ ವರ್ಗದ ಕಾರ್ಯಕರ್ತರ ನಡುವೆ ನುಸುಳಿರುವುದನ್ನು ಮತ್ತು ಅದನ್ನು ಸಂಪೂರ್ಣವಾಗಿ ಎದುರಿಸಲಾಗದ ನಮ್ಮ ದೌರ್ಬಲ್ಯ ವನ್ನು ಆತಂಕದಿಂದ ಕಾಣಬೇಕಿದೆ.

ವರ್ಗವನ್ನು ಒಂದು ಗೂಡಿಸುವ ನಮ್ಮ ಪ್ರಯತ್ನದಲ್ಲಿ ಸಂಘಟನೆಯ ಎಲ್ಲ ಹಂತಗಳಲ್ಲಿ, ಪ್ರಸಕ್ತ ವರ್ಗ ವಿಭಜಿತ ಸಮಾಜ ಪ್ರತಿ ದಿನ ಹುಟ್ಟಿಸುತ್ತಿರುವ ಎಲ್ಲಾ ರೀತಿಗಳ ವಿಭಜನಕಾರಿ ಮತ್ತು ವಿಚ್ಚಿದ್ರಕಾರಿ ಶಕ್ತಿಗಳ ವಿರುದ್ಧ ಹೋರಾಡುವ ಸಾಮಥ್ಯ9ವನ್ನು ಕಟ್ಟುವುದಕ್ಕೆ ಮತ್ತು ಪ್ರಜ್ಞೆ ಯನ್ನು ಮೂಡಿ ಸುವದಕ್ಕೆ ಆದ್ಯತೆ ನೀಡಬೇಕು.

ಇತ್ತೀಚಿನ ಬೆಳವಣಿಗೆಗಳು ತೋರುವುದೆನೆಂದರೆ ಸಿಐಟಿಯು ವನ್ನು ಗಣನೀಯವಾಗಿ ಬಲಪಡಿಸದೆ ದುಡಿಯುವ ಜನತೆಯ ಮೇಲೆ ಆಳುವ ವರ್ಗಗಳ ಮತ್ತು ಸಾಮ್ರಾಜ್ಯಶಾಹಿಯ ಹೆಚ್ಚುತ್ತಿರುವ ತೀವ್ರ ದಾಳಿಗಳ ಸವಾಲನ್ನು ಮೆಟ್ಟಿ ನಿಲ್ಲಲು ಅಗತ್ಯ ವಿರುವಷ್ಟು ಮುನ್ನಡೆ ಯನ್ನು ಸಾಧಿಸಲು ಹಾಲಿ ಇರುವ ದುಡಿಯುವ ವರ್ಗದ ಹೋರಾಟಕ್ಕೆ ಸಾಧ್ಯ ವಾಗದು.ಸಾಮೂಹಿಕ ಸಂಘಟನೆಗಳ ಐಕ್ಯ ವೇದಿಕೆಗಳ ಕ್ರಿಯಾಶೀಲ ಕಾರ್ಯ ನಿರ್ವಹಣೆಗೆ ಬಲಿಷ್ಠ ಸಿಐಟಿಯು ಪೂರ್ವಾಗತ್ಯ ವಾಗಿದೆ.

ಸಾಮ್ರಾಜ್ಯಶಾಹಿ ಪ್ರೇರಿತ ನವ ಉದಾರೀಕರಣ ನೀತಿಗಳು ತಮ್ಮ ಪ್ರಸ್ತುತತೆಯನ್ನು ಕಳೆದುಕೊಂಡು ಆರ್ಥಿಕ ಕುಸಿತ ವುಂಟಾಗಿದ್ದು ಈ ಬಿಕ್ಕಟ್ಟು ಇನ್ನಷ್ಟು ಮುಂದುವರಿದಿದೆ. ಈ ಬಿಕ್ಕಟ್ಟಿನ ಪರಿಣಾಮವಾಗಿ ಬಂಡವಾಳಶಾಹಿ ದುಡಿಯುವ ವರ್ಗದ ಮೇಲೆ ಅಸಹನೀಯ ವಾದ ಆರ್ಥಿಕ ಸಂಕಷ್ಟದ ಹೊರೆ ಹೇರುತ್ತಿದೆ.ಬಿಕ್ಕಟ್ಟು ಇನ್ನಷ್ಟು ತೀವ್ರ ಗೊಳ್ಳುತ್ತಿರುವಾಗ ಈ ದಾಳಿಗಳು ಇನ್ನಷ್ಟು ತೀವ್ರಗೊಳ್ಳುವ ಲಕ್ಷಣಗಳಿವೆ. ದೇಶದಲ್ಲಿ ದುಡಿಯುವ ವರ್ಗದ ಅಭೂತಪೂರ್ವ ಐಕ್ಯತೆ ಸಾಧಿಸಿ ಮುಷ್ಕರಗಳು ಸೇರಿದಂತೆ ನಡೆಯುತ್ತಿರುವ ಐಕ್ಯ ಹೋರಾಟ ಗಳನ್ನು, ವರ್ಗ ಸಂಘರ್ಷಗಳನ್ನು ತೀವ್ರ ಗೊಳಿಸಿ ದುಡಿಯುವ ವರ್ಗದ ಹಿತಾಸಕ್ತಿಗಾಗಿ ವರ್ಗ ಸಂಬಂಧಗಳನ್ನು ಪುನರ್ ರಚಿಸುವ ಒಂದು ಅಪೂರ್ವ ಅವಕಾಶವನ್ನು ನಮ್ಮ ಮುಂದೆ ತೆರೆದಿಟ್ಟಿದೆ.

ಎಲ್ಲ ಕಾಲದಲ್ಲೂ ಕಾರ್ಮಿಕ ಸಂಘಟನೆಯ ಪ್ರಜಾಸತ್ತಾತ್ಮಕ ಕಾರ್ಯಾಚರಣೆ ಬಹುಮುಖ್ಯ ವಾಗಿದ್ದು ದುಡಿಯುವ ವರ್ಗವು ಬಂಡವಾಳಶಾಹಿಯ ತೀವ್ರ ದಾಳಿಗೆ ತುತ್ತಾಗುತ್ತರುವ ಇಂದಿನ ಸಂದರ್ಭದಲ್ಲಿ ಅದು ಅತ್ಯಂತ ತುರ್ತು ಅಗತ್ಯ ವಾಗಿದೆ.

ಪ್ರಜಾಸತ್ತಾತ್ಮಕ ವಾಗಿ ಕಾರ್ಯನಿರ್ವಹಿಸುವುದೆಂದರೆ ಯಾವುದೇ ನಿರ್ಣಯಗಳನ್ನು ತೆಗೆದುಕೊಳ್ಳುವಾಗ ಮತ್ತು ಅವುಗಳನ್ನು ಜಾರಿ ಮಾಡುವ ಪ್ರಕ್ರಿಯೆಯಲ್ಲಿ ಎಲ್ಲ ಸದಸ್ಯ ರನ್ನು ತೊಡಗಿಸುವುದು.ಒಂದೆಡೆ ಇದು ತಳ ಮಟ್ಟದ ಸದಸ್ಯರೊಂದಿಗೆ ದಿನ ನಿತ್ಯ ಸಂಪರ್ಕ ಹೊಂದಿದ್ದು ನಿರಂತರ ಸಂವಹನ ಸಾದ್ಯ ವಾಗುವ ರಚನೆಯುಳ್ಳ ಕಾರ್ಯವೈಖರಿ ಯಾದರೆ,ಇನ್ನೊಂದೆಡೆ ನಾಯಕತ್ವದ ತಂಡವು ವಿವಿಧ ಹಂತಗಳಲ್ಲಿ ಸಾಮೂಹಿಕ ವಾಗಿ ಕಾರ್ಯ ನಿರ್ವಹಿಸುವುದಾಗಿದೆ.ಪ್ರಜಾಸತ್ತಾತ್ಮಕ ವಾಗಿ ಕಾರ್ಯನಿರ್ವಹಿಸುವುದರಲ್ಲಿ ಕೆಲವು ಪ್ರಮುಖ ಅಂಶಗಳೆಂದರೆ ನಾಯಕತ್ವದಲ್ಲಿರುವವರು ತಮ್ಮ ಜವಾಬ್ದಾರಿ ನಿರ್ವಹಿಸುವ ರೀತಿ, ಸದಸ್ಯರೊಂದಿಗೆ ಒಡನಾಟ, ನಾಯಕತ್ವ ಮತ್ತು ತಳಮಟ್ಟದ ಕೆಲಸಗಾರರೊಂದಿಗೆ ಸಂಪರ್ಕ, ನಿರ್ದಾರಗಳನ್ನು ತೆಗೆದುಕೊಳ್ಳುವುದು ಮತ್ತು ಅವುಗಳ ಜಾರಿಯಲ್ಲಿ ಸಾಮೂಹಿಕ ಕಾರ್ಯಾಚರಣೆ, ವಿವಿದ ಸಮಿತಿಗಳ ಸಭೆ ಮತ್ತು ಸಮ್ಮೇಳನ ಗಳನ್ನು ನಡೆಸುವುದು,ಹಣಕಾಸಿನ ನಿರ್ವಹಣೆ ಮತ್ತು ಲೆಕ್ಕಪತ್ರ ನಿರ್ವಹಣೆ ಇತ್ಯಾದಿ. ಇದಲ್ಲದೇ ತಳಮಟ್ಟದ ಸದಸ್ಯರೊಂದಿಗೆ ಸಂಪರ್ಕ ಮತ್ತು ಅವರ ಅಭಿಪ್ರಾಯಗಳನ್ನು ಆಲಿಸುವುದು ಬಹು ಮುಖ್ಯ.

ಬಿ.ಟಿ.ರಣದಿವೆ ಹೇಳಿರುವಂತೆ ನಮ್ಮ ಹೋರಾಟ ಇಡೀ ದುಡಿಯುವ ವರ್ಗದ, ಕಾರ್ಮಿಕ ಚಳುವಳಿಯ ಒಗ್ಗಟ್ಟಿಗಾಗಿ ಇರಬೇಕು.ಈ ಐಕ್ಯತೆ ಯನ್ನು ಎಲ್ಲಾ ದುಡಿಮೆಗಾರರಿಗೆ ವಿಸ್ತರಿಸಬೇಕು. ಕಾರ್ಮಿಕ ಸಂಘಟನೆಯ ಐಕ್ಯತೆ, ಪ್ರತಿರೋಧದ ಐಕ್ಯತೆಯೆಂದರೆ ಒಬ್ಬ ಕಾರ್ಮಿಕ ಸಂಘಟನೆಯ ಸದಸ್ಯನಿರಲಿ ಇಲ್ಲದಿರಲಿ ಒಂದು ಸಮಾನ ಉದ್ದೇಶ ಕ್ಕಾಗಿ ನಡೆಯುವ ಹೋರಾಟದಲ್ಲಿ ಅವರನ್ನು ಸೆಳೆಯುವಂತಿರಬೇಕು. ಹಾಗಾಗುವಂತಾಗಲು ಕಾರ್ಮಿಕ ಸಂಘಟನೆಯು ಸದಸ್ಯನೊಬ್ಬನಿಗೆ ಇದು ತನ್ನ ಮನೆ, ನನ್ನ ಸುಭದ್ರವಾದ ಕೋಟೆ ಎನಿಸುವಂತಿರಬೇಕು. ನಾಯಕರ ಜಾಗೀರು ಎನ್ನುವಂತಲ್ಲ.

ಸರಿಯಾದ ಸೈದ್ಧಾಂತಿಕ ತಿಳುವಳಿಕೆಯೆ ಸಂಘಟನೆಯ ಅಡಿಗಲ್ಲು. ಸಂಘಟನೆಯ ಶಕ್ತಿ ದೌರ್ಬಲ್ಯಗಳನ್ನು ಗುರುತಿಸಿ, ಸಿಐಟಿಯುನ ನಿಜವಾದ ಗುರಿ ಮತ್ತು ಉದ್ದೇಶಕ್ಕೆ ಅನುಗುಣವಾಗಿ, ವರ್ಗ ಸಂಘರ್ಷವನ್ನು ಬಲಿಷ್ಠ ಗೊಳಿಸುವತ್ತ ಸರಿಯಾದ ಸೈದ್ಧಾಂತಿಕ ನಿಲುವಿನೊಂದಿಗೆ ನಮ್ಮ ದೌರ್ಬಲ್ಯಗಳನ್ನು ಮೀರಲು ಕ್ರಮ ಕೈಗೊಂಡು ಮುನ್ನಡೆಯಲು ಈ ಸಮ್ಮೇಳನ ನಮಗೆ ಸ್ಫೂರ್ತಿ ನೀಡಲಿ. ●

ಭಾರತ್ ಪೆಟ್ರೋಲಿಯಂ ಖಾಸಗೀಕರಣದ ವಿರುದ್ಧ ಪೆಟ್ರೋಲಿಯಂ ಕಾರ್ಮಿಕರ ದೇಶವ್ಯಾಪಿ ಚಾರಿತ್ರಿಕ ಮುಷ್ಕರ



ನವಂಬರ್ 28ರಂದು, ತೈಲ ಮತ್ತು ಪೆಟ್ರೋಲಿಯಂ ಕಾರ್ಮಿಕರ ರಾಷ್ಟ್ರೀಯ ಒಕ್ಕೂಟಗಳ ಕರೆಗೆ ಓಗೊಟ್ಟು ದೇಶಾದ್ಯಂತ್ಲ ಬಿಪಿಸಿಎಲ್(ಭಾರತ್ ಪೆಟ್ರೋಲಿಯಂ), ಹೆಚ್‌ಪಿಸಿಎಲ್(ಹಿಂದುಸ್ತಾನ್ ಪೆಟ್ರೋಲಿಯಂ) ಖಾಸಗೀಕರಣದ ಮೋದಿ ಸರಕಾರದ ಯೋಜನೆಗಳನ್ನು ಪ್ರತಿಭಟಿಸಿ 50 ಬಿಪಿಸಿಎಲ್, ಹೆಚ್‌ಪಿಸಿಎಲ್ ಮತ್ತು ಒಎನ್‌ಜಿಸಿ ತೈಲ ಶುದ್ಧೀಕರಣ ಘಟಕಗಳ 30,000 ನಿಯಮಿತ ಮತ್ತು ಕಾಂಟ್ರಾಕ್ಟ್ ಕಾರ್ಮಿಕರು ಒಂದು ಬೃಹತ್ ಮುಷ್ಕರವನ್ನು ಯಶಸ್ವಿಯಾಗಿ ನಡೆಸಿದ್ದಾರೆ ಎಂದು ವರದಿಯಾಗಿದೆ. ಈ ಬೃಹತ್ ಸಂಖ್ಯೆಯೇ ಮೋದಿ ಸರಕಾರದ ಖಾಸಗೀಕರಣದ ನಡೆಯನ್ನು ನಿಲ್ಲಿಸಲೇ ಬೇಕೆನ್ನುವ ಕಾರ್ಮಿಕರ ದೃಢನಿರ್ಧಾರವನ್ನು ಪ್ರದರ್ಶಿಸಿದೆ ಎನ್ನಲಾಗಿದೆ. ವಿವಿಧ ಹೈಕೋರ್ಟ್‌ಗಳಿಂದ ಮ್ಯಾನೇಜ್‌ಮೆಂಟುಗಳು ಮುಷ್ಕರ ನಿಷೇಧಿಸುವ ಆದೇಶಗಳನ್ನು ಪಡೆಯುವ ಮೂಲಕ ಮೋದಿ ಸರಕಾರದ ಹೆದರಿಸುವ, ಬೆದರಿಸುವ ಕ್ರಮಗಳನ್ನು ಎದುರಿಸಿಯೂ ಕಾರ್ಮಿಕರು ತಮ್ಮ ಈ ದೃಢನಿರ್ಧಾರವನ್ನು ಸ್ಪಷ್ಟವಾಗಿ ಪ್ರದರ್ಶಿಸಿದ್ದಾರೆ.

ಕೇರಳದಲ್ಲಿ ಕೊಚ್ಚಿ ರಿಫೈನರಿ(ತೈಲಶುದ್ಧೀಕರಣ ಸ್ಥಾವರ)ಯಲ್ಲಿ ಸಂಪೂರ್ಣ ಮುಷ್ಕರ ನಡೆದಿದೆ. ದಕ್ಷಿಣದ ಎಲ್ಲ ಐದು ರಾಜ್ಯಗಳಲ್ಲಿ ಹೆಚ್‌ಪಿಸಿಎಲ್, ಬಿಪಿಸಿಎಲ್ ಮತ್ತು ಐಒಸಿಎಲ್‌ನ ಮಾರುಕಟ್ಟೆ ವಿಭಾಗದ ಎಲ್ಲ ನೌಕರರು ಮುಷ್ಕರದಲ್ಲಿ ಭಾಗವಹಿಸಿದರು. ಟ್ಯಾಂಕರ್ ಲಾರಿ ಕಾರ್ಮಿಕರು ಕೂಡ ಮುಷ್ಕರದಲ್ಲಿ ಸೇರಿಕೊಂಡರು. ಮಂಗಳೂರು ರಿಫೈನರಿ (ಎಂಆರ್‌ಪಿಎಲ್)ನಲ್ಲಿ ಕಾಂಟ್ರಾಕ್ಟ್ ಕಾರ್ಮಿಕರೂ ಸೇರಿದಂತೆ ಸುಮಾರು 5000 ಕಾರ್ಮಿಕರು ಮುಷ್ಕರ ನಡೆಸಿದರು. ವಿಶಾಖಪಟ್ಟಣದ ಹೆಪಿಸಿಎಲ್ ರಿಫೈನರಿಯಲ್ಲಿ ಕಾರ್ಮಿಕರು ಮತಪ್ರದರ್ಶನ ಮತ್ತು ಮೆರವಣಿಗೆ ನಡೆಸಿದರು.

ಅಸ್ಸಾಂನ ನುಮಲಿಗರ್ ರಿಫೈನರಿಯ ಮುಖ್ಯ ದ್ವಾರದಲ್ಲಿ ಕಾರ್ಮಿಕರು ಬೃಹತ್ ಮತಪ್ರದರ್ಶನ ನಡೆಸಿದರು.

ಕೇರಳದಲ್ಲಿ ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಕರೆಯ ಮೇರೆಗೆ ದೊಡ್ಡ ಸಂಖ್ಯೆಯಲ್ಲಿ ಇತರ ಉದ್ದಿಮೆಗಳ ಕಾರ್ಮಿಕರೂ ಕಪ್ಪು ಬ್ಯಾಜ್ ಧರಿಸಿ ಮುಷ್ಕರಕ್ಕಿಳಿದ ಕಾರ್ಮಿಕರ ರಾಷ್ಟ್ರೀಯ ಒಕ್ಕೂಟಗಳ ಕಾರ್ಮಿಕರಿಗೆ ಸೌಹಾರ್ದ ವ್ಯಕ್ತಪಡಿಸಿದರು.

ಪಶ್ಚಿಮ ವಲಯದಲ್ಲಿ ಮುಂಬೈ ರಿಫೈನರಿ ಮತ್ತು ಮಾರುಕಟ್ಟೆ ವಿಭಾಗಗಳು ಸೇರಿದಂತೆ ಎಲ್ಲೆಡೆಗಳಲ್ಲಿ ಮುಷ್ಕರ ಬಿರುಸಾಗಿ ನಡೆದಿದೆ. ಚೆಂಬೂರಿನ ಬಿಪಿಸಿಎಲ್ ರಿಫೈನರಿ ಗೇಟಿನ ಎದುರು ನೆರೆದ ಕೇಂದ್ರ ಕಚೇರಿಯ ನೌಕರರೂ ಸೇರಿದಂತೆ ಸಾವಿರಾರು ಕಾರ್ಮಿಕರು, ನೌಕರರು ಒಂದು ಲಾಂಗ್ ಮಾರ್ಚ್ ಆರಂಭಿಸಿ ಚೆಂಬೂರ್ ರೈಲ್ವೆ ನಿಲ್ದಾಣದ ಬಳಿ ಒಂದು ಬೃಹತ್ ಸಾರ್ವಜನಿಕ ಪ್ರತಿಭಟನಾ ಸಭೆಯನ್ನು ನಡೆಸಿದರು. ಮುಂಬೈಯ ಬಳಿ ಉರಣ್‌ನಲ್ಲಿ ಏಶ್ಯಾದಲ್ಲೇ ಅತಿ ದೊಡ್ಡದಾದ ಬಾಟ್ಲಿಂಗ್ ಸ್ಥಾವರ ಮುಷ್ಕರದ ಪ್ರಭಾವದಿಂದ ಮುಚ್ಚಿ ಹೋಗಿತ್ತು.

ಉತ್ತರ ಮತ್ತು ಪೂರ್ವ ಭಾರತದಲ್ಲಿ ದಿಲ್ಲಿ ರಾಜಧಾನಿ ಪ್ರದೇಶ, ಹರ್‍ಯಾಣ, ಪಂಜಾಬ್, ರಾಜಸ್ಥಾನ, ಹಿಮಾಚಲ ಪ್ರದೇಶ, ಉತ್ತರಾಖಂಡ, ಉತ್ತರ ಪ್ರದೇಶ, ಝಾರ್ಖಂಡ್, ಪಶ್ಚಿಮ ಬಂಗಾಲ, ಒಡಿಶ, ಬಿಹಾರ್ ಮುಂತಾದ ರಾಜ್ಯಗಳಲ್ಲಿನ ಸುಮಾರು 45 ಘಟಕಗಳಲ್ಲಿ, ಪ್ರಾದೇಶಿಕ ಮುಖ್ಯಾಲಯಗಳಲ್ಲಿ, ಬಾಟ್ಲಿಂಗ್ ಸ್ಥಾವರಗಳಲ್ಲಿ ಮತ್ತು ದಾಸ್ತಾನು ಸ್ಥಾವರಗಳಲ್ಲಿ ಬಹುಪಾಲು ಕಾರ್ಮಿಕರು ಮುಷ್ಕರದಲ್ಲಿ ಭಾಗವಹಿಸಿದರು ಎಂದು ವರದಿಯಾಗಿದೆ.

ದಿಲ್ಲಿ ಮತ್ತು ಸಮೀಪದ ರಾಜ್ಯಗಳಿಂದ ಬಂದ ಮುಷ್ಕರನಿರತ ಕಾರ್ಮಿರಕು ಜಂತರ್‌ಮಂತರ್‌ನಲ್ಲಿ ಧರಣಿ ನಡೆಸಿದರು. ಸಂಸತ್ ಸದಸ್ಯರುಗಳು ಮತ್ತು ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಮುಖಂಡರು ಅವರನ್ನುದ್ದೇಶಿಸಿ ಮಾತನಾಡಿದರು.

ಇದೊಂದು ಚಾರಿತ್ರಿಕ ಮುಷ್ಕರ ಕಾರ್ಯಾಚರಣೆಯಾಗಿದೆ, ಖಾಸಗೀಕರಣವನ್ನು ನಿಲ್ಲಿಸುವ ಒಂದು ನಿರ್ಣಾಯಕ ಕಾರ್ಯಾಚರಣೆಯ ಕಾರ್ಯಕ್ರಮವನ್ನು ಅಂಗೀಕರಿಸಲು ನಾಂದಿ ಹಾಕಿದೆ ಎಂದು ಕಾರ್ಮಿಕ ಮುಖಂಡರು ಹೇಳುತ್ತಿದ್ದಾರೆ. ಡಿಸೆಂಬರ್ 22 ರಂದು ತೈಲ ಮತ್ತು ಪೆಟ್ರೋಲಿಯಂ ಕಾರ್ರ್ಮಿಕರ ಮತ್ತೊಂದು ರಾಷ್ಟ್ರೀಯ ಸಮಾವೇಶ ಕೊಲ್ಕತಾದಲ್ಲಿ ನಡೆಯಲಿದೆ. ಜನವರಿ 8ರಂದು ನಡೆಯಲಿರುವ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರದಲ್ಲೂ ಪೆಟ್ರೋಲಿಯಂ ವಲಯದ ಕಾರ್ಮಿಕರ, ನೌಕರರ ಸಂಪೂರ್ಣ ಭಾಗವಹಿಸುವಿಕೆಯನ್ನು ಕೂಡ ಈ ಮುಷ್ಕರ ಖಾತ್ರಿಗೊಳಿಸಿದೆ.





ನವಂಬರ್ 28ರಂದು ದೇಶಾದ್ಯಂತ ಪೆಟ್ರೋಲಿಯಂ ಕಾರ್ಮಿಕರು ಮುಷ್ಕರ ನಡೆಸುತ್ತಿದ್ದಾಗ, ಅವರಿಗೆ ಬೆಂಬಲವಾಗಿ ಸಿಪಿಐ(ಎಂ)ನ ಸಂಸದ್ ಸದಸ್ಯರು ಸಾರ್ವಜನಿಕ ವಲಯ ಉದ್ದಿಮೆಗಳ ಖಾಸಗೀಕರಣದ ಮೋದಿ ಸರಕಾರದ ನಿರ್ಧಾರವನ್ನು ಪ್ರತಿಭಟಿಸಿ ಸಂಸದ್ ಭವನದ ಆವರಣದಲ್ಲಿರುವ ಮಹಾತ್ಮ ಗಾಂಧಿ ಪ್ರತಿಮೆಯ ಬಳಿ ಪ್ರತಿಭಟನೆ ನಡೆಸಿದರು. ಬಿಪಿಸಿಎಲ್ ಉಳಿಸಿ, ಬಿಪಿಸಿಎಲ್‌ನ್ನು ಮಾರಬೇಡಿ, ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಉಳಿಸಿ ಎಂಬ ಫಲಕಗಳನ್ನು ಅವರು ಹಿಡಿದಿದ್ದರು.

ಎಲ್ಲರ ಕೈಗೆಟಕುವ ಉನ್ನತ ಶಿಕ್ಷಣಕ್ಕಾಗಿ ರಾಷ್ಟ್ರೀಯ ಹೋರಾಟವಾಗುತ್ತಿರುವ ಜೆಎನ್‌ಯು ವಿದ್ಯಾರ್ಥಿಗಳ ಶುಲ್ಕ ಏರಿಕೆ ವಿರೋಧಿ ಹೋರಾಟ

ಪುಟ 2 ರಿಂದ

ಮತ್ತು ಈಗ ಅಭಿವೃದ್ಧಿ ಅಧ್ಯಯನ ಸಂಸ್ಥೆಯಲ್ಲಿ ಬೋಧಕರಾಗಿರುವ ಶುಭನೀಲ್ ಚೌಧುರಿ ನಮ್ಮಂತಹ ಅಸಮಾನತೆಯ ಸಮಾಜದಲ್ಲಿ ಮೇಲಕ್ಕೇರಲು ಇರುವ ಉನ್ನತ ಶಿಕ್ಷಣವೆಂಬ ಈ ಏಕೈಕ ಏಣಿಯನ್ನು ಕೆಡವಲು ಬಿಡಬಾರದು ಎಂದರು. ಆಂಧ್ರಪ್ರದೇಶದ ಅನಂತರಪುರದಲ್ಲಿರುವ ಜವಹರಲಾಲ್ ನೆಹರು ತಾಂತ್ರಿಕಶಿಕ್ಷಣ ವಿಶ್ವವಿದ್ಯಾಲಯ ಮತ್ತು ಇತರ ಉನ್ನತ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳು ಪ್ರತಿಭಟನಾ ಮೆರವಣಿಗೆ ನಡೆಸಿದರು.

ಮಿರ್ಝೊರಾಂ ವಿಶ್ವವಿದ್ಯಾಲಯ ವಿದ್ಯಾರ್ಥಿ ಮಂಡಳಿ ಜೆಎನ್‌ಯು ವಿದ್ಯಾರ್ಥಿ ಸಂಘದ ನೇತೃತ್ವದ ಹೋರಾಟಕ್ಕೆ ಸೌಹಾರ್ದವನ್ನು ವ್ಯಕ್ತಪಡಿಸುತ್ತ "ದೇಶವನ್ನು ಕಟ್ಟುವಲ್ಲಿ ಎಲ್ಲರನ್ನೂ ಒಳಗೊಳ್ಳುವ ಕ್ರಿಯೆ ಎಲ್ಲರ ಕೈಗೆಟಕುವ ಶಿಕ್ಷಣದಿಂದಲೇ ಆರಂಭವಾಗುತ್ತದೆ, ಸರಕಾರ ಈ ಕಡೆಗೆ ತನ್ನ ಗಮನವನ್ನು ತಿರುಗಿಸಬೇಕು" ಎಂದಿದೆ.

ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯ, ಶಿಮ್ಲಾದ ಹಿಮಾಚಲ ವಿಶ್ವವಿದ್ಯಾಲಯ, ಕೇರಳದ ತಿರುವನಂತಪುರದ ಮಹಾರಾಜ ಕಾಲೇಜು ಮತ್ತಿತ್ತರ ಉನ್ನತ ಶಿಕ್ಷಣ ಸಂಸ್ಥೆಗಳು, ಪಾಂಡಿಚೇರಿ ವಿಶ್ವವಿದ್ಯಾಲಯ ಮುಂತಾದೆಡೆಗಳಲ್ಲಿ ರಾಷ್ಟ್ರೀಯ ಪ್ರತಿಭಟನಾ ದಿನಾಚರಣೆ ನಡೆದಿದೆ.







ದಯನೀಯ ಪರಿಸ್ಥಿತಿಗೆ ಇಳಿಯುತ್ತಿರುವ ಅರ್ಥವ್ಯವಸ್ಥೆಯೂ ಅಂಕಿ-ಅಂಶಗಳನ್ನು ಬಚ್ಚಿಡುತ್ತಿರುವ ಮೋದಿ ಸರಕಾರವೂ



ದಿನ ನಿತ್ಯವೂ ಒಂದೊಂದು ಹೊಸ ಹೊಸ ಸುದ್ದಿಯೊಂದಿಗೆ ಅರ್ಥವ್ಯವಸ್ಥೆಯ ದಯನೀಯ ಪರಿಸ್ಥಿತಿ ಪ್ರದರ್ಶನಗೊಳ್ಳುತ್ತಿರುವಾಗ ವಾಸ್ತವಾಂಶಗಳನ್ನು ನಿರಾಕರಿಸುವುದರಿಂದ ವಾಸ್ತವಿಕ ಸಮಸ್ಯೆಯಾದ ಬೇಡಿಕೆಯ ಕೊರತೆ ಎಂಬುದು ಬಗೆಹರಿಯದೆ ಉಳಿಯುತ್ತದೆ. ಪರಿಣಾಮವಾಗಿ, ಅರ್ಥವ್ಯವಸ್ಥೆಯ ದುಃಸ್ಥಿತಿಯೂ ಮುಂದುವರೆಯುತ್ತದೆ. ದೇಶವು ಒಂದು ಗಂಭೀರ ಆರ್ಥಿಕ ಬಿಕ್ಕಟ್ಟಿನ ಹಿಡಿತದಲ್ಲಿ ಸಿಲುಕಿರುವಾಗ, ಲಭ್ಯ ಮಾಹಿತಿಗಳ ಪ್ರತಿಯೊಂದು ತುಣುಕನ್ನೂ ಬಳಸಿ ಆ ಬಿಕ್ಕಟ್ಟನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುವುದನ್ನು ಬಿಟ್ಟು, ದತ್ತಾಂಶಗಳನ್ನೇ ಮಂಗಮಾಯ ಮಾಡುತ್ತಿರುವುದು ಈ ಸರಕಾರ ಸಮಸ್ಯೆಯನ್ನು ಪರಿಹರಿಸುವಲ್ಲಿ ಏನೇನೂ ಗಂಭೀರತೆಯಿಂದ ವರ್ತಿಸುತ್ತಿಲ್ಲ ಎಂಬುದನ್ನೇ ತೋರಿಸುತ್ತದೆ.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ರಾಷ್ಟ್ರೀಯ ಸಾಂಖ್ಯಿಕ ಕಚೇರಿ(ಎನ್‌ಎಸ್‌ಒ) ಐದು ವರ್ಷಗಳಿಗೊಮ್ಮೆ ನಡೆಸುವ ಕುಟುಂಬಗಳ ಬಳಕೆಯ ವೆಚ್ಚಗಳ 2017-18ರ ಸಮೀಕ್ಷಾ ವರದಿಯನ್ನು ಬಿಡುಗಡೆ ಮಾಡದಿರಲು ನಿರ್ಧರಿದೆ. ಏಕೆಂದರೆ, ನವೆಂಬರ್ 15ರಂದು ಬಿಸಿನೆಸ್ ಸ್ಟ್ಯಾಂಡರ್ಡ ಪತ್ರಿಕೆಯಲ್ಲಿ ಸೋರಿಕೆಯಾಗಿರುವ ಈ ಸಮೀಕ್ಷೆಯ ಅಂಕಿ-ಅಂಶಗಳ ಪ್ರಕಾರ, 2011-2012 ಮತ್ತು 2017-18ರ ಅವಧಿಯಲ್ಲಿ ಬಳಕೆಯ ತಲಾ ವೆಚ್ಚವು ಮಾಸಿಕ 1501 ರೂ ಗಳಿಂದ 1446 ರೂ ಗಳಿಗೆ ಇಳಿದಿದೆ (2009-10ರ ಬೆಲೆಗಳಲ್ಲಿ).

ಬಳಕೆಯ ತಲಾ ವೆಚ್ಚದ ವಾಸ್ತವಿಕ ಇಳಿಕೆಯು ಒಂದು ಬಲು ಗಂಭೀರ ವಿಷಯ. ನಾಲ್ಕು ದಶಕಗಳಿಗಿಂತಲೂ ಹೆಚ್ಚಿನ ಅವಧಿಯಲ್ಲಿ ಇದೇ ಮೊದಲನೆಯ ಸಲ ಇಂತಹ ಇಳಿಕೆಯಾಗಿದೆ. 1972-73ರಲ್ಲಿಯೂ ಸಹ ಬಳಕೆಯ ತಲಾ ವೆಚ್ಚದ ಇಳಿಕೆಯಾಗಿತ್ತು. ಆ ವರ್ಷದಲ್ಲಿ ಫಸಲಿನ ಇಳಿಕೆಯಾಗಿತ್ತು ಮತ್ತು ತೈಲ ಆಘಾತವಾಗಿತ್ತು (ಅಂದರೆ, ಮಧ್ಯ ಪ್ರಾಚ್ಯ ಯುದ್ಧದ ಕಾರಣದಿಂದಾಗಿ ತೈಲ ಉತ್ಪಾದಕ ದೇಶಗಳ ಒಕ್ಕೂಟವು ತೀವ್ರವಾಗಿ ತೈಲ ಬೆಲೆ ಏರಿಸಿತ್ತು). ಈ ಎರಡೂ ಕಾರಣಗಳಿಂದಾಗಿ ಉಂಟಾಗಿದ್ದ ಹಣದುಬ್ಬರವು ಜನರ ಕೊಳ್ಳುವ ಶಕ್ತಿಯನ್ನು ಹಿಂಡಿತ್ತು. ಹಾಗಾಗಿ, 1972-73ರಲ್ಲಿ ಬಳಕೆಯ ತಲಾ ವೆಚ್ಚ ಇಳಿದಿತ್ತು. ತೈಲ ಆಘಾತದಂತಹ ಬಾಹ್ಯ ಕಾರಣ ಅಥವಾ ಫಸಲಿನ ಇಳಿಕೆಯಂತಹ ಪ್ರಾಸಂಗಿಕ ಆಘಾತಗಳ ಬಗ್ಗೆ ಸರ್ಕಾರವನ್ನು ದೂಷಿಸಲಾಗದು; ಅಂತಹ ಪರಿಸ್ಥಿತಿಗಳನ್ನು ಅದು ನಿಭಾಯಿಸಿದ ರೀತಿಯ ಬಗ್ಗೆ ಆಕ್ಷೇಪಿಸಬಹದಾದರೂ.

2017-18ರಲ್ಲಿ ಸರ್ಕಾರ ನಿಯಂತ್ರಿಸಲಾರದ ಇಂತಹ ಯಾವುದೇ ಆಕಸ್ಮಿಕ ಪ್ರಸಂಗಗಳೂ ಇರಲಿಲ್ಲ. 2017-18ರ ಸಮೀಕ್ಷೆಯ ಅವಧಿಯಲ್ಲಿ ಅರ್ಥವ್ಯವಸ್ಥೆಯನ್ನು ಪ್ರಕ್ಷುಬ್ಧಗೊಳಿಸಿದ ಪ್ರಕರಣಗಳೆಂದರೆ, ನೋಟು ರದ್ದತಿ ಮತ್ತು ಜಿಎಸ್‌ಟಿಯ ಜಾರಿ. ಈ ಎರಡೂ ಅಧ್ವಾನದ ಕ್ರಮಗಳಿಗೆ ಮೋದಿ ಸರ್ಕಾರವೇ ನೇರ ಹೊಣೆ.

ಖಚಿತವಾಗಿ ಹೇಳುವುದಾದರೆ, ತಲಾ ಬಳಕೆಯ ವೆಚ್ಚದ ಇಳಿಕೆಗೆ ನೋಟು ರದ್ದತಿ ಮತ್ತು ಜಿಎಸ್‌ಟಿ ಜಾರಿಯು ಅಧ್ವಾನದ ಕ್ರಮಗಳಷ್ಟೇ ಸಮರ್ಪಕ ವಿವರಣೆಯಾಗುವುದಿಲ್ಲ. 2011-2012 ಮತ್ತು 2017-18 ನಡುವೆ ಗ್ರಾಮೀಣ ಭಾರತದಲ್ಲಿ ತಲಾ ಬಳಕೆಯ ವೆಚ್ಚದ ಪ್ರಮಾಣವು 8.8% ಇಳಿದಿತ್ತು ಮತ್ತು ನಗರ ಭಾರತದಲ್ಲಿ ಕೇವಲ 2% ಏರಿತ್ತು. ನೋಟು ರದ್ದತಿ ಮತ್ತು ಜಿಎಸ್‌ಟಿ ಜಾರಿಯ ಮುನ್ನವೇ ಗ್ರಾಮೀಣ ಭಾರತದಲ್ಲಿ ದಾರುಣ ಪರಿಸ್ಥಿತಿಯ ಸೂಚನೆಗಳಿದ್ದವು. ನೋಟು ರದ್ದತಿ ಮತ್ತು ಜಿಎಸ್‌ಟಿ ಜಾರಿಯ ಕ್ರಮಗಳು ಗಾಯದ ಮೇಲೆ ಬರೆ ಎಳೆದವು. ಅವು ಘಟಿಸದಿದ್ದರೆ ಅವರ ಬದುಕು ಸಹನೀಯವಾಗಿರುತ್ತಿತ್ತು ಎಂದೇನೂ ಅಲ್ಲ.

ಉತ್ಪಾದನೆಯ ಅಂಕಿ-ಅಂಶಗಳಿಗೂ ಮತ್ತು ಬಳಕೆದಾರರ ವೆಚ್ಚದ ಅಂಕಿ ಅಂಶಗಳಿಗೂ ತಾಳ ಮೇಳವಿಲ್ಲ ಎಂದು ಸರ್ಕಾರ ಹೇಳುತ್ತದೆ. ಇದು ತಪ್ಪು ಎಂಬುದಕ್ಕೆ ಉತ್ಪಾದನೆಯ ಅಂಕಿ-ಅಂಶಗಳೇ ಸಾಕ್ಷಿ ಒದಗಿಸುತ್ತವೆ. ಕೃಷಿ ಮತ್ತು ಅದಕ್ಕೆ ಸಂಬಂಧಿಸಿದ ಚಟುವಟಿಕೆಗಳ ಕೊಡುಗೆಯ ಮೌಲ್ಯವನ್ನು ಬೇರ್ಪಡಿಸಿ, ಅದನ್ನು ಕೃಷಿ-ಅವಲಂಬಿತ ಜನಸಂಖ್ಯೆಯೊಂದಿಗೆ ಭಾಗಿಸಿ ನೋಡಿದಾಗ, 2013-14 ಮತ್ತು 2017-18ರ ನಡುವೆ ಕೃಷಿ-ಅವಲಂಬಿತ ಜನರ ತಲಾ ವರಮಾನವು ಸ್ವಲ್ಪ ಮಟ್ಟಿಗೆ ಇಳಿದಿರುವುದು ಕಾಣುತ್ತದೆ. ಆದರೆ, ಕೃಷಿ-ಅವಲಂಬಿತ ಜನಸಂಖ್ಯೆಯಲ್ಲಿ ಜಮೀನ್ದಾರರು ಮತ್ತು ಕೃಷಿಕ ಬಂಡವಾಳಗಾರರೂ ಇದ್ದಾರೆ ಮತ್ತು ಅವರ ಸಂಖ್ಯೆ ಸಣ್ಣದೇ ಇದ್ದರೂ ಸಹ ಉತ್ಪಾದನಾ ಕೊಡುಗೆಯ ಮೌಲ್ಯದಲ್ಲಿ ಅವರ ಪಾಲು ದೊಡ್ಡದೇ ಇರುತ್ತದೆ ಹಾಗೂ ಅವರ ವರಮಾನವು ಇಳಿಕೆಯಾಗಿರಲಿಲ್ಲ ಎಂಬುದನ್ನು ಸಲೀಸಾಗಿ ಊಹಿಸಿಕೊಳ್ಳಬಹುದು. ಹಾಗಾಗಿ, ಗ್ರಾಮೀಣ ಭಾರತದ ದುಡಿಯುವ ಜನರ ವರಮಾನದ ಇಳಿಕೆಯ ಪ್ರಮಾಣವು



ಚಿತ್ರ ಕೃಪೆ: ನ್ಯೂಸ್‌ಲಾಂಡ್ರಿ


ಸರಾಸರಿ ಅಂಕಿ ಅಂಶಗಳು ಸೂಚಿಸುವುದಕ್ಕಿಂತಲೂ ತೀವ್ರವಾಗಿರುತ್ತದೆ. ನೋಟು ರದ್ದತಿ ಮತ್ತು ಜಿಎಸ್‌ಟಿ ಜಾರಿ ಪೂರ್ವದ ಅವಧಿಗೆ ಸಂಬಂಧಪಟ್ಟಂತೆಯೂ ಇದೇ ತೀರ್ಮಾನಕ್ಕೆ ಬರಬಹುದು. ನವ ಉದಾರ ನೀತಿಗಳಿಂದಾಗಿ ಅದಾಗಲೇ ದಾರುಣ ಅವಸ್ಥೆಯಲ್ಲಿದ್ದ ಕೃಷಿಕ ಅರ್ಥವ್ಯವಸ್ಥೆಯ ತಲೆಯ ಮೇಲೆ ನೋಟು ರದ್ದತಿ ಮತ್ತು ಜಿಎಸ್‌ಟಿ ಜಾರಿಯಿಂದ ಉಂಟಾದ ಎಲ್ಲ ಸಂಕಷ್ಟಗಳ ಭಾರವನ್ನೂ ಹೊರಿಸಲಾಯಿತು. ಹಾಗಾಗಿ, ದುಡಿಯುವ ಜನತೆ ಅನುಭವಿಸುತ್ತಿರುವ ಎಲ್ಲ ಸಂಕಷ್ಟಗಳಿಗೂ ನವ ಉದಾರ ನೀತಿಗಳ ಜಾರಿಯ ಆರಂಭ ಕಾಲದಿಂದ ಅಧಿಕಾರಕ್ಕೆ ಬಂದ ಎಲ್ಲ ಸರ್ಕಾರಗಳೂ ಹೊಣೆಯಾಗುತ್ತವೆ. ಆದಾಗ್ಯೂ, ಮೋದಿ ಸರ್ಕಾರವು ಈ ನವ ಉದಾರ ನೀತಿಗಳ ಹಾದಿಯಲ್ಲಿ ಏಕ ಚಿತ್ತದಿಂದ ಮತ್ತು ನಿರ್ದಾಕ್ಷಣ್ಯವಾಗಿ ಸಾಗುತ್ತಿದೆ ಎಂಬುದು ಗಮನಾರ್ಹ.

2011-12 ಮತ್ತು 2017-18ರ ನಡುವಿನ ಅವಧಿಯಲ್ಲಿ ಗ್ರಾಮೀಣ ಜನತೆಯ ಆಹಾರದ ಮೇಲಿನ ವೆಚ್ಚವು ಶೇ.10ರಷ್ಟು ಇಳಿದಿದೆ. ಇದು ಅವರ ಬಡತನದ ಅಗಾಧತೆಯನ್ನು ಗಮನಾರ್ಹವಾಗಿ ಹೆಚ್ಚಿಸಿದೆ. ನವ ಉದಾರ ನೀತಿಗಳ ಅನುಸರಣೆಯ ಅವಧಿಯಲ್ಲಿ, ಭಾರತದಲ್ಲಿ ಬಡತನವನ್ನು ವ್ಯಾಖ್ಯಾನಿಸುವ ಕ್ಯಾಲೊರಿ ಮಾನದಂಡದ ಪ್ರಕಾರ, ಅಧಿಕೃತ ಹೇಳಿಕೆಗಳಿಗೆ ವ್ಯತಿರಿಕ್ತವಾಗಿ, ನಗರ ಮತ್ತು ಗ್ರಾಮೀಣ ಈ ಎರಡೂ ಪ್ರದೇಶಗಳಲ್ಲೂ ಬಡತನ ಹೆಚ್ಚುತ್ತಿದೆ. 1993-94ರ ಮತ್ತು 2011-12ರ ಪಂಚವಾರ್ಷಿಕ ಸಮೀಕ್ಷೆಗಳ ಅಂಕಿ-ಅಂಶಗಳನ್ನು ಹೋಲಿಸಿದಾಗ ಬಡತನ ಹೆಚ್ಚುತ್ತಿರುವುದು ಸ್ಪಷ್ಟವಾಗುತ್ತದೆ. ಹಾಗಾಗಿ, 2017-18ರ ನಂತರವಂತೂ ಬಡತನದ ಅಗಾಧತೆ ಖಂಡಿತವಾಗಿ ಹೆಚ್ಚಿರಲೇಬೇಕು.

ಮುಜುಗುರಕ್ಕೊಳಪಡಿಸುವ ಅಂಕಿ-ಅಂಶಗಳನ್ನು ಬಚ್ಚಿಡುವುದೇ ಮೋದಿ ಸರ್ಕಾರದ ಜಾಯಮಾನ. ಹಾಗಾಗಿ, ಬ್ಯುಸಿನೆಸ್ ಸ್ಟ್ಯಾಂಡರ್ಡ ಪತ್ರಿಕೆಯಲ್ಲಿ ಸೋರಿಕೆಯಾಗಿರುವ ಪ್ರಕಾರ, 2011-2012 ಮತ್ತು 2017-18ರ ಅವಧಿಯಲ್ಲಿ ಮಾಸಿಕ 1501 ರೂ ಗಳಿಂದ 1446 ರೂ ಗಳಿಗೆ ತಲಾ ಬಳಕೆ ವೆಚ್ಚದ ಇಳಿಕೆಯ ಮಾಹಿತಿಯನ್ನು ಅದುಮಿಡುವುದು ಆಶ್ಚರ್ಯವೂ ಅಲ್ಲ, ಹೊಸದೂ ಅಲ್ಲ. ಲೋಕಸಭಾ ಚುನಾವಣೆಯ ಸ್ವಲ್ಪ ಮೊದಲು, ಎನ್‌ಎಸ್‌ಒ ಸಮೀಕ್ಷಾ ವರದಿಯ ಪ್ರಕಾರ, ನಿರುದ್ಯೋಗವು ಕಳೆದ 45 ವರ್ಷಗಳಲ್ಲೇ ಅತಿ ಹೆಚ್ಚಿನದು ಎಂಬ ಅಂಶವನ್ನೂ ಅದು ಮುಚ್ಚಿಟ್ಟಿತ್ತು.

ತಲಾ ಬಳಕೆ ವೆಚ್ಚದ ಇಳಿಕೆಯ ಅಂಕಿ-ಅಂಶಗಳನ್ನು ಬಚ್ಚಿಟ್ಟಿರುವುದಕ್ಕೆ ಮೋದಿ ಸರ್ಕಾರ ಕೊಟ್ಟಿರುವ ಸಮರ್ಥನೆ ಹಾಸ್ಯಾಸ್ಪದವಾಗಿದೆ: ಸಮೀಕ್ಷೆಯ "ದತ್ತಾಂಶಗಳ ಗುಣ ಮಟ್ಟ" ಕಳಪೆಯಾಗಿದೆಯಂತೆ. ಆದರೆ, ಈ ಅಂಕಿ-ಅಂಶಗಳ ಮೌಲ್ಯಮಾಪನವನ್ನು ಸಂಶೋಧಕರು ಮತ್ತು ಸಮಾಜಕ್ಕೆ ವಹಿಸುವುದರ ಬದಲು ಅಧಿಕಾರಿಗಳು ಮತ್ತು ಸರ್ಕಾರ ಹುಡುಕಿ ಆರಿಸಿದ "ಪರಿಣಿತರು" ಮಾಡಿದ್ದಾರೆ. ಸರ್ಕಾರವು ಅಂಕಿ-ಅಂಶಗಳನ್ನು ಸುಮ್ಮನೇ ಬಿಡುಗಡೆಮಾಡಿ, ಈ ಸಮೀಕ್ಷೆಯ "ದತ್ತಾಂಶಗಳ ಗುಣ ಮಟ್ಟ" ಕಳಪೆಯಾಗಿದೆ ಎಂದು ಹೇಳಬಹುದಿತ್ತು.

ಈ ಸಂದರ್ಭದಲ್ಲಿ ಒಂದು ವಾಸ್ತವಾಂಶವನ್ನು ಹೇಳುವುದಾದರೆ, 2009-10ರ ಇದೇ ತಲಾ ಬಳಕೆ ವೆಚ್ಚದ ಸಮೀಕ್ಷೆಯ ಅಂಕಿ-ಅಂಶಗಳನ್ನು 2004-05ರ ಸಮೀಕ್ಷೆಯ ಅಂಕಿ-ಅಂಶಗಳಿಗೆ ಹೋಲಿಸಿದಾಗ, ಆ ಐದು ವರ್ಷಗಳ ಅವಧಿಯಲ್ಲಿ ಬಡತನ ಗಮನಾರ್ಹವಾಗಿ ಹೆಚ್ಚುತ್ತಿರುವುದು ಕಂಡು ಬಂತು. ಆಗಿನ ಸರ್ಕಾರ, ಇನ್ನೂ ದೊಡ್ಡ ಪ್ರಮಾಣದ ಸ್ಯಾಂಪಲ್‌ಗಳಿಂದ ಕೂಡಿದ ಒಂದು ಹೊಸ ಸಮೀಕ್ಷೆಯನ್ನು 2011-12ರಲ್ಲಿ ನಡೆಸುವಂತೆ ಆದೇಶಿಸಿತು. ಆಗ, 2009-10ರ ಸಮೀಕ್ಷೆಯನ್ನು ಗಂಭಿರವಾಗಿ ಪರಿಗಣಿಸುವಂತಿಲ್ಲ, ಏಕೆಂದರೆ, ಆ ವರ್ಷದಲ್ಲಿ ಬರಗಾಲವಿತ್ತು ಎಂಬ ವಾದವನ್ನು ಮುಂದೊಡ್ಡಲಾಗಿತ್ತು. ಆದಾಗ್ಯೂ, ಅದು ಸಮೀಕ್ಷೆಯ ಅಂಕಿ-ಅಂಶಗಳ ಬಹಿರಂಗಪಡಿಸುವಿಕೆಯನ್ನು ತಡೆ ಹಿಡಿಯಲಿಲ್ಲ. ಮತ್ತು, 2011-12ರ ಸಮೀಕ್ಷೆ ನಡೆದ ವರ್ಷವು ನಿಜಕ್ಕೂ ಒಂದು ಸುಭಿಕ್ಷದ ವರ್ಷವಾಗಿತ್ತು. ಹಾಗಾಗಿ, ಆ ವರ್ಷದ ತಲಾ ಬಳಕೆ ವೆಚ್ಚವು, 2009-10ರ ಸಮೀಕ್ಷೆಯ ಅಂಕಿ-ಅಂಶಗಳೊಂದಿಗೆ ಹೋಲಿಸಿದಾಗ, ಹೆಚ್ಚಿಗೆ ಇರುವುದು ಕಂಡು ಬಂದರೂ ಅದು ನವ ಉದಾರ ನೀತಿಗಳ ಅವಧಿಯಲ್ಲಿ ಬಡತನ (ಬಡತನವನ್ನು ವ್ಯಾಖ್ಯಾನಿಸುವ ಕ್ಯಾಲೊರಿ ಮಾನದಂಡದ ಪ್ರಕಾರ) ಹೆಚ್ಚುತ್ತಿರುವ ಅಂಶವನ್ನು ಅಲ್ಲಗಳೆಯುವುದಿಲ್ಲ.



ವ್ಯಂಗ್ಯಚಿತ್ರ ಕೃಪೆ: ಪೊನ್ನಪ್ಪ

ಒಂದು ಅಧಿಕೃತ ಸಂಖ್ಯಾಶಾಸ್ತ್ರೀಯ ಸಮೀಕ್ಷೆಯು ಲೆಕ್ಕ ಹಾಕಿದ ಅಂಕಿ-ಅಂಶಗಳನ್ನು ಬಚ್ಚಿಟ್ಟಿರುವ ಮೊದಲನೆಯ ಪ್ರಕರಣ ಇದು. ಈ ಸಮೀಕ್ಷೆ ನಡೆಸಲು ಖಜಾನೆಯಿಂದ ಖರ್ಚಾದ ಹಣ ಹೊಳೆಯಲ್ಲಿ ಹುಣಿಸೇಹಣ್ಣು ಕಲಸಿದಂತೆ ಪೋಲಾಗಿದೆ. ಸರ್ಕಾರವೇ ನಿಯೋಜಿಸಿದ ಸಮೀಕ್ಷೆಯ ವರದಿಯನ್ನು ಬಚ್ಚಿಡುವ ಮೂಲಕ, ಒಳ್ಳೆಯ ದಿನಗಳು ಬರಲಿವೆ ಎಂಬುದಾಗಿ ಒಂದು ಮೋಸದ ಪ್ರಚಾರದ ಮೂಲಕ ಕುದುರಿಸಿದ ನಂಬಿಕೆ ಹಾಳಾಗಬಾರದು ಎಂಬ ಬಯಕೆಯಿಂದ, ರಾಷ್ಟ್ರದ ಅಮೂಲ್ಯ ಸಂಪನ್ಮೂಲವನ್ನು ಪೋಲು ಮಾಡಿರುವುದು ಅದರ ಸ್ವಪ್ರತಿಷ್ಠೆಯ ಗೀಳು ಊಹಿಸಲಾರದ ಮಟ್ಟದಲ್ಲಿದೆ ಎಂಬುದನ್ನು ತೋರಿಸುತ್ತದೆ.

ಇನ್ನೂ ಹೆಚ್ಚು ಚಿಂತೆಯನ್ನುಂಟು ಮಾಡುವ ಸಂಗತಿಯೆಂದರೆ, ಈ ಸ್ವಪ್ರತಿಷ್ಠೆಯ ಗೀಳು ಜವಹರಲಾಲ್ ನೆಹರೂ ಪ್ರಧಾನ ಮಂತ್ರಿಯಾಗಿದ್ದ ಕಾಲದಲ್ಲಿ ಖ್ಯಾತ ವಿಜ್ಞಾನಿ ಮತ್ತು ಸಂಖ್ಯಾಶಾಸ್ತ್ರಜ್ಞ ಪ್ರೊಫೆಸರ್ ಪಿ.ಸಿ. ಮಹಲನೋಬಿಸ್ ಅವರು ಎಚ್ಚರಿಕೆ ವಹಿಸಿ ಕಟ್ಟಿದ ದೇಶದ ಸಂಖ್ಯಾಶಾಸ್ತ್ರೀಯ ವ್ಯವಸ್ಥೆಯನ್ನು ಹಾಳುಗೆಡವುತ್ತದೆ ಎಂಬುದು. ಮಹಲನೋಬಿಸ್ ಅವರು ಆರಂಭಿಸಿದ ರಾಷ್ಟ್ರೀಯ ಸ್ಯಾಂಪಲ್ ಸರ್ವೆಯು, ಜಗತ್ತಿನಲ್ಲೇ ದೊಡ್ಡದು; ಮಾಹಿತಿಯ ಸರಿಸಾಟಿ ಇಲ್ಲದಂತಹ ಒಂದು ಮೂಲ; ದೇಶದ ಹೆಮ್ಮೆ ಮತ್ತು ಸಂಶೋಧಕರಿಗೆ ಅಪಾರ ಮೌಲ್ಯಯುತ ಆಕರವಾಗಿತ್ತು. ಅದನ್ನು ಗಬ್ಬೆಬ್ಬಿಸುವುದು, ಅಪಾರ ಮೌಲ್ಯಯುತ ಆಕರವನ್ನು ತನ್ನ "ಸಾಧನೆ"ಗಳ ಪೊಳ್ಳು ಹೊಗಳಿಕೆಗಳು ಬಯಲಾಗಬಾರದು ಎಂಬ ಉದ್ದೇಶದಿಂದ ಹಾಳುಗೆಡಹುವುದು ಸರ್ಕಾರದ ಕ್ರಿಮಿನಲ್ ನಿರ್ದಯತೆಯ ಉದಾಹರಣೆಯಾಗುತ್ತದೆ.

ತಲಾ ಬಳಕೆ ವೆಚ್ಚದ ಇಳಿಕೆಯ ಅಂಕಿ-ಅಂಶಗಳು ಬೇರೆ ಕೆಲವು ಅಧಿಕೃತ ಸೂಚಕಗಳೊಂದಿಗೆ ತಾಳೆಯಾಗುತ್ತಿಲ್ಲ ಎಂದು ಸರ್ಕಾರ ವಾದಿಸುತ್ತದೆ ಮತ್ತು ಈ ವಾದವನ್ನು ಆಧರಿಸಿ "ದತ್ತಾಂಶಗಳ ಗುಣ ಮಟ್ಟ" ಕಳಪೆಯಾಗಿದೆ ಎಂದು ವಾದಿಸುತ್ತದೆ. ಆದರೆ, ಬೇರೆ ಬೇರೆ ಮೂಲಗಳಿಂದ ಆಯ್ದುಕೊಂಡ ಅಂಕಿ-ಅಂಶಗಳು ತಲಾ ಬಳಕೆ ವೆಚ್ಚದ ಇಳಿಕೆಯ ಅಂಕಿ-ಅಂಶಗಳೊಂದಿಗೆ ಹೋಲುತ್ತವೆ. ಅವು, ಮೇಲೆ ತಿಳಿಸಿದ ಕೃಷಿ ವರಮಾನದ ಅಂಕಿ-ಅಂಶಗಳೊಂದಿಗೆ ಹೋಲುತ್ತವೆ. ಅವು, ದಿನ ನಿತ್ಯವೂ ಒಂದೊಂದು ಹೊಸ ಹೊಸ ಸುದ್ದಿಯೊಂದಿಗೆ ಪ್ರದರ್ಶನಗೊಳ್ಳುತ್ತಿರುವ ದಯನೀಯ ಅರ್ಥವ್ಯವಸ್ಥೆಯ ಭಾರಿ ಇಳಿಕೆಯ ಅಂಕಿ-ಅಂಶಗಳೊಂದಿಗೂ ಹೋಲುತ್ತವೆ. ಐದು ರೂ ಬೆಲೆಯ ಬಿಸ್ಕತ್‌ನ ಸಣ್ಣ ಪೊಟ್ಟಣಗಳ ಮಾರಾಟವೂ ಇಳಿದಿರುವ ಅತಿ ಸರಳ ಅಂಶದೊಂದಿಗೂ ತಲಾ ಬಳಕೆ ವೆಚ್ಚದ ಇಳಿಕೆಯ ಅಂಕಿ-ಅಂಶಗಳು ಹೋಲುತ್ತವೆ.

ದೇಶವು ಒಂದು ಗಂಭೀರ ಆರ್ಥಿಕ ಬಿಕ್ಕಟ್ಟಿನ ಹಿಡಿತದಲ್ಲಿ ಸಿಲುಕಿರುವಾಗ, ಲಭ್ಯ ಮಾಹಿತಿಗಳ ಪ್ರತಿಯೊಂದು ತುಣುಕನ್ನೂ ಬಳಸಿ ಆ ಬಿಕ್ಕಟ್ಟನ್ನು ಅರ್ಥಮಾಡಿಕೊಳ್ಳುವ ಬದಲು ಮೋದಿ ಸರಕಾರ ಬೆಲೆಬಾಳುವ ಮಾಹಿತಿಯನ್ನೇ ಬಚ್ಚಿಡುತ್ತಿದೆ. ಇದು ಈ ಸರಕಾರ ಬಿಕ್ಕಟ್ಟನ್ನು ಪರಿಹರಿಸುವಲ್ಲಿ ಏನೇನೂ ಗಂಭೀರತೆಯಿಂದ ವರ್ತಿಸುತ್ತಿಲ್ಲ ಎಂಬುದನ್ನೇ ತೋರಿಸುತ್ತದೆ.


ಭಾಷಾಂಧತೆ–ಮತಾಂಧತೆಗಳು ಪರಸ್ಪರ ಕೈಜೋಡಿಸುವ ಈ ಪರಿ

ಆರ್. ರಾಮಕೃಷ್ಣ

ಅದು ಬಹುಶಃ 1985 ರ ಕೊನೆ ಇರಬಹುದು, ಅಥವಾ 1986 ರ ಆರಂಭವೂ ಇರಬಹುದು. ಎಂದಿನಂತೆ ನಾನು ಅಂದು (ಆರೆಸ್ಸೆಸ್) ಶಾಖೆಗೆ ಹೋದೆ. ಅಂದು ಶಾಖೆಯಲ್ಲಿ ಆಟಗಳಿಗಿಂತ ಪಾಠವೇ ಹೆಚ್ಚಾಗಿತ್ತು. ಸಂಘದ ಮುಖಂಡರಲ್ಲಿ ಏನೋ ಒಂದು ಹೊಸ ಹುರುಪು, ಸಂಭ್ರಮ ಇದ್ದಂತೆ ನನಗೆ ಕಂಡಿತು. ಅದೇ ಪ್ರಪ್ರಥಮ ಬಾರಿಗೆ 'ಬಾಬರಿ ಮಸೀದಿ ಮತ್ತು ರಾಮಮಂದಿರ'ದ ವಿಷಯ ಅಂದು ನನ್ನ ಕಿವಿಯ ಮೇಲೆ ಬಿತ್ತು. ಅಲ್ಲಿಯವರೆಗೆ ಪತ್ರಿಕೆಗಳಲ್ಲಿ ಎಲ್ಲಿಯೂ ಈ ವಿಷಯ ನನ್ನ ಗಮನಕ್ಕೆ ಬಂದಿರಲಿಲ್ಲ.

ಅಯೋಧ್ಯೆಯಲ್ಲಿ 'ರಾಮಜನ್ಮಭೂಮಿ ಆಂದೋಲನ' ತೀವ್ರ ಸ್ವರೂಪ ಪಡೆಯುತ್ತಿದೆ ಎಂದೂ, ಇಡೀ ದೇಶ ಈಗ ಸಂಘದ ಕಡೆಗೆ ನೋಡುತ್ತಿದೆ ಎಂದು ನಮಗೆ ತಿಳಿಸಲಾಯಿತು. ಈ ವಿಷಯ ಕೇಳಿ ನನಗೆ ತೀವ್ರವಾದ ನಿರಾಶೆಯಾಯಿತು. ಹಸಿವು, ಬಡತನ, ನಿರುದ್ಯೋಗ, ಅಸ್ಪೃಶ್ಯತೆ ಮುಂತಾದ ನೂರಾರು ಸಮಸ್ಯೆಗಳು ದೇಶವನ್ನು ರಣಹದ್ದುಗಳಂತೆ ಕಿತ್ತು ತಿನ್ನುತ್ತಿರುವಾಗ ಅವುಗಳ ಪರಿಹಾರಕ್ಕಾಗಿ ಯಾವ ಕೆಲಸವನ್ನೂ ಮಾಡದ, ಯಾವ ಚಳುವಳಿಯನ್ನೂ ಹಮ್ಮಿಕೊಳ್ಳದ ಸಂಘವು ದೇವರಿಗೆ ದೇವಸ್ಥಾನ ಕಟ್ಟುವ ಚಳುವಳಿ ಹೆಸರಿನಲ್ಲಿ ಮತ್ತೊಂದು ಸಮಸ್ಯೆಯನ್ನು ಸೃಷ್ಟಿಸಲು ಹೊರಟಿತ್ತು. ದೇಶದ ಜನರ ಸೌಹಾರ್ದ ಬದುಕಿಗೆ ಕೊಳ್ಳಿ ಇಟ್ಟು, ಜನರ ಒಗ್ಗಟ್ಟನ್ನು ಮುರಿದು ದ್ವೇಷ ಸೃಷಿಸುವ, ಜನರ ಮನಸ್ಸನ್ನು ಒಡೆಯುವ ರಾಮಮಂದಿರದ ಆಂದೋಲನ ಇಡೀ ದೇಶವನ್ನು ಹೇಗೆ ಒಂದುಗೂಡಿಸಬಲ್ಲದು? ನನಗೆ ಈ ವಿಷಯದಲ್ಲಿ ಯಾವ ಆಕರ್ಷಣೆಯೂ ಕಾಣಲಿಲ್ಲ.

ನಾನು ಆರೆಸ್ಸೆಸ್‌ಗೆ ಹೋಗುವುದು ನಿಲ್ಲಿಸಿದೆ. ಆದರೆ ಆರೆಸ್ಸೆಸ್‌ನ ವಿಚಾರಗಳ ಬಗೆಗೆ ಯೋಚಿಸುವುದು ವಿಮರ್ಶಿಸುವುದು .. .. ಅದೇನೂ ನಿಲ್ಲಲಿಲ್ಲ. ಆರೆಸ್ಸೆಸ್ ವಿಚಾರಗಳ ತಿರುಳೇನು ಎನ್ನುವುದು ನನಗೆ ಈಗ ಇನ್ನೂ ಚೆನ್ನಾಗಿ ಅರಿವಾಗತೊಡಗಿತು. ಆರೆಸ್ಸೆಸ್‌ನ ಸಿದ್ಧಾಂತದ ಕುರಿತ ತಿರಸ್ಕಾರ ಮಾತ್ರ ದಿನೇ ದಿನೇ ನನ್ನಲ್ಲಿ ಗಟ್ಟಿಯಾಗುತ್ತಿತ್ತು. ಇಂತಹ ಹೊತ್ತಿನಲ್ಲಿ ಒಂದು ದಿನ ನಮ್ಮ ಮನೆಗೆ ಒಂದು ಪೋಸ್ಟ್ ಕಾರ್ಡು ಬಂತು. ಅದು 'ಸಾಹಿತಿಗಳ ಕಲಾವಿದರ ಬಳಗ'ದಿಂದ ಬರೆದ ಪತ್ರ. ಕನ್ನಡ ಪರ ಹೋರಾಟದ ಕುರಿತು ಚರ್ಚಿಸಲು ಕಬ್ಬನ್ ಪಾರ್ಕಿನಲ್ಲಿ ಸಂಜೆ ಸಭೆ ಕರೆಯಲಾಗಿದೆ, ಬರಬೇಕು ಎಂದು ಆಹ್ವಾನಿಸುವ ಪತ್ರ ಅದು. ಹಿಂದೆ ಒಮ್ಮೆ ನಾನು ಹನುಮಂತನಗರದ 'ಭಾರತ ಮಾತಾ' ಶಾಲೆಯಲ್ಲಿ ನಡೆದ ಕನ್ನಡ ಚಳುವಳಿ ಕುರಿತ ಶಿಬಿರದಲ್ಲಿ ಪಾಲ್ಗೊಂಡಿದ್ದೆ. ಈ ಸಂಪರ್ಕ ಬಂದಿದ್ದು ಕನ್ನಡ ಚಳುವಳಿಯ ಮುಖಂಡರಾಗಿದ್ದ ನನ್ನ ಮಾಮನವರಿಂದ. ಈಗ ಸಭೆಗೆ ಆಹ್ವಾನಿಸುವ ಪತ್ರ ಬಂದಿತ್ತು. ನಾನು ಸಭೆಗೆ ಹೋದೆ. ವಿಧಾನಸೌಧದ ಎದುರಿಗೆ ಕಾಣುವ ಕಬ್ಬನ್ ಪಾರ್ಕಿನ ಮೂಲೆಯಲ್ಲಿ ಸಭೆ. ಡಾ. ಎಂ. ಚಿದಾನಂದ ಮೂರ್ತಿಯವರು ಸೇರಿದಂತೆ ಹಲವಾರು ಜನ ಸಾಹಿತಿಗಳು, ಕನ್ನಡ ಚಳುವಳಿಯ ಮುಖಂಡರು, ಕಾರ್ಯಕರ್ತರು ಎಲ್ಲ ಸೇರಿ ಒಂದು ಹದಿನೈದು–ಇಪ್ಪತ್ತು ಜನರು ಸಭೆಯಲ್ಲಿದ್ದರು. ಕರ್ನಾಟಕದಲ್ಲಿ ಕನ್ನಡ ಭಾಷೆ ಅನಾದಾರಕ್ಕೆ ಗುರಿಯಾಗುತ್ತಿರುವ ವಿಷಯ, ಕನ್ನಡ ಪರ ಚಳುವಳಿಯನ್ನು ಬಲಗೊಳಿಸಬೇಕಾದ ಅಗತ್ಯದ ಬಗೆಗೆ ಸಭೆಯಲ್ಲಿ ಚರ್ಚೆಯಾಯಿತು. ಹೀಗೆ ನನಗೆ ಕನ್ನಡ ಚಳುವಳಿಯ ನೇರ ಸಂಪರ್ಕ ಏರ್ಪಟ್ಟಿತು.



ಬಾಳ ಠಾಕ್ರೆ

ಕೆಂಪೇಗೌಡ ರಸ್ತೆಯಿಂದ ಮೆಜೆಸ್ಟಿಕ್ ಬಸ್‌ನಿಲ್ದಾಣದ ದಿಕ್ಕಿಗೆ ಹೋಗುವಾಗ, ಬಸ್‌ನಿಲ್ದಾಣದ ಕಡೆಗೆ ಇನ್ನೇನು ಬಲಕ್ಕೆ ತಿರುಗಬೇಕು ಎನ್ನುವ ತಿರುವಿಗೆ ಮುಂಚೆ ಎಡಕ್ಕೆ 'ಸರ್ಪಭೂಷಣ ಮಠ' ಅಂತ ಒಂದು ಮಠ ಇದೆ. ಅಲ್ಲಿನ ಮಠದ ಹಳೆಯ ಕಲ್ಲಿನ ಕಟ್ಟಡದಲ್ಲಿ ಪ್ರತಿ ಬುಧವಾರವೂ ಸಂಜೆ ಕನ್ನಡ ಚಳುವಳಿಯ ಆಸಕ್ತರು, ಕಾರ್ಯಕರ್ತರು ಸಭೆ ಸೇರುತ್ತಿದ್ದರು. ನಾನು ಪ್ರತಿವಾರವೂ ಈ ಸಭೆಗಳಿಗೆ ಹೋಗಲು ಶುರು ಮಾಡಿದೆ. ಹಿರಿಯ ಸಂಶೋಧಕ ಡಾ. ಎಂ. ಚಿದಾನಂದಮೂರ್ತಿ, ಹಿರಿಯ ಸಾಹಿತಿಗಳಾದ ಪು.ತಿ. ನರಸಿಂಹಾಚಾರ್, ಎಂ.ವಿ. ಸೀತಾರಾಮಯ್ಯ ಸೇರಿದಂತೆ ಹಲುವಾರು ಜನ ಸಾಹಿತಿಗಳು, ವಿಜಯಾ ಕಾಲೇಜಿನ ಕನ್ನಡ ಪ್ರಾಧ್ಯಾಪಕ ನಾರಾಯಣ ಮುಂತಾದ ಹಲವು ಕನ್ನಡ ಪಾಧ್ಯಾಪಕರು, ಕನ್ನಡ ಚಳುವಳಿಯ ನಾಯಕರಾದ ರಾ.ನಂ. ಚಂದ್ರಶೇಖರ್ ಸೇರಿದಂತೆ ಕನ್ನಡ ಚಳುವಳಿಯ ಹಲವು ಮುಖಂಡರು ಈ ಸಭೆಗಳಲ್ಲಿ ಪಾಲ್ಗೊಳ್ಳುತ್ತಿದ್ದರು.

ಇಂಥ ಒಂದು ಸಭೆಯಲ್ಲಿ, ಕನ್ನಡವನ್ನು ಸಂಪೂರ್ಣವಾಗಿ ಆಡಳಿತ ಭಾಷೆಯನ್ನಾಗಿ ಮಾಡಬೇಕೆಂಬ ಬೇಡಿಕೆ ಇಟ್ಟು, 1987 ರ ನವೆಂಬರ್ 1 ರಂದು ಚಳುವಳಿ ನಡೆಸಬೇಕೆಂದು ಒಮ್ಮೆ ತೀರ್ಮಾನವಾಯಿತು. ತೀರ್ಮಾನದಂತೆ ನವೆಂಬರ್ 1 ರಂದು ಬೆಳಿಗ್ಗೆ ಸುಮಾರು ನೂರೈವತ್ತು–ಇನ್ನೂರು ಮಂದಿ ಬೆಂಗಳೂರಿನ ಟೌನ್‌ಹಾಲ್ ಮುಂದೆ ಸೇರಿದೆವು. ಕನ್ನಡ ಪರ ಘೋಷಣೆಗಳನ್ನು ಕೂಗುತ್ತಾ ಮೆರವಣಿಗೆ ಹೊರಟಿತು. ಕನ್ನಡದಲ್ಲಿಲ್ಲದ ಬೋರ್ಡ್‌ಗಳಿಗೆ ಕಪ್ಪು ಬಣ್ಣ ಬಳಿಯುವ ಕಾರ್ಯಕ್ರಮವೂ ಇತ್ತು. ಮೆರವಣಿಗೆಯ ಜೊತೆ ಬರುತ್ತಿದ್ದ ಕೆಲವು ಕಾರ್ಯಕರ್ತರು ಈ ಜವಾಬ್ದಾರಿ ಹೊತ್ತಿದ್ದರು. "ಜನರ ಭಾಷೆಯಲ್ಲಿಲ್ಲದ ಆಡಳಿತ ಯಾರಿಗಾಗಿ? ಇದು ಪ್ರಜಾಪ್ರಭುತ್ವವೇ?" ಎಂಬ ಒಂದು ಫಲಕವನ್ನು ನಾನೇ ಮನೆಯಿಂದ ತಯಾರಿಸಿಕೊಂಡು ಬಂದಿದ್ದೆ. ಆ ಫಲಕವನ್ನು ಹಿಡಿದುಕೊಂಡು ನಾನೂ ಮೆರವಣಿಗೆಯಲ್ಲಿ ಹೆಜ್ಜೆಹಾಕಿದೆ. ಮೆರವಣಿಗೆಯು ವಿಮಾ ಸಂಸ್ಥೆಯ ಕಟ್ಟಡ, ಬಾದಾಮಿ ಹೌಸ್ ದಾಟಿ ಅಲಸೂರು ಗೇಟ್ ಪೋಲಿಸ್ ಠಾಣೆಯ ಮುಂದಕ್ಕೆ ಬರುವ ಹೊತ್ತಿಗೆ ನಮ್ಮನ್ನು ಪೋಲೀಸರು ತಡೆಗಟ್ಟಿ ಬಂಧಿಸಿದರು. ಪೋಲೀಸ್ ವ್ಯಾನುಗಳಲ್ಲಿ ನಮ್ಮನ್ನು ಹತ್ತಿಸಿಕೊಂಡು ಯಲಹಂಕ ಠಾಣೆಗೆ ಕರೆದೊಯ್ಯಲಾಯಿತು. ಸಂಜೆಯವರೆಗೂ ಠಾಣೆಯಲ್ಲೇ ಇರಿಸಿಕೊಂಡು ನಂತರ ನಮ್ಮನ್ನು ಬಿಡುಗಡೆ ಮಾಡಲಾಯಿತು. ಇದೇ ನಾನು ಚಳುವಳಿಯಲ್ಲಿ ಪೋಲೀಸ್ ಬಂಧನಕ್ಕೊಳಗಾದ ಮೊತ್ತ ಮೊದಲ ಅನುಭವ. ನಮ್ಮ ಮನೆಯ ರಸ್ತೆಯಲ್ಲಿಯೇ ವೆಂಕಟೇಶ್ ಎಂಬ ಕನ್ನಡ ಚಳುವಳಿಯ ಕಾರ್ಯಕರ್ತರಿದ್ದಾರೆ. ಅವರೀಗ ವಾಟಾಳ್ ನಾಗರಾಜ್ ನೇತೃತ್ವದ ಕನ್ನಡ ಚಳುವಳಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಈ ಚಳುವಳಿಯಲ್ಲಿ ವೆಂಕಟೇಶ್ ಅವರಲ್ಲದೇ ಶ್ರೀನಗರದ ಇನ್ನೂ ಹಲವರು ನನ್ನ ಜೊತೆಗಿದ್ದರು.

ದೂರದರ್ಶನದಲ್ಲಿ ಪ್ರಸಾರವಾಗುವ ಕನ್ನಡ ಕಾರ್ಯಕ್ರಮಗಳ ಅವಧಿ ಹೆಚ್ಚಾಗಬೇಕೆಂದು ಒಮ್ಮೆ ಒಂದು ಚಳುವಳಿ ನಡೆಯಿತು. ಬಹುಶಃ ಆಗೆಲ್ಲಾ ದೂರದರ್ಶನದಲ್ಲಿ ಸಂಜೆ ಸುಮಾರು ಒಂದು ಗಂಟೆಯಷ್ಟು ಕಾಲ ಮಾತ್ರ ಕನ್ನಡ ಕಾರ್ಯಕ್ರಮಗಳು ಪ್ರಸಾರಗುತ್ತಿದ್ದವು. ನಿಗದಿತ ಸಮಯ ಮುಗಿದ ಕೂಡಲೇ 'ಇದೀಗ ದೆಹಲಿಗೆ' ಅಂತ ಒಂದು ಫಲಕ ಟಿ.ವಿ. ಪರದೆಯ ಮೇಲೆ ಮೂಡುತ್ತಿತ್ತು. ಈ ಫಲಕ ಮೂಡಿತೆಂದರೆ ಮುಗಿಯಿತು. ಆ ಮೇಲೆ ಹಿಂದಿಯದೇ ಸಾಮ್ರಾಜ್ಯ.

ಈ ಚಳುವಳಿಯು ಜಂಟಿ ಚಳುವಳಿಯಾಗಿತ್ತು. ಹಲವಾರು ಕನ್ನಡಪರ ಸಂಘಟನೆಗಳು ಈ ಚಳುವಳಿಯಲ್ಲಿ ಒಗ್ಗೂಡಿದ್ದವು. ಬೆಂಗಳೂರಿನ ಮುನಿರೆಡ್ಡಿಪಾಳ್ಯದ ದೂರದರ್ಶನ ಕಛೇರಿಯ ಮುಂದೆ ದೊಡ್ಡ ಪ್ರತಿಭಟನಾ ಪ್ರದರ್ಶನ ನಡೆಯುತು. ಇದು ನಡೆದದ್ದು 1988 ರ ಆರಂಭದಲ್ಲಿ ಇರಬಹುದು. ನಾನಾಗ ಬೆಂಗಳೂರಿನ ಸುಧಾಮನಗರದಲ್ಲಿ ಗಾರ್ಮೆಂಟ್ ಒಂದರಲ್ಲಿ ಕೆಲಸ ಸಹಾಯಕನಾಗಿ ಮಾಡುತ್ತಿದ್ದೆ. ಒಂದು ದಿನ ರಜೆ ಪಡೆದು ನಾನು ಈ ಚಳುವಳಿಯಲ್ಲಿ ಪಾಲ್ಗೊಂಡೆ.



ಡಾ. ಎಂ. ಚಿದಾನಂದ ಮೂರ್ತಿ

ಕಳಚಿದ ಕೊಂಡಿ

ನಾನು ಡಾ. ಎಂ. ಚಿದಾನಂದ ಮೂರ್ತಿಯವರ ನೇತೃತ್ವದ ಕನ್ನಡ ಚಳುವಳಿಯಿಂದಲೂ ದೂರವಾಗಬೇಕಾದ ಒಂದು ಪ್ರಸಂಗ ಒಮ್ಮೆ ನಡೆಯಿತು. ಸರ್ಪಭೂಷಣ ಮಠದ ಬುಧವಾರದ ಸಭೆಯಲ್ಲೊಮ್ಮೆ ಬಹುಶಃ ಹಿರಿಯ ಸಾಹಿತಿಗಳಾದ ಪು.ತಿ.ನರಸಿಂಹಾಚಾರ್ ಅವರು ಒಂದು ವಿಷಯ ಪ್ರಸ್ತಾಪಿಸಿದರು. ಯಾವುದೋ ಒಂದು ಬಹಿರಂಗ ಸಭೆಯಲ್ಲಿ ಚಿದಾನಂದ ಮೂರ್ತಿಯವರು ಮಾತನಾಡುತ್ತಾ "ಕೇಂದ್ರ ಸರಕಾರವು ಇದೇ ರೀತಿಯಲ್ಲಿ ಕರ್ನಾಟಕವನ್ನು ನಿರ್ಲಕ್ಷಿಸುತ್ತಿದ್ದರೆ, ನಾವು ಪ್ರತ್ಯೇಕ ಕರ್ನಾಟಕ ರಾಷ್ಟ್ರಕ್ಕಾಗಿ ಚಳುವಳಿ ಮಾಡಬೇಕಾಗುತ್ತದೆ." ಎಂದು ಎಚ್ಚರಿಸಿದ್ದರಂತೆ. ಪು.ತಿ.ನ. ಅವರು ವಿಷಯ ಪ್ರಸ್ತಾಪಿಸಿ "ಬಹುಶಃ ಚಿದಾನಂದ ಮೂರ್ತಿಯವರು ಆವೇಶದಲ್ಲಿ ಪ್ರತ್ಯೇಕ ರಾಷ್ಟ್ರದ ಕುರಿತ ಮಾತು ಆಡಿರಬಹುದು. ಅವರ ನಿಜವಾದ ಅಭಿಪ್ರಾಯ ಹಾಗಿರಲಿಕ್ಕಲ್ಲ" ಎಂದರು.

ಆದರೆ ಸಭೆಯಲ್ಲಿ ಹಾಜರಿದ್ದ ಚಿದಾನಂದ ಮೂರ್ತಿಯವರು ಈ ಬಗೆಗೆ ಸ್ಪಷ್ಟನೆ ನೀಡಿ, "ನಾನು ಯಾವುದೇ ಭಾವಾವೇಶಕ್ಕೆ ಒಳಗಾಗಿ ಈ ಮಾತನ್ನು ಆಡಿಲ್ಲ. ಚೆನ್ನಾಗಿ ಯೋಚಿಸಿಯೇ ಈ ಮಾತನ್ನು ಹೇಳಿದ್ದೇನೆ. ಈಗಲೂ ಹೇಳುತ್ತೇನೆ. ಕೇಂದ್ರ ಸರಕಾರ ಕರ್ನಾಟಕದ ಬಗೆಗೆ ಇದೇ ರೀತಿಯಾಗಿ ಅನಾದಾರದ ಧೋರಣೆ ಅನುಸರಿಸುತ್ತಿದ್ದರೆ ಪ್ರತೇಕ ಕರ್ನಾಟಕ ರಾಷ್ಟ್ರಕ್ಕಾಗಿ ಚಳುವಳಿ ಘೋಷಣೆ ಮಾಡಬೇಕಾಗುತ್ತದೆ. ನನಗೆ ಕರ್ನಾಟಕದ ಮೂಲಕ ಮಾತ್ರವೇ ಭಾರತ ದೇಶ ಕಾಣುತ್ತದೆ." ಎಂದರು. ಸಭೆಯಲ್ಲಿದ್ದ ಬಹುತೇಕ ಸಾಹಿತಿಗಳು, ಚಳುವಳಿಕಾರರು ಚಿದಾನಂದ ಮೂರ್ತಿಯವರ ಹೇಳಿಕೆಗೆ ವಿರೋಧ ವ್ಯಕ್ತಪಡಿಸಿದರು. ನಾನೂ ಸಹ ನನ್ನ ವಿರೋಧವನ್ನು ದಾಖಲಿಸಿದೆ. ಇದಾದ ಮೇಲೆ ನಾನು ಚಿದಾನಂದ ಮೂರ್ತಿಯವರ ನೇತೃತ್ವದ ಕನ್ನಡ ಚಳುವಳಿಯಲ್ಲಿ ಆಸಕ್ತಿ ಕಳೆದುಕೊಂಡೆ. ಕನ್ನಡ ನುಡಿ, ಕರ್ನಾಟಕದ ಅಭಿವೃದ್ಧಿಗಾಗಿ ಚಳುವಳಿ ತೀವ್ರಗೊಳಿಸಬೇಕೆಂಬ ವಿಷಯದಲ್ಲಿ ನಮ್ಮಲ್ಲಿ ಯಾರಿಗೂ ತಕರಾರು ಇರಲಿಲ್ಲ. ಆದರೆ ಪ್ರತ್ಯೇಕ ಕರ್ನಾಟಕ ರಾಷ್ಟ್ರದ ಬೇಡಿಕೆಯ ಬಗೆಗೆ ಬಹುತೇಕರಿಗೆ ತಕರಾರಿತ್ತು. ದೇಶದ ಐಕ್ಯತೆಗೆ ಮಾರಕವಾಗುವ ಪ್ರತ್ಯೇಕತೆಯ ಬೇಡಿಕೆಯನ್ನು ಅನುಮೋದಿಸಲು ನನ್ನ ಮನಸ್ಸು ಸುತಾರಾಂ ಒಪ್ಪಲಿಲ್ಲ.

ಇದಾದ ಮೇಲೆ ಕಾವೇರಿ ನದಿಯಲ್ಲಿ ಸಾಕಷ್ಟು ನೀರು ಹರಿದು ಹೋಗಿದೆ. ಈ ಚಿದಾನಂದ ಮೂರ್ತಿಯವರು ಆರೆಸ್ಸೆಸ್‌ನ ಎಲ್ಲ ಕೋಮುವಾದಿ ಅಜೆಂಡಾಗಳನ್ನು ಬೆಂಬಲಿಸುವ ಭಟ್ಟಂಗಿಗಳಾಗಿ ಹೋಗಿದ್ದಾರೆ. ಕರ್ನಾಟಕ ರಾಜ್ಯಕ್ಕೆ ಒಂದು ತನ್ನದೇ ಆದ ಪ್ರತ್ಯೇಕ ಬಾವುಟ ಕೂಡ ಬೇಡ ಎಂದು ಚಂಡಿಹಿಡಿದು ವಾದಿಸುವ ಹಂತಕ್ಕೆ ಬಂದು ನಿಂತಿದ್ದಾರೆ. ಮಾನವೀಯತೆಯನ್ನು ಆಧರಿಸಿದ ಭದ್ರ ಸೈದ್ಧಾಂತಿಕ ನೆಲೆಗಟ್ಟು, ತುಳಿತಕ್ಕೊಳ್ಳಗಾದ ಜನರ ಪರವಾದ ಕಾಳಜಿ–ವಿವೇಕವಿಲ್ಲದ ಭಾವಾವೇಶದ ಚಳುವಳಿಗಳು ಛಿದ್ರಕಾರಿ ಚಳುವಳಿಗಳೇ ಆಗುತ್ತವೆ. ಅದು ಭಾಷೆಯ ಹೆಸರಿನ ಚಳುವಳಿಯೇ ಆಗಲಿ, ಮತಧರ್ಮದ ಹೆಸರಿನ ಚಳುವಳಿಯೇ ಆಗಲಿ. ಇಂಥ ಎಷ್ಟೋ ಸಂದರ್ಭಗಳಲ್ಲಿ ಭಾಷಾಂಧತೆ–ಮತಾಂಧತೆಗಳು ಪರಸ್ಪರ ಕೈಜೋಡಿಸುವುದನ್ನು ನೋಡಬಹುದು. ಬಹಳ ಎಚ್ಚರಿಕೆ ಬೇಕು.

('ನಾನೇಕೆ ಆರೆಸ್ಸೆಸ್ ತೊರೆದೆ' ಪುಸ್ತಕದಿಂದ– ಅಧ್ಯಾಯ 10)

●

ಕಾನ್ಪುರ ಕಮ್ಯುನಿಸ್ಟ್ ಸಮ್ಮೇಳನ–1925

ಪುಟ 8 ರಿಂದ

ಸಂಘಟಕರನ್ನು ಆಯ್ಕೆ ಮಾಡಿತು. ಪಕ್ಷದ ಅಧ್ಯಕ್ಷರಾಗಿ ಸಿಂಗಾರವೇಲು, ಅಜಾದ್ ಸೋಭನಿ ಉಪಾಧ್ಯಕ್ಷರಾಗಿ, ಪ್ರಧಾನ ಕಾರ್ಯದರ್ಶಿಗಳಾಗಿ ಎಸ್.ವಿ.ಘಾಟೆ ಮತ್ತು ಜಾನಕಿ ಪ್ರಸಾದ್ ಬಗೇರ್‌ಹಟ್ಟಾ ಆಯ್ಕೆಯಾದರು. ನಾಲ್ಕು ಪ್ರಾಂತಗಳಾದ ಮದ್ರಾಸ್, ಕಾನ್ಪುರ, ಲಾಹೋರ್ ಮತ್ತು ಕಲ್ಕತ್ತಾ ಗಳಿಗೆ ಕಾರ್ಯದರ್ಶಿಗಳಾಗಿ ಅನುಕ್ರಮವಾಗಿ ಕೃಷ್ಣಸ್ವಾಮಿ ಐಯ್ಯಂಗಾರ್, ಸತ್ಯಭಕ್ತ, ಎಸ್.ಡಿ.ಹಸ್ಸನ್ ಮತ್ತು ಮುಜಾಫರ್ ಅಹಮದ್ ಅವರು ಚುನಾಯಿತರಾದರು.

ಪಕ್ಷದ ರಚನೆಗೆ ಕಾರಣವಾದ ಸಂದರ್ಭದ ಬಗ್ಗೆ ಹೇಳುತ್ತಾ, ಕಾನ್ಪುರ ಸಮ್ಮೇಳನದಲ್ಲಿ ಚುನಾಯಿತವಾದ ಕೇಂದ್ರ ಕಾರ್ಯಕಾರಿ ಸಮಿತಿಯು ಮೇ 1927ರ ಬೊಂಬಾಯಿ ಸಭೆಯಲ್ಲಿ ಅಂಗೀಕರಿಸಿದ ವಾರ್ಷಿಕ ವರದಿಯಲ್ಲಿ ಈ ಕೆಳಗಿನಂತೆ ಹೇಳಿತು: "ಕಮ್ಯುನಿಸ್ಟರ ವಿಚಾರಣೆ ನಡೆದು ಶಿಕ್ಷೆಗೊಳಗಾದ ಸ್ಥಳ ಕಾನ್ಪುರವಾಗಿದ್ದು, ನ್ಯಾಯಾಲಯದಲ್ಲಿ ಬಂದಂತಹ ಕಾರ್ಯಕ್ರಮದೊಂದಿಗಿನ ಪಕ್ಷಕ್ಕಾಗಿನ ಹುರುಪು ಅಲ್ಲಿ ಬೇರೆಲ್ಲಾ ಸ್ಥಳಗಳಿಗಿಂತ ಹೋಲಿಕೆಯಲ್ಲಿ ಹೆಚ್ಚು ಇತ್ತು; ಈ ಅವಕಾಶವನ್ನು ಸತ್ಯಭಕ್ತ ಬಳಸಿಕೊಂಡು ಇಂಡಿಯನ್ ಕಮ್ಯುನಿಸ್ಟ್ ಪಾರ್ಟಿ ಎಂಬ ಹೆಸರಿನಲ್ಲಿ ಪಕ್ಷವನ್ನು ಆರಂಭಿಸಿದರು. ಈ ಪಕ್ಷವು ಅನೇಕ ಜನರನ್ನು ಆಕರ್ಷಿಸಿತು ಮತ್ತು ಅವರು ತಮ್ಮನ್ನು ಸದಸ್ಯರನ್ನಾಗಿ ನೋಂದಣಿ ಮಾಡಿಸಿಕೊಂಡರು. ಆದರೆ. ಇವುಗಳ ಹೊರತಾಗಿಯೂ ಅದರ ಕೆಲಸಗಳಲ್ಲಿ ಮಾರ್ಕ್ಸ್‌ವಾದಿ ತಿಳುವಳಿಕೆಗಳಿರಲಿಲ್ಲ, ಅದಕ್ಕೆ ಬದಲಾಗಿ, ಭಾರತದಂತಹ ಕಮ್ಯುನಿಸಂ ಸಾಮಾನ್ಯವಾಗಿ ಅರ್ಥವಾಗಿರದಿರುವ ದೇಶದಲ್ಲಿ ಕಮ್ಯುನಿಸಂ ತತ್ವಕ್ಕೆ ಅಪಖ್ಯಾತಿ ತರುವಂಥ ಅನೇಕ ಕೆಲಸಗಳು ನಡೆದಿವೆ, ಇಲ್ಲಿ ಅವನ್ನು ಹೇಳುವ ಅಗತ್ಯವಿಲ್ಲ. ..ನಾವು ಈ ಸಂಘಟನೆಯನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾದರೂ, ಪಕ್ಷವನ್ನು ಒಂದು ತಾತ್ಕಾಲಿಕ ರೂಪದಲ್ಲಿ ಇಡಲಾಗಿತ್ತು ಮತ್ತು ಒಂದು ನಿರ್ದಿಷ್ಟ ಸಂವಿಧಾನವನ್ನಾಗಲೀ ಅಥವಾ ಕಾರ್ಯಕ್ರಮವನ್ನಾಗಲೀ ರೂಪಿಸಲು ಸಾಧ್ಯವಾಗಲಿಲ್ಲ".

ಭಾರತದ ಕಮ್ಯುನಿಸ್ಟ್ ಪಕ್ಷವೊಂದನ್ನು ರಚಿಸುವಲ್ಲಿ ತಾಷ್ಕೆಂಟ್ ಮೊದಲ ಹೆಜ್ಜೆಯಾಗಿದ್ದರೆ, ಕಾನ್ಪುರ ಕಮ್ಯುನಿಸ್ಟ್ ಸಮ್ಮೇಳನವು ಭಾರತದ ನೆಲದಲ್ಲಿ ಒಂದು ಅಖಿಲ ಭಾರತ ಪಕ್ಷವು ಸ್ಥಾಪನೆಯಾಗುವ ನಿಟ್ಟಿನಲ್ಲಿ ಮೊದಲ ಪ್ರಯತ್ನವಾಗಿತ್ತು.

●

ಅಂಚಿಗೆ ತಳ್ಳಲ್ಪಟ್ಟ ಹಾಗೂ ಅವಕಾಶ ವಂಚಿತ ಆದಿವಾಸಿಗಳು ಮತ್ತು ತಳಸಮುದಾಯಗಳು ಸಂಘಟಿತರಾಗಿ ಹೋರಾಟ ನಡೆಸಿದರೆ ಮಾತ್ರ ಹಕ್ಕುಗಳನ್ನು ಪಡೆಯಲು ಸಾಧ್ಯ: ವಿ.ಜಿ ಶ್ರೀಕರ್ ಭಟ್ ಅಭಿಮತ

ಮತ್ತಿಮನೆ: ಆದಿವಾಸಿಗಳು ಸೇರಿದಂತೆ ಹಲವಾರು ಸಮುದಾಯಗಳು ಅವರ ಹಕ್ಕುಗಳ ರಕ್ಷಣೆಗಾಗಿ ಮತ್ತು ಸಮಾಜದಲ್ಲಿ ಸಮಾನತೆ ಸಾಧಿಸಲು ಸಂಘಟಿತರಾಗಬೇಕು. ಎಂದು ಜನಪರ ಹೋರಾಟಗಾರರಾದ ವಿ.ಜಿ ಶ್ರೀಕರ್ ಭಟ್ ಹೇಳಿದರು.

ಹೊಸನಗರ ತಾಲೂಕಿನ ಮತ್ತಿಮನೆ ಗ್ರಾಮ ಪಂಚಾಯಿತಿ ಸಭಾಂಗಣದಲ್ಲಿ 24 ನವೆಂಬರ್ 2019 ರಂದು ಭಾನುವಾರ ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಇದರ ಜಿಲ್ಲಾ ಸಮ್ಮೇಳನ ಹಾಗೂ ಕಲಾಮೇಳ ಉದ್ಘಾಟಿಸಿ ಮಾತನಾಡಿದರು.

ಜಿಲ್ಲೆಯಲ್ಲಿ ಆದಿವಾಸಿಗಳು ಈ ಹಿಂದೆ ನೆಲೆಸಿರುವ ಬಹುತೇಕ ಪ್ರದೇಶಗಳು ಹಿನ್ನೀರಿನಲ್ಲಿ ಮುಳುಗಡೆಯಾಗಿದೆ. ಇದರಿಂದಾಗಿ ದಿಕ್ಕುಗೆಡಿಗಳಾಗಿದ್ದಾರೆ. ಅಲ್ಲದೆ ಅರಣ್ಯ ಇಲಾಖೆಯ ಕಠಿಣ ನೀತಿಯಿಂದ, ಜಿಲ್ಲಾ ಆಡಳಿತದ ಬೇಜವಾಬ್ದಾರಿತನದಿಂದ ಇವರಿಗೆ ಸಿಗಬೇಕಾದ ಅರಣ್ಯ ಸಂಪನ್ಮೂಲದ ಹಕ್ಕುಗಳು ಸಿಕ್ಕಿಲ್ಲ. ಆದಿವಾಸಿಗಳು ಶೈಕ್ಷಣಿಕವಾಗಿ ಹಿಂದುಳಿದಿದಾರೆ ಇದರಿಂದ ಉದ್ಯೋಗದ ಅವಕಾಶವಿದ್ದರು ಪಡೆಯಲು ಸಾಧ್ಯವಾಗಿಲ್ಲ. ಅಪೌಷ್ಟಿಕತೆ, ರಕ್ತಹೀನತೆ ಇವರನ್ನು ಕಾಡುತ್ತಿದೆ. ಆದರೂ ಸಹ ಇವರಿಗೆ ನೀಡುತ್ತಿರುವ ಪೌಷ್ಟಿಕ ಆಹಾರವನ್ನು ಸಮರ್ಪಕವಾಗಿ ಜಿಲ್ಲಾಡಳಿತ ವಿತರಿಸುತ್ತಿಲ್ಲ. ಅರಣ್ಯ ಹಕ್ಕು ಕಾಯ್ದೆ ಅನ್ವಯ 2,3 ಗುಂಟೆ ಜಮೀನಿಗೆ ಹಕ್ಕುಪತ್ರ ನೀಡಿ ಅನ್ಯಾಯವಾಗಿದೆ. ವಿತರಿಸಿದ ಹಕ್ಕುಪತ್ರಗಳಿಗೆ ಆರ್.ಟಿ.ಸಿ ಒದಗಿಸಿಲ್ಲ. ಇದನ್ನೆಲ್ಲ ನೋಡಿದರೆ ನಮ್ಮನ್ನಾಳುವ ಸರ್ಕಾರ, ಆಡಳಿತ ವರ್ಗಕ್ಕೆ ಇವರ ಪರವಾದ ಹಿತಾಸಕ್ತಿ ಇಲ್ಲವೆಂದು ಸಂಶಯ ಬರುತ್ತದೆ. ಮುಂದಿನ ದಿನಗಳಲ್ಲಿ ಆದಿವಾಸಿಗಳ ಸಮಸ್ಯೆ, ಸವಾಲುಗಳಿಗೆ ಅವರು ಮಾತ್ರ ಹೋರಾಟ ಮಾಡಬೇಕ್ಕಿಲ್ಲ. ಅವರ ಜೊತೆಗೆ ಸಮಾನ ಮನಸ್ಕ ಸಂಘಟನೆಗಳು ಜೊತೆಗೂಡಿ ಆದಿವಾಸಿ, ತಳಸಮುದಾಯಗಳ ಹಕ್ಕುಗಳ ಹೋರಾಟದ ಪರಿಣಾಮ ಆಡಳಿತ ವರ್ಗ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.



ರಾಜ್ಯ ಸಮಿತಿಯ ಸಹ ಸಂಚಾಲಕರಾದ ಎಸ್ ವೈ ಗುರುಶಾಂತ್ ರವರು ಮಾತನಾಡಿ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಕಳೆದ ಹತ್ತು ವರ್ಷಗಳಿಂದ ಆದಿವಾಸಿಗಳ ನಡುವೆ ಚರಿತ್ರಾರ್ಹ ಹೋರಾಟ, ಚಟುವಟಿಕೆ ನಡೆಸಿದೆ. ಆದಿವಾಸಿಗಳು ತಮ್ಮ ವಿಶಿಷ್ಟ ಪರಂಪರೆ ಬಿಡಲು ಆಗದೆ ಇತ್ತ ಆಧುನಿಕ ಪಥದಲ್ಲಿ ಮುಂದುವರಿಯಲು ಆಗದೆ ಅತಂತ್ರರಾಗಿದ್ದಾರೆ. ದೇಶದಲ್ಲಿ ತಂತ್ರಜ್ಞಾನ ಎಷ್ಟೇ ಬೆಳೆದರೂ ಆದಿವಾಸಿಗಳಿಗೆ ಗುಣಮಟ್ಟದ ಆರೋಗ್ಯ, ಶಿಕ್ಷಣ ಒದಗಿಸಲು ಸಾಧ್ಯವಾಗಿಲ್ಲ. ಸರ್ಕಾರದ ಯೋಜನೆಗಳು ವಿಫಲವಾಗುತ್ತಿವೆ. ಆದಿವಾಸಿ ಮಕ್ಕಳ ಶಿಕ್ಷಣದ ಪರಿಸ್ಥಿತಿ ಶೋಚನೀಯವಾಗಿದೆ. ಬಹುದೂರದಿಂದ ಶಾಲೆಗೆ ಬರಬೇಕಿದೆ. ಸುಸಜ್ಜಿತವಾದ ಕಟ್ಟಡಗಳಿಲ್ಲ, ತರಗತಿಗಳಲ್ಲಿ ಮೂಲಸೌಕರ್ಯದ ಕೊರತೆಯಿದೆ. ಶಿಕ್ಷಕರ ಕೊರತೆಯಿದೆ. ಹಾಸ್ಟೆಲ್‌ಗಳಲ್ಲಿ ಅತ್ಯಂತ ಕಳಪೆ ಸೌಲಭ್ಯಗಳು ವಿದ್ಯಾರ್ಥಿಗಳಿಗೆ ಬಾಧಿಸುತ್ತಿದೆ. ಗುಣಮಟ್ಟದ ಶಿಕ್ಷಣವಿಲ್ಲದೆ ಮುಖ್ಯವಾಹಿನಿಯ ಸಮಾಜಗಳಲ್ಲಿ ಸಮಾನವಾಗಿ ಸ್ಪರ್ಧಿಸಲು ಸಾಧ್ಯವಾಗುತ್ತಿಲ್ಲ. ಇದರಿಂದಾಗಿ ಡಿ ದರ್ಜೆಯ ಉದ್ಯೋಗಗಳನ್ನು ಪಡೆಯಲು ಸಹ ಹಿಂದೆ ಬಿದ್ದಿದ್ದಾರೆ. ಉದ್ಯೋಗ ಪಡೆಯಲು ಇರುವ ಷರತ್ತುಗಳನ್ನು ಇವರ ಸಂದರ್ಭದಲ್ಲಿ ಸಡಿಲಗೊಳಿಸಿ ಉದ್ಯೋಗ ನೀಡಬೇಕಿದೆ ಎಂದು ತಿಳಿಸಿದರು.

ಜಿಲ್ಲಾ ಸಮ್ಮೇಳನದಲ್ಲಿ ಶ್ರೀಧರ ನಾಡ ರವರು ವರದಿ ಹಾಗೂ ಮಂಜುಳಾ ರವರು ನಿರ್ಣಯ ಮಂಡನೆ ಮಾಡಿದರು ನಿರ್ಣಯ ಮತ್ತು ವರದಿ ಕುರಿತು ಚರ್ಚಿಸಿ ಸರ್ವಾನುಮತದಿಂದ ಅಂಗೀಕಾರಿಸಲಾಯಿತ್ತು.

ತದನಂತರ ಆದಿವಾಸಿ ಮಕ್ಕಳು ಮತ್ತು ಕಲಾತಂಡಗಳಿಂದ ಕಲಾಪ್ರದರ್ಶನ ನಡೆಯಿತು.

ಜಿಲ್ಲಾ ಸಮಿತಿಯ ನೂತನ ಅಧ್ಯಕ್ಷರಾಗಿ ಮಂಜುನಾಥ ಕಪದೂರು ಇವರು ಪುನರ್ ಆಯ್ಕೆ ಆದರು. ಗೌರವ ಅಧ್ಯಕ್ಷರಾಗಿ ನಾರಾಯಣಪ್ಪ ಗೊಳಗೊಡು, ಪ್ರಧಾನ ಕಾರ್ಯದರ್ಶಿಯಾಗಿ ಸುರೇಶ್ ಕುಂಬಳೆ, ಸಂಘಟನಾ ಕಾರ್ಯದರ್ಶಿಯಾಗಿ ಶ್ರೀಧರ ನಾಡ, ಉಪಾಧ್ಯಕ್ಷರಾಗಿ ಮಂಜುಳಾ, ನಾಗರಾಜ ಏಳಿಗೆ, ಹಾಗೂ ಸಹಕಾರ್ಯದರ್ಶಿಗಳಾಗಿ ಚಿನ್ನಪ್ಪ, ಸವಿತಾ ರವರು ಸೇರಿದಂತೆ 23 ಜನರು ಒಳಗೊಂಡ ಜಿಲ್ಲಾ ಸಮಿತಿ ಸರ್ವಾನುಮತದಿಂದ ಆಯ್ಕೆಯಾಯಿತ್ತು.

ಜಿಲ್ಲಾ ಸಮ್ಮೇಳನದ ನಿರ್ಣಯಗಳು:

1. ಆದಿವಾಸಿಗಳು ಮತ್ತು ಇತರ ಪಾರಂಪರಿಕ ಅರಣ್ಯ ವಾಸಿಗಳಿಗೆ ಅರಣ್ಯ ಹಕ್ಕು ಕಾಯ್ದೆ ಅನ್ವಯ ವೈಯಕ್ತಿಕ ಮತ್ತು ಸಮುದಾಯ ಹಕ್ಕು ಎಲ್ಲಾ ಗ್ರಾಮಗಳಲ್ಲಿ ನೀಡುವುದು.
2. ಜಿಲ್ಲೆಯಲ್ಲಿ ST ಪಟ್ಟಿಗೆ ಸೇರಿಸಬೇಕಾದ ಮೂಲ ಆದಿವಾಸಿಗಳನ್ನು ಸೇರಿಸಿ ಅವರ ಹಕ್ಕುಗಳನ್ನು ಒದಗಿಸುತ್ತದೆ.
3. ಆದಿವಾಸಿಗಳಿಗೆ ಆರ್ಥಿಕವಾಗಿ ಸಬಲರಾಗಲು ಸಾಲ ಸೌಲಭ್ಯ ಸೇರಿದಂತೆ ಕಿರು ಅರಣ್ಯ ಉತ್ಪನ್ನಗಳಿಗೆ ಬೆಂಬಲ ಬೆಲೆ ನೀಡುವುದು.
4. ಆದಿವಾಸಿ ನಿರುದ್ಯೋಗಿ ಯುವಜನರಿಗೆ ಉದ್ಯೋಗ ಕಲ್ಪಿಸುವುದು.
5. ಜಿಲ್ಲೆಯಲ್ಲಿ ಆದಿವಾಸಿ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಒದಗಿಸಲು ನವೋದಯ ಮಾದರಿ ಆದಿವಾಸಿ ವಸತಿ ಶಾಲೆ ಪ್ರಾರಂಭಿಸುವುದು.
6. ಅಡಿಕೆ ತೋಟ ಮತ್ತು ಕೃಷಿ ಆಧಾರಿತ ಮರ ಏರುವ ಕೆಲಸಗಾರರಿಗೆ ಆರ್ಥಿಕ,ಆರೋಗ್ಯದ ಭದ್ರತೆ ಕಲ್ಪಿಸಬೇಕು.

ಸಮ್ಮೇಳನದಲ್ಲಿ ಮಂಜುನಾಥ ಕಪದೂರು ಅಧ್ಯಕ್ಷತೆ ವಹಿಸಿದ್ದರು. ಸಮ್ಮೇಳನದ ಪ್ರಾರಂಭದಲ್ಲಿ ನಮ್ಮನ್ನಗಲಿದ ಆದಿವಾಸಿ ಬಂಧುಗಳಿಗೂ ಹಾಗೂ ಹುಚ್ಚಪ್ಪ ಮಾಸ್ತರ ರವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಶಾರದಾ ಧ್ಯೆಯೇಗೀತೆ ಹಾಡಿದರು, ಸಭೆಯಲ್ಲಿ ಚಿನ್ನಪ್ಪ, ಸುಮಿತ್ರಾ, ನರಸಿಂಹ ಸಂಪೆಕಟ್ಟೆ, ಉಮೇಶ್, ಸುರೇಶ್, ಶ್ರೀಧರ ನಾಡ, ನಾಗರಾಜ ಏಳಿಗೆ ಉಪಸ್ಥಿತರಿದ್ದರು. ಅಣ್ಣಪ್ಪ ಸ್ವಾಗತಿಸಿದರು, ಮಂಜುನಾಥ ಕಾಳಿಕೊಡ್ಲು ಇವರು ವಂದಿಸಿದರು.

ವರದಿ: ಶ್ರೀಧರ ನಾಡ.

ಕರ್ನಾಟಕ ಮತ್ತು ಭಾರತೀಯ ಒಕ್ಕೂಟ ವ್ಯವಸ್ಥೆ ....

ಪುಟ 6 ರಿಂದ

ಸ್ವಾಯತ್ತತೆಗೆ ದಕ್ಕೆ ಉಂಟಾಗುತ್ತಿದೆ ಮತ್ತು ಒಕ್ಕೂಟ ವ್ಯವಸ್ಥೆಯನ್ನು ತಿರಸ್ಕಾರದಿಂದ ನೋಡಲಾಗುತ್ತಿದೆ. ಆದರೆ ಮಕ್ಕಳ ಬದುಕಿನ ಜೊತೆಯಲ್ಲಿ ಹುಡುಗಾಟ ನಡೆಸುವುದು ಅಪಾಯಕಾರಿ ಸಂಗತಿ. ಯಾವುದೇ ದೇಶದಲ್ಲಿಯೂ ಇಂತಹ ಅತೀವ ಕೇಂದ್ರೀಕರಣದ ಉದಾಹರಣೆ ನಮಗೆ ದೊರೆಯುವುದಿಲ್ಲ.

* ಏಕಕಾಲಕ್ಕೆ ಲೋಕಸಭೆ–ವಿಧಾನಸಭೆಗಳ ಚುನಾವಣೆ ಎನ್ನುವುದು ಒಕ್ಕೂಟ ವ್ಯವಸ್ಥೆಗೆ ಅಪಾಯಕಾರಿ ಮಾತ್ರವಲ್ಲ. ಇದು ಪ್ರಾಯೋಗಿಕವೂ ಅಲ್ಲ. ಇದೊಂದು ಜನತಂತ್ರ ವಿರೋಧಿ ಕ್ರಮ. ಮುಂದೆ ಲೋಕಸಭೆ–ವಿಧಾನಸಭೆ ಚುನಾವಣೆಗಳ ಜೊತೆಯಲ್ಲಿ ನಗರ ಸ್ಥಳೀಯ ಸಂಸ್ಥೆಗಳ – ಪಂಚಾಯತ್ ರಾಜ್ ಸಂಸ್ಥೆಗಳ ಚುನಾವಣೆಗಳನ್ನು ದೇಶದಾದ್ಯಂತ ಒಟ್ಟಿಗೆ ಏಕಕಾಲದಲ್ಲಿ ನಡೆಸಲಾಗುತ್ತದೇನು? ಇದು 'ಅಧಿಕಾರದ ಕೇಂದ್ರೀಕರಣ'ವಲ್ಲದೆ ಮತ್ತೇನು ಅಲ್ಲ. ಒಂದು ಬೃಹತ್ ರಾಕ್ಷಸೀ ಸ್ವರೂಪದ ವ್ಯವಸ್ಥೆಯನ್ನು ನಿರ್ಮಿಸುವ ಉದ್ದೇಶ ಇದೇನು? ಎಲ್ಲಿಗೆ ನಮ್ಮ ದೇಶವನ್ನು ಒಯ್ಯಲಾಗುತ್ತಿದೆ? ಏಕೀಕರಣೋತ್ತರ ಕಾಲಾವಧಿಯಲ್ಲಿ ನಮ್ಮ ಒಕ್ಕೂಟ ವ್ಯವಸ್ಥೆಯನ್ನು ಪ್ರಜ್ಞಾಪೂರ್ವಕವಾಗಿ ಶಿಥಿಲಗೊಳಿಸಿ ಕೇಂದ್ರೀಕರಣಕ್ಕೆ ಅವಕಾಶವನ್ನು ಮಾಡಿಕೊಡಲಾಗುತ್ತಿದೆ.

* ಹಿಂದಿಗೆ ರಾಷ್ಟ್ರೀಯ ಭಾಷೆ ಎಂದು ಸಂವಿಧಾನದಲ್ಲಿ ಮನ್ನಣೆ ನೀಡಿಲ್ಲ. ನಮ್ಮ ಸಂವಿಧಾನದ ಪರಿಚ್ಛೇದ 343, 344, 348 ಮತ್ತು 351ರಲ್ಲಿ ಭಾರತೀಯ ಗಣರಾಜ್ಯದ ಅಧಿಕೃತ ಭಾಷೆಗಳೆಂದು ಹಿಂದಿಯನ್ನೂ ಸೇರಿಸಿಕೊಂಡು 22 ಭಾಷೆಗಳಿಗೆ ಮನ್ನಣೆ ನೀಡಲಾಗಿದೆ. ಇವು ಅನುಸೂಚಿತ ಭಾಷೆಗಳು. ಅನುಸೂಚಿತ ಪಟ್ಟಿಯಿಂದ ಹೊರಗೆ 99 ಭಾಷೆಗಳಿವೆ. ಆದರೆ ನಮ್ಮ ಸಂವಿಧಾನದಲ್ಲಿ ಹಿಂದಿ ಭಾಷೆಗೆ ಕೇಂದ್ರದ 'ಅಧಿಕೃತ ಭಾಷೆ' ಎಂಬ ಮನ್ನಣೆ ನೀಡಲಾಗಿದೆ. ಅದನ್ನು ಸಮೃದ್ಧವಾಗಿ ಬೆಳೆಸುವ ಬಗ್ಗೆಯೂ ಸಂವಿಧಾನ ಮಾತನಾಡುತ್ತದೆ. ಕೇಂದ್ರವು ಹೊರಡಿಸುವ ಆದೇಶಗಳು, ಸುತ್ತೋಲೆಗಳು, ವರದಿಗಳು, ಟಿಪ್ಪಣಿಗಳು ದೇಶೀಯ ಭಾಷೆಗಳಲ್ಲಿ ದೊರೆಯುವಂತೆ ಮಾಡುವ ಕ್ರಮವಿಲ್ಲ. ಇದು ಸಂವಿಧಾನದಲ್ಲಿಯೇ ಒರುವ ಒಂದು ಸಮಸ್ಯೆ.

ನಮ್ಮ ಸಂವಿಧಾನದಲ್ಲಿ ಭಾಷೆಗೆ ಸಂಬಂಧಿಸಿದಂತೆ ಅನೇಕ ಸಮಸ್ಯೆಗಳಿವೆ. ಹಿಂದಿ ಭಾಷೆಯನ್ನು ಅನುಸೂಚಿತ ಭಾಷೆಗಳ ಪಟ್ಟಿಯಲ್ಲಿ ಸೇರಿಸಲಾಗಿದೆ, ನಿಜ. ಆದರೆ ಹಿಂದಿಯನ್ನು ಕೇಂದ್ರದ ಅಧಿಕೃತ ಭಾಷೆ ಎಂದು ಘೋಷಿಸಿದೆ. ಇದು ಒಕ್ಕೂಟ ವ್ಯವಸ್ಥೆಯ ಭದ್ರತೆಗೆ ಅಪಾಯಕಾರಿಯಾಗಿದೆ. ದೇಶಿಯ ಭಾಷೆಗಳ ಬೆಳವಣಿಗೆಯ ಬಗ್ಗೆ ಸಂವಿಧಾನ ನಿರ್ದಿಷ್ಟವಾಗಿ ಏನನ್ನೂ ಹೇಳುವುದಿಲ್ಲ.

ಎಲ್ಲಕ್ಕಿಂತ ಮುಖ್ಯವಾಗಿ ಇತ್ತೀಚಿಗೆ ರೂಪಿಸಲಾಗಿರುವ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಹಿಂದಿ ಮತ್ತು ಸಂಸ್ಕೃತ ಭಾಷೆಗಳ ಬೆಳವಣಿಗೆಯ ಜವಾಬ್ದಾರಿಯನ್ನುಕೇಂದ್ರಸರ್ಕಾರಕ್ಕೆವಹಿಸಲಾಗಿದೆ. ಪ್ರಾದೇಶಿಕ ಭಾಷೆಗಳ ಬೆಳವಣಿಗೆಯು ರಾಜ್ಯಗಳ ಜವಾಬ್ದಾರಿಯಾಗಿದೆ. ಒಕ್ಕೂಟ ಘಟಕಗಳಾದ ಪ್ರಾಂತಗಳ ಭಾಷೆಗಳ ಅಭಿವೃದ್ಧಿಯು ಕೇಂದ್ರದ ಜವಾಬ್ದಾರಿಯಲ್ಲವೆ? ಭಾಷಾ ಗಣತಿ 2011ರ ವರದಿಯ ಪ್ರಕಾರ ನಮ್ಮ ದೇಶದಲ್ಲಿ ಸಂಸ್ಕೃತವನ್ನು ತಾಯಿ ಭಾಷೆಯೆಂದು ಘೋಷಿಸಿರುವವರ ಸಂಖ್ಯೆ 24827. ಕರ್ನಾಟಕದಲ್ಲಿ ಅವರ ಸಂಖ್ಯೆ 1218. ಸಂಸ್ಕೃತ ಭಾಷೆಯ ಬೆಳವಣಿಗೆಗೆ ಕೇಂದ್ರ ದೊಡ್ಡ ಕಾಳಜಿ ವಹಿಸುತ್ತಿದೆ. ಇದೇ ಬಗೆಯ ಕಾಳಜಿ–ಆಸಕ್ತಿಯನ್ನು ದೇಶಿಯ ಭಾಷೆಗಳ ಬಗ್ಗೆ ಕೇಂದ್ರವು ತೋರಿಸುತ್ತಿಲ್ಲ. ನಮ್ಮ ಸಂವಿಧಾನದಲ್ಲಿಯೂ ಇದರ ಬಗ್ಗೆ ಅವಕಾಶಗಳಿಲ್ಲ.

ಹಿಂದಿಯನ್ನು ಅಭಿವೃದ್ಧಿ ಪಡಿಸುವುದು ಕೇಂದ್ರದ ಜವಾಬ್ದಾರಿಯಾದರೆ ಅನುಸೂಚಿತ ಪಟ್ಟಿಯಿಂದ ಹೊರಗಿರುವ 99 ಭಾಷೆಗಳಲ್ಲಿ ಕೋಟಿಗಟ್ಟಲೆ ತಾಯಿಭಾಷೆಯಾಡುವ ಜನರಿದ್ದಾರೆ. ಕರ್ನಾಟಕದಲ್ಲಿ ಕನ್ನಡವು ತಾಯಿ ಭಾಷೆಯೆಂದು 2011ರಲ್ಲಿ ಘೋಷಿಸಿರುವವರ ಸಂಖ್ಯೆ 437 ಲಕ್ಷ. ಇದರ ಬೆಳವಣಿಗೆಗೆ ಕೇಂದ್ರದಿಂದ ರಾಜ್ಯ ಅನುದಾನವನ್ನು ಒತ್ತಾಯಿಸುತ್ತಿಲ್ಲ. ಮತ್ತೊಂದು ಎನ್‌ಈಪಿಯ ಅಪಾಯಕಾರಿ ಸಂಗತಿಯೆಂದರೆ ನಮ್ಮ ಶಿಕ್ಷಣ ವ್ಯವಸ್ಥೆಯನ್ನು ಕೇಂದ್ರವು ನಿರ್ವಹಿಸುವ ಕ್ರಮವು ಒಕ್ಕೂಟ ವ್ಯವಸ್ಥೆಗೆ ಅಪಾಯಕಾರಿಯಾಗಿದೆ.

* ಕೇಂದ್ರ–ರಾಜ್ಯಗಳ ನಡುವಿನ ಸಂಬಂಧದಲ್ಲಿ, ಅಂದರೆ ಒಕ್ಕೂಟ ವ್ಯವಸ್ಥೆಯಲ್ಲಿ ಅತ್ಯಂತ ಸೂಕ್ಷ್ಮವೂ ಮತ್ತು ವಿವಾದಾತ್ಮಕವಾದ ಸಂಗತಿಯೆಂದರೆ ಹಣಕಾಸಿನ ಸಂಬಂಧ. ನಮ್ಮ ಸಂವಿಧಾನವು ತೆರಿಗೆ ವಿಧಿಸುವ ಹಕ್ಕನ್ನು ರಾಜ್ಯಗಳಿಗೆ ನೀಡಿತ್ತು. ಈಗ ಜಿಎಸ್‌ಟಿ ಮೂಲಕ ತೆರಿಗೆ ವಿಧಿಸುವ ರಾಜ್ಯಗಳ ಹಕ್ಕನ್ನು ನಾಶ ಮಾಡಲಾಗಿದೆ. ಹಣಕಾಸಿಗೆ ರಾಜ್ಯಗಳು ಕೇಂದ್ರದ ಬಳಿ ಕೈಯೊಡ್ಡಿ ಬೇಡುವಂತಹ ಸ್ಥಿತಿಯನ್ನು ನಿರ್ಮಾಣ ಮಾಡಲಾಗಿದೆ. ಹಣಕಾಸಿಗೆ ಸಂಬಂಧಿಸಿದ ಎಲ್ಲ ಅಧಿಕಾರಗಳನ್ನು ಕೇಂದ್ರವು ತನ್ನ ವಶಕ್ಕೆ ಪಡೆದುಕೊಂಡುಬಿಟ್ಟಿದೆ. ಕೇಂದ್ರ ಹಣಕಾಸು ಆಯೋಗದ ಉದ್ದೇಶಗಳನ್ನು ಕೇಂದ್ರಕ್ಕೆ ಅನುಕೂಲವಾಗುವಂತೆ ಮತ್ತು ರಾಜ್ಯಗಳಿಗೆ ಪ್ರತಿಕೂಲವಾಗುವಂತೆ ಪುನಾರಚಿಸಲಾಗುತ್ತಿದೆ.

ನಮ್ಮ ಸಂವಿಧಾನವು ಶಾಸನಗಳನ್ನು ರಚಿಸುವ ಅಧಿಕಾರಗಳನ್ನು ಕೇಂದ್ರಕ್ಕೆ ಮತ್ತು ರಾಜ್ಯಗಳಿಗೂ ನೀಡಿದೆ. ಆದರೆ ಇಂದು ಜಿ ಎಸ್ ಟಿ ಗೆ ಸಂಬಂಧಿಸಿದಂತೆ ತೆರಿಗೆ ವಿಧಿಸುವ ರಾಜ್ಯಗಳ ಅಧಿಕಾರವನ್ನು ತೆಗೆದುಹಾಕಲಾಗಿದೆ. ಇದು ಒಕ್ಕೂಟ ವ್ಯವಸ್ಥೆಗೆ ತಟ್ಟಿದ ದಕ್ಕೆಯಾಗಿದೆ.

ನಮ್ಮ ಸಂವಿಧಾನದಲ್ಲಿ ಎಲ್ಲಿಯೂ 'ಒಕ್ಕೂಟ' ಎಂಬ ಪದವನ್ನು ಬಳಸಿಲ್ಲ. ಅದರಲ್ಲಿರುವುದು ಯೂನಿಯನ್ ಆಫ್ ಸ್ಟೇಟ್ಸ್. ಈ ಕಾರಣಕ್ಕೆ ನಮ್ಮ ದೇಶವನ್ನು 'ಅರೆ ಒಕ್ಕೂಟ ವ್ಯವಸ್ಥೆ' ಎಂದು ಕರೆಯಲಾಗುತ್ತದೆ.

ರಾಜ್ಯ–ಪ್ರಾಂತಗಳ ಸಂಬಂಧವನ್ನು ಇಂದು ಕೇಂದ್ರವು ಸಮಾನತೆಯ ನೆಲೆಯಲ್ಲಿ ನಿರ್ವಹಿಸುತ್ತಿಲ್ಲ. ಭಾರತದ ಸಂದರ್ಭದಲ್ಲಿ ರಾಷ್ಟ್ರೀಯತೆ ಎನ್ನುವುದು ಪ್ರಾಂತೀಯತೆಯ ನೆಲೆಯಲ್ಲಿಯೇ ಅರ್ಥವನ್ನು ಪಡೆದುಕೊಳ್ಳುವ ಒಂದು ಪ್ರಕ್ರಿಯೆಯಾಗಿದೆ. ರಾಷ್ಟ್ರೀಯತೆ ಎನ್ನುವುದು ಏಕಾಕಾರಿ ಸಂಗತಿಯಲ್ಲ. ಅದಕ್ಕೆ ಬಹುರೂಪಿ ಆಯಾಮವಿದೆ. ನಮ್ಮ ಸಮಾಜದ ಬಹುರೂಪಿ ಸಂಸ್ಕೃತಿಯ ರಕ್ಷಣೆಯಲ್ಲಿಯೇ ರಾಷ್ಟ್ರೀಯತೆಯನ್ನು ಸಾಧಿಸಿಕೊಳ್ಳಬೇಕಾಗಿದೆ. ರಾಷ್ಟ್ರೀಯತೆಯು ಒಂದು ಸಂಯುಕ್ತ ಪರಿಭಾವನೆ. ಪ್ರಾಂತೀಯತೆಯನ್ನು ರಾಷ್ಟ್ರೀಯತೆಯ ವಿರೋಧದ ನೆಲೆಯಲ್ಲಿ ಪರಿಭಾವಿಸಿಕೊಳ್ಳುವ ಅಗತ್ಯವಿಲ್ಲ. ಇವೆರಡೂ ಪರಸ್ಪರ ಪೂರಕ ಸಂಬಂಧದ ಸಂಗತಿಗಳಾಗಿವೆ. ಈ ಬಗೆಯ ಬೆಳವಣಿಗೆಯ ಬಗ್ಗೆ ನಾವು ಜಾಗೃತಿ ವಹಿಸಬೇಕಾಗಿದೆ. ಕರ್ನಾಟಕದ ಸ್ವಾಯತ್ತತೆ ಎಂದರೆ ಅದು ಕೇವಲ ಭಾಷೆಯ ಪ್ರಶ್ನೆಯಲ್ಲ. ಅದು ಇಡೀ ಸಮುದಾಯದ ಬದುಕಿನ ಪ್ರಶ್ನೆ. ಕೇಂದ್ರವು ಒಕ್ಕೂಟ ಧರ್ಮವನ್ನು ಪಾಲಿಸುತ್ತಿಲ್ಲ. ಇದಕ್ಕೆ ಪ್ರತಿಯಾಗಿ ಅದು ಪ್ರಜ್ಞಾಪೂರ್ವಕವಾಗಿ ಕೇಂದ್ರೀಕರಣ ನೀತಿಯನ್ನು ಅನುಸರಿಸುತ್ತಿದೆ. ಈ ಬಗೆಯ ನೀತಿಗಳ ದೂರಗಾಮಿ ಪರಿಣಾಮಗಳ ಬಗ್ಗೆ ನಾವು ಗಮನ ನೀಡಬೇಕಾಗಿದೆ. •

JANASHAKTHI KANNADA VARA PATRIKE DECEMBER 2 - 8 , 2019 Price: Rs. 10/- Date of Publication: 29 NOVEMBER 2019 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283

ಕನಿಷ್ಠ ಜ್ಞಾನ ಇರುವವರಿಗೆ ಟಿಪ್ಪು ಸುಲ್ತಾನ್ ಬಗ್ಗೆ ಅರ್ಥವಾಗುತ್ತದೆ– ರಜಾಕ್ ಉಸ್ತಾದ್ ಟೀಕೆ



ಹಾಸನ: ಹುಲಿಗಳ ಜಯಂತಿಯನ್ನು ಹುಲಿಗಳೇ ಆಚರಣೆ ಮಾಡಬೇಕು ಇಲಿಗಳು ಮಾಡಲು ಸಾಧ್ಯವಿಲ್ಲ ಎಂದು ರಾಜ್ಯ ಸರ್ಕಾರ ಟಿಪ್ಪು ಜಯಂತಿ ನಿಷೇಧಿರುವ ಬಗ್ಗೆ ಮೈಸೂರಿನ ಪೆದ್ದಿ ಉರಿಲಿಂಗ ಮಠದ ಶ್ರೀ ಜ್ಞಾನ ಪ್ರಕಾಶ ಸ್ವಾಮೀಜಿ ಟೀಕಿಸಿದರು.

ನಗರದ ಅಂಬೇಡ್ಕರ್ ಭವನದಲ್ಲಿ ಟಿಪ್ಪು ಸುಲ್ತಾನ್ ಸಂರಕ್ಷಣಾ ಸಮಿತಿ ವತಿಯಿಂದ ಶನಿವಾರ ಆಯೋಜಿಸಿದ್ದ 'ಇತಿಹಾಸನದಲ್ಲಿ ಟಿಪ್ಪು' ಎಂಬ ವಿಷಯ ಕುರಿತ ರಾಜ್ಯ ಮಟ್ಟದ ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದ ಅವರು, ಕೆಲವರು ಇತಿಹಾಸ ತಿರುಚಲು ಹೊರಟಿದ್ದು ಟಿಪ್ಪುವನ್ನು ಮತಾಂದ ಎಂದು ಬಿಂಬಿಸಿ ಜಯಂತಿ ಆಚರಣೆಯನ್ನು ಕೈ ಬಿಟ್ಟಿದ್ದಾರೆ. ಹುಲಿಗಳ ಜಯಂತಿಯನ್ನು ಹಲಿಗಳು ಮಾತ್ರ ಆಚರಿಸಲು ಸಾಧ್ಯ ಇಲಿಗಳು ಕೇವಲ ಬಿಲ ಕೆರೆಯಲು ಮಾತ್ರ ಸೀಮಿತ ಎಂದು ಟಾಂಗ್ ನೀಡಿದರು.

ಟಿಪ್ಪು ಸುಲ್ತಾನ್ ಅವರ ತಲವಾರ್ (ಖಡ್ಗ) ಹಾಗೂ ಅಂಬೇಡ್ಕರ್ ಅವರ ಲೇಖನಿ ಭಾರತ ದೇಶದ ಘನತೆಯನ್ನು ಕಾಪಾಡಿದೆ. ಟಿಪ್ಪು ಆಳ್ವಿಕೆ ಇದ್ದಾಗ ಭಾರತ ದೇಶ ಎಂದು ಗುರುತಿಸಿಕೊಂಡಿರಲಿಲ್ಲ ಎಂದ ಮೇಲೆ ಟಿಪ್ಪು ದೇಶ ವಿರೋಧಿಯಾಗಲು ಹೇಗೆ ಸಾಧ್ಯ? ಟಿಪ್ಪು ಸುಲ್ತಾನ್ ಮುಸ್ಲಿಂ ಎಂಬ ಒಂದೇ ಕಾರಣಕ್ಕೆ ಅವರನ್ನು ವಿರೋಧಿಸುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು.

ಟಿಪ್ಪು ಸುಲ್ತಾನ್ ಬ್ರಿಟಿಷ್ ಗವರ್ನರ್ ಲಾರ್ಡ್ ಕನ್ನಿಂಗ್ ಅವರಿಗೆ ಬರೆದ ಪತ್ರದಲ್ಲಿ ನಾನು ಬ್ರಿಟಿಷ್‌ರ ಗುಲಾಮನಲ್ಲ, ನಾಡಿನ ಗುಲಾಮ ಎಂದು ಉಲ್ಲೇಖ ಮಾಡಿದ್ದಾರೆ. ಆದರೂ ಟಿಪ್ಪುವನ್ನು ದೇಶದ್ರೋಹಿ ಎಂದು ವಿರೋಧ ಮಾಡಲಾಗುತ್ತಿದೆ. ಟಿಪ್ಪುವನ್ನು ವಿರೋಧಿಸುವವರು ಲಾರ್ಡ್ ಕರ್ಜನ್, ಲಾರ್ಡ್ ಕನ್ನಿಂಗ್ ಲಾರ್ಡ್ ವೆಲೆಸ್ಲೀ ಅಂತಹ ಬ್ರಿಟಿಷ್ ಗವರ್ನರ್‌ಗಳಿಗೆ ಹುಟ್ಟಿರಬೇಕು ಎಂದು ಟೀಕಿಸಿದರು.

ಸರ್ಕಾರಿ ಸೇವೆಯಲ್ಲಿ ತಹಸೀಲ್ದಾರ್ ದಫೆದಾರ್, ಹಮಾಲ್ದಾರ್ ಎಂಬ ಹೆಸರುಗಳನ್ನು ಹೆಸರು ಪರಿಚಯಿಸಿದ ಟಿಪ್ಪು ಬೇಡವಾದರೆ ಈ ಪದಗಳ ಬಳಕೆ ಏಕೆ ಬೇಕು ಅವುಗಳನ್ನು ಕಿತ್ತುಹಾಕಲಿ ಎಂದ ಅವರು, ವಿಚಾರ ಸಂಕಿರಣದಲ್ಲಿ ಕೇವಲ ಭಾಷಣ ಕೇಳಿಕೊಂಡು ಮನೆ ಸೇರಿಕೊಂಡರೆ ಸಾಲದು ಟಿಪ್ಪುವಿನ ನೈಜ ಇತಿಹಾಸವನ್ನು ಜನರಿಗೆ ತಿಳಿಸುವ ಕೆಲಸ ಆಗಬೇಕು ಎಂದರು.

ಸಾಹಿತಿ ಬಂಜಗೆರೆ ಜಯಪ್ರಕಾಶ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಬರ ಹಾಗೂ ನೆರೆ ಸಂದರ್ಭದಲ್ಲಿ ಅಧಿಕಾರಕ್ಕೆ ಬಂದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ನೆರೆ ಹಾಗೂ ಬರದ ಬದಲು ಮೊದಲ ಆದ್ಯತೆಯಾಗಿ ಕಂಡಿದ್ದ ಟಿಪ್ಪು ಜಯಂತಿ ನಿಷೇಧ. ಹಿಂದೂವಾದಿ ಚರಿತ್ರೆ ಬರೆಯಬೇಕು ಎಂಬುದು ಅವರ ಉದ್ದೇಶ, ಟಿಪ್ಪುವನ್ನು ವೈಭವೀಕರಿಸಿದರೆ ಧರ್ಮ ಅಡ್ಡ ಬರುತ್ತದೆ ಕಾರಣಕ್ಕೆ ರಾಜಕೀಯ ಲಾಭ ಪಡೆಯಲು ಟಿಪ್ಪು ಜಯಂತಿ ವಿವಾದ ಸೃಷ್ಟಿಸಲಾಗುತ್ತಿದೆ ಎಂದು ವಿಷಾದ ವ್ಯಕ್ತಪಡಿಸಿದರು.

ಬ್ರಿಟೀಷರು ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸಲು ದುರಾಕ್ರಮಣ ಮತ್ತು ಪುನರ್ ಸ್ಥಾಪನೆ ಹೆಸರಿನಲ್ಲಿ ಟಿಪ್ಪುವನ್ನು ಕಳನಾಯಕನನ್ನಾಗಿ ಚಿತ್ರಿಸಿದರು. ಮೈಸೂರು ಸಂಸ್ಥಾನದಲ್ಲಿ ಹುಲಿ ಎಂದು ಕರೆಸಿಕೊಳ್ಳುತ್ತಿದ್ದವನ ಮುಖಕ್ಕೆ ಮಸಿ ಬಳಿಯಬೇಕು ಎಂದು ಸಂಚು ರೂಪಿಸಿದ್ದರು. ಅದೇ ರೀತಿ ಈಗ



ಹಿಂದೂ ವಾದಿಗಳು ಕೂಡ ಬ್ರಿಟಿಷರ ಇತಿಹಾಸದ ಆಧಾರದ ಮೇಲೆ ಟಿಪ್ಪು ಜಯಂತಿ ಆಚರಣೆ ಬೇಡ ಎಂದು ಹೇಳುತ್ತಿರುವುದು ದುರಂತ ಎಂದರು.

ಕಿತ್ತೂರು ರಾಣಿ ಚನ್ನಮ್ಮ ಹಾಗೂ ಝಾನ್ಸಿ ರಾಣಿ ಲಕ್ಷ್ಮೀಬಾಯಿ, ತಾಂತ್ಯಟೋಪಿ ಮತ್ತಿತರರು ತಮ್ಮ ಸಾಮ್ರಾಜ್ಯ ರಕ್ಷಣೆಗಾಗಿ ಬ್ರಿಟಿಷರ ವಿರುದ್ಧ ಹೋರಾಟ ಮಾಡಿದ್ದರು. ಅವರನ್ನು ಸ್ವಾತಂತ್ರ್ಯ ಹೋರಾಟಗಾರರು ಎಂದು ಕರೆಯುವಾಗ ಟಿಪ್ಪು ಸುಲ್ತಾನ್‌ನ್ನು ಏಕೆ ಸ್ವಾತಂತ್ರ್ಯ ಹೋರಾಟಗಾರ ಎಂದು ಕರೆಯಬಾರದು, ಧರ್ಮಕ್ಕಿಂತ ದೇಶ ದೊಡ್ಡದು ಎಂಬ ವಿಚಾರವನ್ನು ನಾವು ಮನಗಾಣಬೇಕು ಎಂದರು.

ಹೈದರಾಬಾದ್ ಕರ್ನಾಟಕ ಹೋರಾಟ ಸಮಿತಿ ರಾಜ್ಯ ಉಪಾಧ್ಯಕ್ಷ ರಜಾಕ್ ಉಸ್ತಾದ್ ಮಾತನಾಡಿ, ಬ್ರಿಟೀಷರ ವಿರುದ್ಧ ಹೋರಾಟ ಮಾಡಿದ ದೇಶಿ ರಾಜರುಗಳನ್ನು ಸ್ವಾತಂತ್ರ್ಯ ಹೋರಾಟಗಾರರು ಎಂದು ಕರೆಯಲಾಗುತ್ತದೆ. ಟಿಪ್ಪು ಕೂಡ ಬ್ರಿಟಿಷರ ವಿರುದ್ಧ ಹೋರಾಟ ಮಾಡಿದ್ದ ಆದರೆ ಈತನನ್ನು ಯಾಕೆ ಸ್ವಾತಂತ್ರ್ಯ ಹೋರಾಟಗಾರ ಎಂದು ಪರಿಗಣಿಸುವುದಿಲ್ಲ ಎಂದು ಪ್ರಶ್ನಿಸಿದರು.

ಬ್ರಿಟಿಷರಿಗೆ ಸಿಂಹಸ್ವಪ್ನವಾಗಿ ಕಾಡುತ್ತಿದ್ದ ಟಿಪ್ಪು ಸುಲ್ತಾನ್ ಆಳ್ವಿಕೆ ಮಾಡಿದ್ದು ಕೇಲವ 17 ವರ್ಷ ಮಾತ್ರ, ಅವನು ಆಳ್ವಿಕೆ ಮಾಡಿ ಇಂದಿಗೆ 269 ವರ್ಷ ಕಳೆದರೂ ನಮ್ಮ ದೇಶದ ಕೆಲವರಿಗೆ ಇಂದಿಗೂ ಕಾಡುತ್ತಿದ್ದಾನೆ. ಟಿಪ್ಪು ಎಂದೂ ಕೂಡ ಧರ್ಮ ವಿರೋಧಿಯಾಗಿರಲಿಲ್ಲ. ಅವನ ಆಡಳಿತದ ವಿರುದ್ಧ ಇದ್ದವರ ವಿರೋಧಿಯಾಗಿದ್ದ. ಕೂಡಗಿನಲ್ಲಿ ನಿರಂತರವಾಗಿ ಏಳುತ್ತಿದ್ದ ಧಂಗೆಯನ್ನು ನಿಯಂತ್ರಿಸಲು ಕೊಡಿನ ಮೇಲೆ ಅನೇಕ ಯುದ್ಧಗಳನ್ನು ಮಾಡಿದ್ದಾನೆ. ಯುದ್ಧದಲ್ಲಿ ಕೊಡವರು ಸಾವನಪ್ಪಿದ್ದಾರೆ. ಟಿಪ್ಪು ಒಬ್ಬ ಆಡಳಿತಗಾರನಾಗಿ ತಾನು ಮಾಡಬೇಕಾದ ಕೆಲಸವನ್ನು ಮಾಡಿದ್ದಾನೆ. ಅದನ್ನು ಧರ್ಮ ವಿರೋಧಿ ಎಂದು ಏಕೆ ಕರೆಯಬೇಕು ಎಂದು ಪ್ರಶ್ನಿಸಿದರು.

ವಿರೋಧಕ್ಕಾಗಿ ವಿರೋಧ ಮಾಡುವ ಮನಸ್ಥಿತಿಗಳು ಇಂದು ಹೆಚ್ಚಾಗುತ್ತಿವೆ. ಇತಿಹಾಸವನ್ನು ಧರ್ಮ ಅಥವಾ ಪಕ್ಷದ ಆಧಾರದಲ್ಲಿ ಓದದೆ ಇತಿಹಾಸದ ಆಧಾರದಲ್ಲಿ ಓದಬೇಕು. ಟಿಪ್ಪುವಿನ ಬಗ್ಗೆ ಸುಳ್ಳು ಪ್ರಚಾರ ಮಾಡಿ ವಿವಾದ ಸೃಷ್ಟಿಸಲಾಗುತ್ತಿದೆ. ಇದರಿಂದ ಟಿಪ್ಪುವಿನ ನೈಜ ವಿಚಾರಗಳು ಹೆಚ್ಚು ಪ್ರಚಾರವಾಗುತ್ತಿವೆ ಎಂದರು.

ಟಿಪ್ಪುವಿನ ಇತಿಹಾಸವನ್ನು ಪಠ್ಯಪುಸ್ತಕದಿಂದ ಅಳಿಸಿ ಹಾಕಬಹುದು ಆದರೆ ಜನಮಾನಸದಲ್ಲಿ ಟಿಪ್ಪು ಅಚ್ಚಳಿಯದ ದೊರೆಯಾಗಿ ಉಳಿದಿದ್ದಾನೆ. ಅದನ್ನು ಅಳಿಸಿಹಾಕಲು ಯಾರಿಂದಲೂ ಸಾಧ್ಯವಿಲ್ಲ. ಅವನು ಮಾಡಿರುವ ಅಭಿವೃದ್ಧಿ ಕಾರ್ಯಗಳನ್ನು ಅಳಿಸಿ ಹಾಕಲು ಸಾಧ್ಯವಿಲ್ಲ. ಹಿಂದೆ ಕೇವಲ ಮೈಸೂರು ಪ್ರಾಂತ್ಯದ ನಾಲ್ಕು ಜಿಲ್ಲೆಯಲ್ಲಿ ಮಾತ್ರ ಟಿಪ್ಪು ಜಯಂತಿ ಆಚರಣೆ ಮಾಡಲಾಗುತ್ತಿತ್ತು. ಟಿಪ್ಪು ವಿವಾದ ಬುಗಿಲೆದ್ದ ನಂತರ ರಾಜ್ಯ ಸೇರಿದಂತೆ ಪಕ್ಕದ ಆಂಧ್ರ ಹಾಗೂ ಕೇರಳ ರಾಜ್ಯದಲ್ಲೂ ಟಿಪ್ಪು ಜಯಂತಿ ಆಚರಣೆ ಮಾಡಲಾಗುತ್ತಿದೆ ಎಂದರು.

ಟಿಪ್ಪು ಮಾಡಿದ ಕೆಲಸಗಳನ್ನು ನೆನಪು ಮಾಡಿಕೊಳ್ಳಲು ಜಯಂತಿ ಆಚರಣೆ ಮಾಡುತ್ತಿದ್ದೇವೆ ಹೊರತು ಟಿಪ್ಪುವನ್ನು ಪೂಜೆ ಮಾಡುವುದಕ್ಕಲ್ಲ. ಬ್ರಿಟಿಷರ ವಿರುದ್ಧ ಹೋರಾಟ ಮಾಡಿದ ಕಾರಣಕ್ಕೆ ಆತನ ಬಗ್ಗೆ ತಿಳಿದುಕೊಳ್ಳಲು ಜಯಂತಿ ಆಚರಣೆ ಬೇಕೆ ಹೊರತು ಆತ ಮುಸ್ಲಿಂ ದೊರೆ ಎಂಬ ಕಾರಣಕ್ಕಾಗಿ ಅಲ್ಲ ಎಂದರು.

ಟಿಪ್ಪು ಸಾಮ್ರಾಜ್ಯಕ್ಕಾಗಿ ಟಿಪ್ಪು ಹೋರಾಟ ಮಾಡಿದ್ದರೆ ಬ್ರಿಟೀಷರ ವಿರುದ್ಧ ನಾಲ್ಕು ಹೋರಾಟ ಮಾಡುವ ಅಗತ್ಯವಿರಲಿಲ್ಲ ಮೂರನೇ ಅಂಗ್ಲ ಮೈಸೂರು ಯುದ್ಧದಲ್ಲಿ ತಮ್ಮ ಮಕ್ಕಳನ್ನು ಒತ್ತೆ ಇಡುತ್ತಿರಲಿಲ್ಲ. ಟಿಪ್ಪುವನ್ನು ಅಭಿವೃದ್ಧಿಯ ಪ್ರತೀಕವಾಗಿ ನೋಡಬೇಕೆ ಹೊರತು ಒರ್ವ ಮುಸ್ಲಿಂ ದೊರೆ ಎಂದು ನೋಡಿದರೆ ಅದು ದೇಶಕ್ಕೆ ಮಾಡಿದ ಅಪಚಾರವಾಗುತ್ತವೆ ಎಂದರು.

ಇತಿಹಾಸಕಾರ ಧರ್ಮೇಂದ್ರ ಕುಮಾರ್ ಅರೇನಹಳ್ಳಿ, ಸಿಐಟಿಯು ರಾಜ್ಯ ಕಾರ್ಯದರ್ಶಿ ಧರ್ಮೇಶ್, ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಎಚ್.ಎಂ ಶಿವಣ್ಣ ಡಿವೈಎಫ್ಐ ರಾಜ್ಯ ಅಧ್ಯಕ್ಷರಾದ ಮುನೀರ್ ಕಾಟಿಪಳ್ಳ ಇತರರು ಇದ್ದರು.

ಕಾರ್ಯಕ್ರಮದ ನಿರ್ವಹಣೆಯನ್ನು ಅಬ್ದುಲ್ ಸಮದ್ ನಿರ್ವಹಿಸಿದರು, ಪೃಥ್ವಿ ಯವರು ಸ್ವಾಗತಿಸಿದರು, ಮುಬಷಿರ್ ಅಹಮದ್ ರವರು ವಂದಿಸಿದರು.

ಹಾರ್ದಿಕ ಶುಭಾಶಯಗಳು



ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿನಲ್ಲಿ 1950–60 ರ ದಶಕದಲ್ಲಿ ನಡೆದ ಜೋಡಿ ಇನಾಮ್ತಿ ಭೂ ಪದ್ಧತಿಯ ವಿರುದ್ಧ ಭೂಹೀನರಿಗೆ ಭೂಮಿ ಒಡೆತನದ ಹಕ್ಕು ಸಿಗಬೇಕೆಂದು ಪ್ರಬಲ ಹೋರಾಟ ಸಂಘಟಿಸಿ ಯಶಸ್ಸು ಪಡೆಯಲು ಸಾಧ್ಯವಾಗಿತ್ತು. ಇದರ ನಾಯಕತ್ವ ವಹಿಸಿ ಶ್ರಮಿಸಿದವರಲ್ಲಿ ಅತ್ಯಂತ ಪ್ರಮುಖರು ರಾಮಸ್ವಾಮಿ ಪಾಳ್ಯದ ದಿವಂಗತ ಶ್ರೀ ಆರ್. ರಾಮಸ್ವಾಮಿಯವರು. ರಾಮಸ್ವಾಮಿ ಮತ್ತು ಶ್ರೀಮತಿ ಲಕ್ಷ್ಮಿದೇವಮ್ಮ ಅವರ ಮೊಮ್ಮಗ, ಆರ್.ಹೆಚ್.ಪ್ರದೀಪ್ ಕುಮಾರ್ ಅವರ ವಿವಾಹ ಕುಮಾರಿ ಎಂ.ಸೌಮ್ಯಶ್ರೀ ಯವರೊಂದಿಗೆ ಇದೇ 2019 ನವೆಂಬರ್ 17 ರಂದು ಬೆಂಗಳೂರಿನಲ್ಲಿ ಜರುಗಿತು. ಪ್ರದೀಪ್ ವೃತ್ತಿಯಲ್ಲಿ ಯುವ ವಕೀಲ. ಹೊಸಕೋಟೆಯ ಸಿಪಿಐ(ಎಂ) ಪಕ್ಷದ ಕಾರ್ಯದರ್ಶಿ ಹಾಗೂ ಅಖಿಲ ಭಾರತ ವಕೀಲರ ಸಂಘದ ಬೆಂಗಳೂರು ಜಿಲ್ಲಾ ಅಧ್ಯಕ್ಷರೂ ಆಗಿರುವ ಕಾಮ್ರೇಡ್ ಆರ್.ಆರ್. ಹರಿಂದ್ರ ಮತ್ತು ಶ್ರೀಮತಿ ಗೀತಾ ಅವರ ಪುತ್ರ.

ದಿವಂಗತ ಆರ್. ರಾಮಸ್ವಾಮಿಯವರ ಒಟ್ಟು ಕುಟುಂಬ ಸಿಪಿಐ(ಎಂ) ಪಕ್ಷದ ಮತ್ತು ಎಡ ಹಾಗೂ ಪ್ರಗತಿಪರ ಚಳುವಳಿಯ ಬೆಂಬಲಿಗರು. ವಿಶೇಷವಾಗಿ ಜನಶಕ್ತಿ ಕನ್ನಡ ವಾರಪತ್ರಿಕೆಯ ಓದುಗರು, ಹಿತೈಷಿಗಳು. ಈ ವಿವಾಹದ ಸಂದರ್ಭದಲ್ಲಿ 10 ಸಾವಿರ ರೂಪಾಯಿಗಳನ್ನು ಜನಶಕ್ತಿ ಪತ್ರಿಕೆಗೆ ಸಂತಸದ ಕೊಡುಗೆಯಾಗಿ ನೀಡಿದ್ದಾರೆ.



ನೂತನ ದಂಪತಿಗಳಿಗೆ ಪತ್ರಿಕೆಯ ಹಾರ್ದಿಕ ಶುಭಾಶಯಗಳು. ಮತ್ತು ಅವರ ಕುಟುಂಬಕ್ಕೆ ಧನ್ಯವಾದಗಳನ್ನು ತಿಳಿಸಿದೆ.

JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**